ಉಚಿತವಲ್ಲ. ಪ್ರಾಪರ್ಟಿ ಗೈನ್‌ಗೋಸ್ಕರ ಅನೇಕ ಕಡೆ ಇದು ನಡೆದಿದೆ. ಇದರ ಎನ್‌ಕ್ವೈರಿ ಮೇಲೆ ಏನು ನಡೆದಿದೆ ಎಂದು ಹೇಳುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ನಾವು ಫರ್ಮಾಗಿ ಡೀಲ್ ಮಾಡುವ ಅವಶ್ಯಕತೆ ಇದೆ. ವಿಶೇಷವಾಗಿ ಅಧಿಕಾರಿಗಳಿಗೂ ನಾವು ಜವಾಬ್ದಾರಿ ಕೊಟ್ಟು ನೋಡಬೇಕಾಗಿದೆ. ಮಾನ್ಯ ಸಿಂಧ್ಯರವರ ಹೇಳಿದ ಹಾಗೆ ಜೈಲಿನಲ್ಲಿದ್ದು ಈ ಆ್ಯಕ್ಟಿವಿಟೀಸ್ ನಡೆಸುವವರನ್ನು ನಾವು ಪತ್ತೆ ಹಚ್ಚಬೇಕಾಗುತ್ತದೆ. ಆ ಕೆಲಸವನ್ನು ನಾವು ಮಾಡುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ:— ಕಾನೂನು ಸುವ್ಯವಸ್ಥೆ ಬಗ್ಗೆ ಮಾನ್ಯ ಗೃಹ ಸಚಿವರು ಹೇಳಿದರು. ಬೆಂಗಳೂರಿನಲ್ಲಿ ಪೀಣ್ಯ ಗಲಭೆ ಆಗಿದ್ದಕ್ಕೆ ಯಾರು ಕಾರಣಕರ್ತರಲ್ಲ, ಅಲ್ಲಿನ ಕೈಗಾರಿಕೆಯಲ್ಲಿ ಕೆಲಸ ಮಾಡುವ ಕೆಲಸಗಾರರು ಇದನ್ನು ಮಾಡಿರುವುದು ಎಂದು. ಒಂದು ವರ್ಷದ ಹಿಂದೆ ಸುಮಾರು 500 ಜನ ಪೋಲೀಸರಿಗೆ ಬೆಂಗಳೂರಿಗೆ ಹೊಸದಾಗಿ ಅಪಾಯಿಂಟ್ ಮಾಡಿದ್ದರೂ, ಇವತ್ತಿಗೂ ಅಪಾಯಿಂಟ್ ಆರ್ಡರ್ ಕೊಟ್ಟಿಲ್ಲ. ಕೂಡಲೇ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟರೆ ಆ ಪೋಲಿಸ್ ಸಿಬ್ಬಂದಿ ಈ ಕಾರ್ಯ ನಿರ್ವಹಿಸಿದರೆ ಇಂತಹ ಮೊಕದ್ದಮೆಗಳು ಆಗುವುದಿಲ್ಲವೆಂದು ಮಾನ್ಯ ಗೃಹ ಸಚಿವರರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ಆ ರಿಕ್ರೂಟ್‌ಮೆಂಟ್ ನಿಲ್ಲಿಸಿರುವುದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮೊನ್ನೆ ಸಿಂಧ್ಯರವರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಪ್ರೊಸೀಜರಲ್ ಲ್ಯಾಪ್ಸಸ್ ಆಗಿದೆ ಎಂದು ವರದಿ ಬಂದಿದೆ. ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್:— ಏನಾದರೂ ಮಾಡಿ ಜನರಿಗೆ ಧೈರ್ಯ ಕೊಡಿ. ಜನ ರಾತ್ರಿ ಹೊತ್ತು ಒಂಟಿಯಾಗಿ ಮನಯಲ್ಲಿರುವ ಹಾಗೆ ಮಾಡಿ ಅಷ್ಟೆ ನಾವು ಹೇಳುವುದು.

7. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ, ಕೃಷಿ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ವಿಶಿಷ್ಟವಾದ ನಮ್ಮ ದೇಶದ ಪರಿಸ್ಥಿತಿಯಲ್ಲಿ ಸುಮಾರು 70 ಪಾಲು ನಾವೆಲ್ಲಾ ಕೃಷಿ ಮೇಲೆ ಅವಲಂಬನೆ ಆಗುವಂತಹ ಸನ್ನಿವೇಶದಲ್ಲಿ ವಿಶ್ವ ವ್ಯಾಪಾರ ಸಂಘಟನೆ ಗ್ಯಾಟ್ ಒಪ್ಪಂದದ ಮುಂದುವರೆದ ಎರಡನೇ ಹಂತದ ಈ ಸನ್ನಿವೇಶದಲ್ಲಿ....

(ಗೊಂದಲ)

ಈ ಸದನವು ಹೆಚ್ಚಿನ ಅವಧಿಯನ್ನು ಕೃಷಿ ಬಗ್ಗೆ ಮಾತನಾಡುವುದಕ್ಕೆ ಕಳೆದಿದೆ. ಇದು ಅವಶ್ಯವೂ ಹೌದು ಎಂದು ನಾನು ಭಾವಿಸಿದ್ದೇನೆ. ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ಇನ್ನು ಅದಕ್ಕೆ ಎಷ್ಟು ಪ್ರಾಮುಖ್ಯತೆ ಸಮಯ ವಿನಿಯೋಗ ಆಗಬೇಕಾಗಿತ್ತು ಅದು ಆಗುತ್ತಿಲ್ಲವೆಂದು ನನ್ನ ಭಾವನೆ. ಕೃಷಿಗೆ ಭವಿಷ್ಯವಿಲ್ಲವೆಂದರೆ ಬಹುತೇಕ ನಮಗೆ ಮತ್ತು ನಮ್ಮ ದೇಶಕ್ಕೆ ಭವಿಷ್ಯ ಇಲ್ಲ. ಕೃಷಿ ವಲಯ ಸಂಕಷ್ಟದಲ್ಲಿ ಸಿಲುಕಿದೆ ಎಂದರೆ, ಕೈಗಾರಿಕೆಯಾಗಲಿ, ದೇಶದ ಆರ್ಥಿಕ ಪರಿಸ್ಥಿತಿಯಾಗಲೀ ಬಹಳಷ್ಟು ಸಂಕಷ್ಟಕ್ಕೆ ಸಿಗುತ್ತದೆ. ಕೊನೆ ಹಂತಕ್ಕೆ ನಾವೆಲ್ಲಾ ಬಂದಿದ್ದೇವೆ ಎಂದರೂ ಅತಿಶಯೋಕ್ತಿ ಆಗಲಾರದು ಎಂದು ನಾನು ಭಾವಿಸುತ್ತೇನೆ. ನಾನು ಬರದ ಬಗ್ಗೆ ಮಾತನಾಡುವಾಗ ಅನೇಕ ವಿಚಾರಗಳನ್ನು ಹಿಂದಿನ ಸಭೆಯಲ್ಲಿ ಹೇಳಿದ್ದೇನೆ. ಇವತ್ತು ನಾವು ಹೊಸ ಆರ್ಥಿಕ ವ್ಯಾಪಾರ ನೀತಿಯನ್ನು ಜಾಗತೀಕರಣದ ನೀತಿಯನ್ನು ಒಪ್ಪಿಕೊಂಡಾಗ ಅದರ ಗಂಭೀರವಾದ ಪರಿಣಾಮದಿಂದ ಕೃಷಿ ವಲಯದಲ್ಲಿ ಅತಂತ್ರತೆ ಬೆಳೆದಿದೆ ಎಂದರೆ ತಪ್ಪಾಗುವುದಿಲ್ಲ.

3.40 ಪಿ.ಎಂ.

ಇಂದು ಖಾಸಗಿ ಕಂಪನಿಗಳ ವ್ಯಾಪಾರಿ ವರ್ಗಕ್ಕೂ ಕೂಡ ಇವೊತ್ತು ಏನು ಮಾಡಬೇಕು ಮತ್ತು ಎನನ್ನು ಮಾಡಿದರೆ ವ್ಯಾಪಾರಿ ರಂಗ ಸರಿಯಾಗುತ್ತದೆ ಎನ್ನುವ ಬಗ್ಗೆ ಸರಿಯಾದ ವಿಚಾರವಾಗಲಿ ಅಥವಾ ಯೋಜನೆಯಾಗಲಿ ಗೊತ್ತಾಗದ ಪರಿಸ್ಥಿತಿ ಇದೆ. ಎಂದಿಗೂ ಕೂಡ ಬಾಧೆಗೊಳಗಾಗುವುದಿಲ್ಲ ಮತ್ತು ನಷ್ಟವನ್ನು ಅನುಭವಿಸುವುದಿಲ್ಲವೆಂದುಕೊಂಡ ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳೂ ಕೂಡ ಇಂದು ಸಂಕಷ್ಟಕ್ಕೆ ಒಳಗಾಗಿವೆ. ಇದು ಬಹು ರಾಷ್ಟ್ರೀಯ ಕಂಪನಿಗಳಿಂದಾಗಿ ಆಗಿರಬಹುದು ಅಥವಾ ನಮ್ಮ ದೇಶದ ಆರ್ಥಿಕ ವಲಯದಲ್ಲಿ ಒಟ್ಟಾರೆ ಬೇಡಿಕೆ ಹಿನ್ನಲೆಯೊಳಗೆ ದೊಡ್ಡ ದೊಡ್ಡ ಅಂತರಾಷ್ಟ್ರೀಯ ಕಂಪನಿಗಳ ತೀವ್ರತರವಾದ ಸ್ಪರ್ಧೆಯಿಂದಾಗಿ ಇಂದು ದೊಡ್ಡ ಕಾರ್ಖಾನೆಗಳವರು ಕೂಡ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅನೇಕ ಅಂಥ ದೊಡ್ಡ ಸಂಸ್ಥೆಗಳು ಭವಿಷ್ಯದಲ್ಲಿ ನಷ್ಟ ಅನುಭವಿಸಿ ಬಂದ್ ಆಗಬಹುದು, ಅದರಲ್ಲಿ ಸಂಶಯವಿಲ್ಲ. ಇವೊತ್ತು ಕೃಷಿ ಆಧಾರಿತ ಉದ್ದಿಮೆಗಳಿವೆ, ಅದು ಹತ್ತಿ ಉದ್ದಿಮೆ ಇರಬಹುದು, ಎಣ್ಣೆ ಉದ್ಯಮಗಳು ಇರಬಹುದು ಅವುಗಳೆಲ್ಲಾ ಇಂದು ಒಂದೂ ಕೂಡ ಕೆಲಸವನ್ನು ಮಾಡುತ್ತಿಲ್ಲ. ಇವುಗಳು ಖಾಸಗಿ ವಲಯ, ಸಹಕಾರಿ ವಲಯ, ಜಂಟೀ ವಲಯಗಳಾಗಿರಬಹುದು. ಈಗಾಗಲೇ ಒಂದನೇ ಹಂತ, ಎರಡನೇ ಹಂತ ಮುಗಿದು ಈಗ ಮೂರನೇ ಹಂತದ ರಿಫಾರ್ಮ್ಸ್‌ನಲ್ಲಿದ್ದೇವೆ. ಬಹುಶ: 2004ನೇ ಇಸವಿಯೊಳಗೆ ಬಹುತೇಕವಾಗಿ ಇನ್ನೂ ಕೆಳಗಡೆ ಹೋಗುತ್ತೇವೆನ್ನುವ ಭಯ ಆವರಿಸಿದೆ. ಈ ಭಯ ವಿಶೇಷವಾಗಿ ಕೃಷಿಯಲ್ಲಿ ಈ ರೀತಿಯಾಗಬಹುದು. ಸಾಮಾನ್ಯವಾಗಿ ನಾವು ರೈತರಾಗಿರುವುದರಿಂದ ನಾವು ಬೆಳೆ ಬೆಳೆಯತಕ್ಕಂಥ ಸನ್ನಿವೇಶಗಳನ್ನು

ಅವಲೋಕಿಸಿ ನೋಡಿ ಹೇಳುವುದಾದರೇ ಬೆಳೆಯ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿರುವುದನ್ನು ನಾವು ನೋಡಿದ್ದೇವೆ. ಯಾವುದೇ ಬೆಳೆಯನ್ನು ಬೆಳೆದರೂ ಕೂಡ ಎಷ್ಟು ಪ್ರಮಾಣದಲ್ಲಿ ಬೆಳೆ ಬರಬೇಕೋ ಆ ಪ್ರಮಾಣದಲ್ಲಿ ಬರುತ್ತಿಲ್ಲ. ಇದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲೂ ಅನುಭವಕ್ಕೆ ಬಂದಿದೆ. ಇಂದು ಕೃಷಿ ಇರಬಹುದು, ಕೈಗಾರಿಕೆ ಇರಬಹುದು ಒಂದು ರೀತಿಯಲ್ಲಿ ನೆಗಟಿವ್ ಗ್ರೋತ್ ಕಡೆಗೆ ಹೋಗುತ್ತಿದ್ದೇವೆ ಎಂದು ಒಂದು ಹೆಜ್ಜೆ ಮುಂದೆ ಹೋಗಿ ಹೇಳಬಹುದು. ಎಕನಾಮಿಕ್ ಸರ್ವೆ ರಿಪೋರ್ಟ್‌ನಲ್ಲಿ ಕಳೆದ ವರ್ಷ ಕೃಷಿ ಉತ್ಪಾದನೆಗಳು ಗುರಿಗಿಂತ ಸ್ವಲ್ಪ ಮಟ್ಟಿಗೆ ಕಡಿಮೆ ಇದೆಯೆಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಕೈಗಾರಿಕೆಯಲ್ಲೂ ಕೂಡ ಇದೆ ಎನ್ನುವುದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ: 1970ರ ದಶಕದಿಂದ 1980 ರವರೆಗೆ ಹಸಿರುಕ್ರಾಂತಿ, ಹೇಗೆ ನಡೆದುಕೊಂಡು ಬಂದಿತ್ತು ಮತ್ತು ನಂತರದ ದಿನಗಳಲ್ಲಿ ಇದು ಎಂಥ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿದೆ ಮತ್ತು 1980ರ ನಂತರದ 20 ವರ್ಷದ ಅವಧಿಯಲ್ಲಿ ಅದು ಅತ್ಯಂತ ಕೆಳ ಹಂತಕ್ಕೆ ಹೋಗಿದೆಯೆಂದರೆ ತಪ್ಪಾಗುವುದಿಲ್ಲ. ಇಂದು ಭೂಮಿಯ ಫಲವತ್ತತೆ ಬಹಳ ಕಡಿಮೆಯಾಗಿದೆ. ನೀರಾವರಿ ಪ್ರದೇಶದಲ್ಲಿ ಪಿ.ಹೆಚ್. ವ್ಯಾಲ್ಯೂ ಎಂದು ಏನು ಹೇಳುತ್ತೇವೆ ಅದು ಬಹುತೇಕವಾಗಿ ಗಂಡಾಂತರ ಮಟ್ಟಕ್ಕೆ ಬೆಳೆಯುತ್ತಿದೆ. ಬಹುತೇಕ ಅದು ವಾಟರ್ ಮ್ಯಾನೇಜ್‌ಮೆಂಟ್‌ನಿಂದ ಈ ರೀತಿಯಾಗಿದೆಯೋ ಅದು ನನಗೆ ಗೊತ್ತಿರಲಿಕ್ಕಿಲ್ಲ. ಅಥವಾ ಅಗತ್ಯಕ್ಕಿಂತ ಹೆಚ್ಚು ರಸಾಯನಿಕ ಗೊಬ್ಬರವನ್ನು ಹಾಕುತ್ತಿರುದರಿಂದ ಈ ರೀತಿಯಾಗಿದೆಯೋ ಎಂಬುದು ಗೊತ್ತಾಗಿಲ್ಲ. ನನ್ನ ಅನುಭವದಲ್ಲಿ ಹೇಳುವುದದಾರೆ ಕಳೆದ 25 ವರ್ಷಗಳಿಂದ ಹೆಚ್ಚು ರಾಸಾಯನಿಕ ಗೊಬ್ಬರಗಳನ್ನು ಬಳಸಿಕೊಂಡು ಬಂದಿರುವುದರಿಂದ ಇಂದು ಭೂಮಿಯ ರಚನೆ ಬೆಳೆಯನ್ನು ಬೆಳೆಯಲು ಪೂರಕವಾಗಿಲ್ಲ ಎಂದು ಹೇಳಬಯಸುತ್ತೇನೆ. ರಸಾಯನಿಕ ಗೊಬ್ಬರವನ್ನು ಬಳಸಲು ಪ್ರಾರಂಭ ಮಾಡಿದ ದಿನಗಳಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಇದನ್ನು ಉಪಯೋಗಿಸಿದರೂ ಕೂಡ ದೊಡ್ಡ ಪ್ರಮಾಣದ ಫಸಲು ಬಂದು ಒಳ್ಳೆಯ ಬೆಳೆಯಾಗುತ್ತಿದ್ದುದ್ದನ್ನು ನಾವು ನೋಡುತ್ತಿದ್ದೆವು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಈಗೇನಾಗಿದೆಯೆಂದರೆ ಬೆಳೆಗಳನ್ನು ಹೆಚ್ಚು ಬೆಳೆಯಲು ಒಬ್ಬರು ಒಂದು ಪ್ರಯೋಗವನ್ನು ಮಾಡಿದರೆ ಮತ್ತೊಬ್ಬರು ಮತ್ತೊಂದು ಪ್ರಯೋಗವನ್ನು ಮಾಡುತ್ತಿರುವ ಪರಿಸ್ಥಿತಿ ಇದೆ. ಒಂದು ರೀತಿಯಲ್ಲಿ ಕಾಂಪಿಟಿಟಿವ್ ಮನೋಭಾವನೆಯಿಂದ ಹೆಚ್ಚು ಬೆಳೆ ಬೆಳೆಯಬಹುದು ಎಂದು ತಿಳಿದು ಹೆಚ್ಚು ರಸಾಯನಿಕ ಗೊಬ್ಬರ, ಕ್ರಿಮಿನಾಶಕ, ಹೊಸ ಹೊಸ ಬೇರೆ ಬೇರೆ ತಳಿಗಳನ್ನು ಬಳಸುವುದು, ಹೀಗೆ ಇವೆಲ್ಲಾ ಪ್ರಯೋಗಗಳನ್ನು ಮಾಡಿ ಈಗ ಕೊನೆಯ ಹಂತಕ್ಕೆ ಬಂದು ನಿಂತಿದ್ದೇವೆ. ಇದರಿಂದ ಭೂಮಿಯ ರಚನೆಯೇ ಹಾಳಾಗಿ ಹೋಗುತ್ತಿದೆ. ಇನ್ನು ಬೀಜದ ಬಗ್ಗೆ ಹೇಳಬೇಕೆಂದರೆ ಕಳೆದ 25 ವರ್ಷಗಳ ಹಿಂದೆ ಏನು ಹೈಬ್ರೀಡ್ ಬೀಜಗಳನ್ನು ಹಾಕಿ ಬೆಳೆಯನ್ನು ತೆಗೆಯಲಾಗುತ್ತಿತ್ತೋ ಈಗ ಆ

ಪರಿಸ್ಥಿತಿ ಇಲ್ಲವಾಗಿದೆ. ಉದಾಹರಣೆಗೆ ಹೇಳಬೇಕೆಂದರೆ ಮೊಟ್ಟ ಮೊದಲ ಬಾರಿಗೆ ಗುಜರಾತ್‌ನ ಡಾ: ಪಟೇಲ್ ಎನ್ನುವವರೊಬ್ಬರು ಹೆಚ್-4 ಎನ್ನುವ ಹತ್ತಿ ಬೀಜದ ತಳಿಯನ್ನು ಸಂಕಿರಣ ಮಾಡಿ ಅದನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುವುದಕ್ಕೆ ಬಿಡುಗಡೆ ಮಾಡಿದರು. ಈವತ್ತು ಏನು ಸಾಂಪ್ರದಾಯಿಕವಾಗಿ ಹಳೆಯ ಲೋಕಲ್ ವೆರೈಟಿ ಹತ್ತಿ ಇತ್ತು; ಅದು ಲಕ್ಷ್ಮೀ ಆಗಿರಬಹುದು; ಜರೀಲಾ ಆಗಿರಬಹುದು, ಮೀಡಿಯಂ ಸ್ಟೇಪಲ್ ಅಥವಾ ಶಾರ್ಟ್ ಸ್ಟೇಪಲ್ ಕೋರ್ಸ್ ವೆರೈಟಿ ಆ ರೀತಿಯಾದಂಥ ಹತ್ತಿ ಬೆಳೆದು ಅದರ ಇಳುವರಿ ಪರಿಸ್ಥಿತಿ ಏನು ಇತ್ತು ಅದಕ್ಕೆ ಬದಲಾಗಿ ಹೈಬ್ರಿಡ್ ತಳಿಯನ್ನು ಬೆಳೆದೆವು. ಆ ದಿನಗಳಲ್ಲಿ ಈ ಹೈಬ್ರಿಡ್ ತಳಿಯಿಂದ ಹೆಚ್ಚು ಬೆಳೆ ಬಂದಿತ್ತು. ಇದರಿಂದಾಗಿ ಆರ್ಥಿಕವಾಗಿ ರೈತರು ಅಂದು ಚೇತರಿಸಿಕೊಂಡಿದ್ದರು. ನಂತರ ಬಂದಂತ ವರಲಕ್ಷ್ಮಿ ಇರಬಹುದು ಡಿಬಿಸಿಎಸ್-32 ಆದಿರಬಹುದು ಅಥವಾ ಇತ್ತೀಚೆಗೆ ಬಂದ ಅನೇಕ ಸುಧಾರಿತ ತಳಿಗಳನ್ನು ರೈತ ಬಿತ್ತಿರಬಹುದು; ಬಹುತೇಕ ಈ ಎಲ್ಲಾ ತಳಿಗಳಿಂದ ಹೆಚ್ಚು ಇಳುವರಿ ಬರುತ್ತಿಲ್ಲ, ಈ ತಳಿಯನ್ನು ಉಳುಮೆ ಮಾಡಿ ಕಾಯಿ ಬಂದು, ಬೆಲೆ ಬರುವವರೆಗೆ ನಾವು ಸಾಕಷ್ಟು ಪ್ರಮಾಣದಲ್ಲಿ ಅದರ ಪೋಷಣೆಯನ್ನು ಮಾಡಿದರೂ ಕೂಡ ಅದರಿಂದ ಬರಬೇಕಾದ ಪೂರ್ಣ ಪ್ರಮಾಣದ ಬೆಳೆಯನ್ನು ಪಡೆಯದ ಮಟ್ಟಕ್ಕೆ ಬಂದಿದ್ದೇವೆ. ಇಂದು ಎಷ್ಟೇ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಕ್ರಮ ಕೈಗೊಂಡಿದ್ದರೂ ಕೂಡ ಈ ತಳಿಗಳನ್ನು ಬಿತ್ತಿದ್ದರೂ ಕೂಡ ಮೊಗ್ಗು ಸರಿಯಾಗಿ ಬರುವುದಿಲ್ಲ, ಒಂದು ವೇಳೆ ಮೊಗ್ಗು ಬಂದರೂ ಕೂಡ ಹವಾಮಾನ ವೈಪರೀತ್ಯದಿಂದಾಗಿ, ರೋಗಗಳ ಬಾಧೆಯಿಂದಾಗಿ ಆತಂಕಕಾರಿಯಾದ ಗಂಡಾಂತರಗಳು ಬಂದೆರಗಿ ಬಹುತೇಕ ಹತ್ತಿ ಬೆಳೆ ಇಂದು ಸರಿಯಾದ ಪ್ರಮಾಣದಲ್ಲಿ ಬರುತ್ತಿಲ್ಲವೆಂದು ಹೇಳಬಯಸುತ್ತೇನೆ. ನಾವೇನು 25 ವರ್ಷಗಳ ಹಿಂದೆ ಅಷ್ಟೇ ಭೂಮಿಯಲ್ಲಿ ಆ ತಳಿಗಳಿಂದ ಹತ್ತಿ ಬೆಳೆಯನ್ನು ಬೆಳೆಯುತ್ತಿದ್ದೇವೋ ಅದರ ಕಾಲು ಭಾಗ ಕೂಡ ಇಂದು ಬೆಳೆಯುವುದಕ್ಕೆ ಆಗದ ಪರಿಸ್ಥಿತಿಗೆ ಮುಟ್ಟಿದ್ದೇವೆ. ಇದೇ ರೀತಿ ಬೇರೆ ಬೆಳೆಗಳಾದ ಮುಸುಕಿನ ಜೋಳ, ಸಾದಾ ಜೋಳ, ಹೈಬ್ರೀಡ್ ಜೋಳ, ಗೋಧಿ, ಇರಬಹುದು, ಭತ್ತ ಇರಬಹುದು, ಅಥವಾ ರಾಗಿ ಇರಬಹುದು, ಇವುಗಳನ್ನು ಬೆಳೆಯಲು ರೈತ ಏನೆಲ್ಲಾ ಪ್ರಯತ್ನಗಳನ್ನು ಪಟ್ಟು ಅದರ ಪೋಷಣೆಯನ್ನು ಮಾಡಿದರೂ ಕೂಡ ಒಳ್ಳೆಯ ಬೆಳೆ ಬರದ ಪರಿಸ್ಥಿತಿ ಇದೆ. ರೈತ ಇದನ್ನು ಬೆಳೆಯಲು ಸಾಕಷ್ಟು ಸಾಲ ಮಾಡಿ ಬಂಡವಾಳ ಹಾಕಿರುತ್ತಾನೆ. ಆದರೆ ಈ ಕೃಷಿಯಿಂದ ಅತ್ಯಂತ ಕಡಿಮೆ ಆದಾಯ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಒಂದು ಕಡೆ ಈ ಪರಿಸ್ಥಿತಿಯಿಂದ ರೈತ ತೊಂದರೆ ಪಡುತ್ತಿದ್ದಾನೆ. ಇನ್ನೊಂದು ಕಡೆಯಲ್ಲಿ ಬೆಳೆದ ಬೆಳೆಗೆ ಉತ್ತಮವಾದ ಬೆಲೆಯೂ ಕೂಡ ರೈತರಿಗೆ ಸಿಗುತ್ತಿಲ್ಲ. ಜೋಳವನ್ನು ಇದೇ ಕಾರಣದಿಂದ ಪ್ರೊಕ್ಯೂರ್ ಮಾಡಬೇಕೆಂದು ಹೇಳಿ ಬಹಳಷ್ಟು ಒತ್ತಾಯವನ್ನು ನಾವೂ ಕೂಡ ಸರ್ಕಾರಕ್ಕೆ ಮಾಡಿದೆವು. ಜೋಳವನ್ನು ಪ್ರೊಕ್ಯೂರ್ ಮಾಡಬೇಕಂದು ಹೇಳಿ ಆ

ಸಂದರ್ಭದಲ್ಲಿ ಬಹಳಷ್ಟು ಗಲಾಟೆಯಾಯಿತು. ನಾವೂ ಬಹಳಷ್ಟು ಒತ್ತಾಯವನ್ನು ಸರ್ಕಾರಗಳ ಮೇಲೆ ಮಾಡಿದ್ದೇವೆ. ರೈತರು ಬೆಳೆದಂತಹ ಮಾಲನ್ನು ಬೆಂಬಲ ಬೆಲೆಯಲ್ಲಿ ತೆಗೆದುಕೊಳ್ಳಬೇಕೆಂದು ಬಹಳಷ್ಟು ಆಗ್ರಹ ಮಾಡಿದ್ದೆವು. ಇವತ್ತು ದೇಶದಲ್ಲಿ ಬೆಳೆದಿರತಕ್ಕಂಥ ಬೇಳೆಕಾಳುಗಳು ಇರಬಹುದು, ವಾಣಿಜ್ಯ ಬೆಳೆಗಳು ಇರಬಹುದು, ಅಥವಾ ಎಣ್ಣೆಕಾಳುಗಳು ಇರಬಹುದು, ಅವುಗಳು ಸುಗ್ಗಿ ಕಾಲದಲ್ಲಿ ಇರುವಂತಹ ಬೆಲೆಗಳನ್ನು ನೋಡಿದರೆ ಉದಾಹರಣೆಗೆ ಮುಸಿಕಿನ ಜೋಳದ ಬೆಂಬಲ ಬೆಲೆ 445 ರೂಪಾಯಿ ಇದ್ದರೆ ಅವತ್ತಿನ ಮಾರುಕಟ್ಟೆಯಲ್ಲಿ 290 ರೂಪಾಯಿ ಕ್ವಿಂಟಾಲ್ ಇತ್ತು. ಅವತ್ತು ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರು, ಸ್ಟೇಟ್ ಫುಡ್ ಅಂಡ್ ಸಿವಿಲ್ ಸಪ್ಲೈ ಕಾರ್ಪೋರೇಷನ್‌ನವರು, ಇಲಾಖೆಯವರು ಖರೀದಿ ಮಾಡಿದಂತಹ ಬೆಲೆ 445 ರೂಪಾಯಿ ಆದರೆ, ಮಾರುಕಟ್ಟೆಯಲ್ಲಿ ಅದರ ಬೆಲೆ 290 ರಿಂದ 300 ರೂಪಾಯಿಗೆ ಇಳಿದಂತಹ ಪರಿಸ್ಥಿತಿ ಇತ್ತು. ವ್ಯಾಪಾರಸ್ಥರು ಯಾರಿಗೆ ಹಣ ನೀಡಿದ್ದರು, ಸಾಲ ಕೊಟ್ಟಿದ್ದರು, ಮತ್ತೊಂದು ರೀತಿಯಲ್ಲಿ ಸಹಾಯ ಮಾಡಿದ್ದರು, ಅವರಿಗೆ ಆ ರೈತರು ಬೆಲೆಯನ್ನು ಕೊಡಲೇಬೇಕಾದಂತಹ ಪರಿಸ್ಥಿತಿ ಇತ್ತು. ಅದೇ ಬೆಲೆಗೆ ಅವರು ತೆಗೆದುಕೊಳ್ಳುವಂತಹ ಸನ್ನಿವೇಶ ಇದ್ದುದ್ದರಿಂದ ಅದನ್ನು ತೆಗೆದುಕೊಂಡರು. ಬಹುತೇಕ ಈ ಒಂದು ವೇರ್‌ಹೌಸ್ ಕಾರ್ಪೋರೇಷನ್ನಿನವರು, ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರು ತೆಗೆದುಕೊಳ್ಳದೆ ಹೋಗಿದ್ದರೆ, ರಾಜ್ಯ ಸರ್ಕಾರ ಅದರಲ್ಲಿ ಭಾಗವಹಿಸದೆ ಇದ್ದಿದ್ದರೆ, ಮೂವತ್ತು ಲಕ್ಷಕ್ಕಿಂತಲೂ ಹೆಚ್ಚು ಚೀಲ ಖರೀದಿ ಮಾಡದೇ ಇದ್ದಿದ್ದರೆ ಆ ಮಾಲು ಬಹುತೇಕ 250 ರೂಪಾಯಿಗಿಂತಲೂ ಕಡಿಮೆ ಬೆಲೆಗೆ ಗೋವಿನ ಜೋಳ ಮಾರಾಟವಾಗುತ್ತಿತ್ತು. ಅವತ್ತು ರೈತರೆಲ್ಲಾ ಸೇರಿ ಕೊಟ್ಟರು. ರಾಜ್ಯದ ಅನೇಕ ಗೋದಾಮುಗಳಲ್ಲಿ, ಬಿಲ್ಡಿಂಗ್‌ಗಳಲ್ಲಿ ಕಲ್ಯಾಣ ಮಂಟಪದಲ್ಲಿರಲಿ ಅಥವಾ ಸರ್ಕಾರಿ ಕಚೇರಿಗಳಲ್ಲಿರಲಿ ಎಲ್ಲೆಲ್ಲಿ ಜಾಗ ಸಿಗುತ್ತಿತ್ತು ಅಲ್ಲಿ ಪರ್‌ಚೇಸ್ ಮಾಡಿರುವಂತಹ ಮಾಲನ್ನು ಸ್ಟೋರ್ ಮಾಡಿ ಇಡುವುದರ ಮೂಲಕ ಸರ್ಕಾರ ರೈತರ ಸಹಾಯಕ್ಕೆ ಬಂದಿತ್ತು. ಆದಕ್ಕೆ ರಾಜ್ಯ ಸರ್ಕಾರಕ್ಕೆ ನಾವು ಶ್ಲಾಘನೆ ಮಾಡಬೇಕು. ಅವತ್ತು ಬೆಳೆದಂತಹ ಮಾಲನ್ನು ತೆಗೆದುಕೊಳ್ಳದೆ ಹೋಗಿದ್ದರೆ ರೈತರಿಗೆ ಬಹಳ ಕಷ್ಟವಾಗುತ್ತಿತ್ತು. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಅದೇ ಗೋವಿನ ಜೋಳ ಎಲ್ಲಿ ಇತ್ತೋ ಅಲ್ಲೇ ಇದೆ. ಯಾವ ಗೋದಾಮುಗಳಲ್ಲಿ ಇಟ್ಟಿದ್ದಾರೋ ಅದೇ ಗೋದಾಮಿನಲ್ಲೆ ಇದೆ. ಆದರೆ ಕೆಲವರು ಮದ್ರಾಸ್‌ನಿಂದ ಬರುತ್ತಾರೆ, ಕೆಲವರು ಮುಂಬೈಯಿಂದ, ಕೆಲವರು ಹೈದರಾಬಾದ್‌ನಿಂದ, ಕೆಲವರು ಬೆಂಗಳೂರಿನಿಂದ ಬರುತ್ತಾರೆ, ಅವರು ಫುಡ್ ಕಾರ್ಪೋರೇಶನ್‌ನವರು ಕೊಡುವಂತಹ ಬೆಲೆಗೆ ತೆಗೆದುಕೊಂಡು, ಅದೇ ಗೋಡೌನ್‌ನಲ್ಲಿ ಸ್ಟೋರ್ ಮಾಡಿಟ್ಟು, ಸ್ವಲ್ಪ ದಿವಸ ತಡೆದು ಅದನ್ನು ಇನ್ನೊಬ್ಬರಿಗೆ ಮಾರಿದಾಗ ಲಕ್ಷಾಂತರ ರೂಪಾಯಿ ಲಾಭವನ್ನು ಮಾಡಿಕೊಂಡರು. ಯಾವ ವ್ಯಾಪಾರಸ್ಥರು ಅವತ್ತು ತೆಗೆದುಕೊಂಡು ಬಂದರು, ಸಪೋರ್ಟ್ ಪ್ರೈಸ್ ಕೊಟ್ಟಿದ್ದರು ಅವರೇ ವಾಪಸ್ಸು

ತೆಗೆದುಕೊಂಡು ಲಾಭ ಮಾಡಿಕೊಂಡರು. ಅದಕ್ಕೆ ಸಾಕಷ್ಟು ಆಗ್ರಹ ಇತ್ತು, ನಾನೇ ನೋಡಿದೆ. ನನಗೆ ಕೊಡಿಸಿ, ಇವರಿಗೆ ಕೊಡಿಸಿ ಎಂದು ರೈತರು ಅವತ್ತು ಏನು ಮಾಲು ಖರೀದಿಗೆ ಇಟ್ಟಿದ್ದರು, ಅದನ್ನು ಇಂತಹ ವ್ಯಾಪಾರಸ್ಥರ ಪರವಾಗಿ ಕೊಡಿ ಎಂದು ಹೇಳುವಂತಹ ಪರಿಸ್ಥಿತಿ ಹಾಗೂ ಬಹಳಷ್ಟು ಬೇಡಿಕೆ ಬಂದಿತ್ತು. ಆ ಪರಿಸ್ಥಿತಿಯಿಂದಾಗಿ ನಾನು ಹೇಳಿದ್ದೇನೆ, ಇವತ್ತು ಬೆಲೆಗಳು ಬಿದ್ದಿದೆ. ಬಹುತೇಕ ಅದರ ಲಾಭ ವ್ಯಾಪಾರ ವರ್ಗಕ್ಕೆ, ವರ್ತಕ ವರ್ಗಕ್ಕೆ, ಎಕ್ಸ್‌ಪೋರ್ಟ್ ಮಾಡುವಂತಹ ಜನರಿಗೆ, ಇನ್ನಾರಿಗೋ ಆಗುವಂತಹ ಸನ್ನಿವೇಶವಾಗಿದೆ. ಇವತ್ತು ಸಾಲ ಮಾಡಿದಂತಹ ರೈತರಿಗೆ ಅವರ ಸಾಲ ವಾಪಸ್ಸು ಕೊಡುವಂತಹ ಸಂದರ್ಭ ಸಹ ಒದಗಿಲ್ಲ. ಅವನು ಯಾವ ಬೆಳೆ ಬೆಳೆಯುತ್ತಾನೆ, ಅದಕ್ಕೆ ಎಷ್ಟು ಬಂಡವಾಳ ಹಾಕುತ್ತಾನೆ, ಆ ಬಂಡವಾಳ ಸಹ ವಾಪಸ್ಸು ಬರದೆ ಇರುವಂತಹ ಪರಿಸ್ಥಿತಿ ಈ ದೇಶದಲ್ಲಿ ಹಾಗೂ ರಾಜ್ಯದಲ್ಲಿ ರೈತನಿಗೆ ಒದಗಿದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಾಗಾಗಿ ಬಹಳ ಸಂಕಷ್ಟದಲ್ಲಿ ಇದ್ದಂತಹ ರೈತ ವರ್ಗವನ್ನು ಇವತ್ತು ಅವರಷ್ಟಕ್ಕೆ ಅವರನ್ನೇ ಬಿಟ್ಟರೆ ಏನಾಗಬಹುದು? ಒಂದು ಕಡೆ ಅವರ ಹತ್ತಿರ ಬಂಡವಾಳ ಇಲ್ಲ. ಇವತ್ತು ಅವನು ಎಷ್ಟು ಸಾಲ ಪಡೆಯಬಹುದಾಗಿತ್ತು, ಅಥವಾ ಬಂಡವಾಳವನ್ನು ಹೊರಗಡೆಯಿಂದ ತರಬಹುದಾಗಿತ್ತು, ಅದು ಮುಗಿದುಹೋಗಿದೆ. ಅವನು ಸಾಲಗಳನ್ನು ಪಡೆದಂತಹ ಸಂಸ್ಥೆಗಳಲ್ಲಿ, ಅದು ಡಿಸಿಸಿ ಬ್ಯಾಂಕ್ ಅಥವಾ ಸೊಸೈಟಿಗಳಲ್ಲಿ ಪಡೆದಂತಹ ಸಾಲ ಒಂದು ರೂಪಾಯಿ ಆಗಿದ್ದರೆ, ಅದು 10 ರೂಪಾಯಿಗೆ ಏರಿರುವಂತಹ ಪರಿಸ್ಥಿತಿ ಬಂದಿದೆ. ಹೊಸ ಸಾಲವನ್ನು ಪಡೆಯುವಂತಹ ಸ್ಥಿತಿಯಲ್ಲಿ ಅವನಿಲ್ಲ ಇವತ್ತು ಖಾಸಗಿಯಾಗಿ ಸಾಲವನ್ನು ಪಡೆಯುವಂತಹ ಪರಿಸ್ಥಿತಿಯಲ್ಲೂ ಸಹ ಇಲ್ಲ. ಕಾರಣವೇನೆಂದರೆ ಸಾಲ ತೆಗೆದುಕೊಂಡರೆ ಅವರಿಗೆ ವಾಪಸ್ಸು ಕೊಡುವುದಕ್ಕೆ ಸಾಧ್ಯವಿಲ್ಲ. ಇವರಿಗೆ ಭವಿಷ್ಯವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಹೊಸ ವ್ಯವಸ್ಥೆಗೆ ನಾವೆಲ್ಲಾ ಹೊಂದಿಕೊಳ್ಳಬೇಕು. ಇವತ್ತೇನು ಜಾಗತಿಕ ವ್ಯಾಪಾರ ಒಪ್ಪಂದದ ಸದಸ್ಯರಾಗಿ ನಮ್ಮ ರಾಷ್ಟ್ರ ಮುಂದುವರೆದಿದೆ. ಅದರ ಮೂಲಕ ನಮ್ಮ ಇರುವಿಕೆಯನ್ನು, ನಮ್ಮ ವ್ಯವಹಾರವನ್ನು, ನಮ್ಮ ಉದ್ಯೋಗವನ್ನು ಅದರ ತತ್ವಕ್ಕೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳಬೇಕಾದಂತಹ ಸನ್ನಿವೇಶ ಬಂದಿದೆ. ಇವತ್ತು ನಾವು ದೊಡ್ಡ ದೊಡ್ಡ ವಿದೇಶಿ ರಾಷ್ಟ್ರಗಳೊಂದಿಗೆ ಹೋಲಿಸಿದಾಗ ಯಾವ್ಯಾವ ದೇಶದಲ್ಲಿ ರೈತರು ಕಡಿಮೆ ಪ್ರಮಾಣದಲ್ಲಿ ಇದ್ದಾರೆಂದರೆ ಅಮೇರಿಕಾದಲ್ಲಿ ಶೇಕಡ ಎರಡರಷ್ಟು ಮಾತ್ರ ಕೃಷಿಯಲ್ಲಿ ಅವಲಂಭನೆಯಾಗಿದ್ದಾರೆ. ಆದರೆ ಅವರಲ್ಲಿ ದೊಡ್ಡ ಪ್ರಮಾಣದಲ್ಲಿ ಇರುವಂತಹ ಕೃಷಿ ಉತ್ಪಾದನೆ, ಅದಕ್ಕೆ ಇರುವಂತಹ ಸರ್ಕಾರದ ಬೆಂಬಲ ಅದರ ಜೊತೆಗೆ ನಾವು ಸ್ಪರ್ಧೆ ಮಾಡುವಂತಹ ಪರಿಸ್ಥಿತಿಯಲ್ಲಿದ್ದೇವೆ. ಅನೇಕ ವಿಧವಾದಂತಹ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಸ್ಪರ್ಧೆ ಮಾಡುವಂತಹ ಸ್ಥಿತಿಯಲ್ಲಿ ನಮ್ಮ ದೇಶದ ಕೃಷಿ ಇದೆ. ಇದು ಸಾಧ್ಯವೇ ಎಂದು ನಾವು

ನೋಡಿಕೊಳ್ಳಬೇಕಾಗಿದೆ. ಇವತ್ತು ಒಂದು ಕಡೆ ಬಂಡವಾಳ ಇಲ್ಲ, ಇನ್ನೊಂದು ಕಡೆ ತಾಂತ್ರಿಕ ಜ್ಞಾನ ಇಲ್ಲ, ಮತ್ತೊಂದು ಕಡೆ ಯಾವುದೇ ಸ್ಪಷ್ಟವಾದ ಮಾರ್ಗದರ್ಶನ ಬರುತ್ತಿಲ್ಲ. ಹೊಸ ಹೊಸ ವಿಚಾರಗಳ ಬಗ್ಗೆ ಕ್ರಮವನ್ನು ಈ ಸರ್ಕಾರ ತೆಗೆದುಕೊಂಡಿದೆ. ಆದಾಗ್ಯೂ 70 ಭಾಗದ ಜನ ಅದರ ಮೇಲೆ ಅವಲಂಭಿತವಾಗಿದ್ದೇವೆ, ಅವರನ್ನು ಸರಿಯಾದಂತಹ ದಾರಿಯಲ್ಲಿ, ಸರಿಯಾದಂತಹ ಮಾರ್ಗದಲ್ಲಿ ಅವರೇ ತಮ್ಮನ್ನು ತಾವು ರೂಪಿಸಿಕೊಂಡು, ತಮ್ಮ ಜೀವನವನ್ನು ಈ ವೃತ್ತಿಯನ್ನು ರೂಪಿಸಿಕೊಂಡು ಹೆಚ್ಚುವರಿ ಬೆಳೆಯನ್ನು ಬೆಳೆದು, ಉತ್ಪಾದನೆ ಜಾಸ್ತಿ ಮಾಡಿಕೊಂಡು ತಮ್ಮ ಉತ್ಪಾದನೆ ವೆಚ್ಚವನ್ನು ಕಡಿಮೆ ಮಾಡಿಕೊಂಡು, ಹೊರ ಜಗತ್ತಿನೊಂದಿಗೆ, ಹೊರ ಸಂಸ್ಥೆಗಳೊಂದಿಗೆ ಮಾರುಕಟ್ಟೆಯಲ್ಲಿ ನಾವು ಪೈಪೋಟಿ ಮಾಡಿ ಲಾಭ ಮಾಡಿಕೊಂಡು ದೊಡ್ಡ ವ್ಯವಸ್ಥೆಗೆ, ಹೊಸ ಉದ್ಯಮ ಸ್ಥಿತಿಗೆ ನಾವು ಬರಬೇಕಾದರೆ ಬಹಳ ಕಷ್ಟವಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದುದರಿಂದ ಇಲಾಖೆ ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಮಾಡಬಯಸುತ್ತೇನೆ. ಇವತ್ತು ಕೃಷಿ ಇಲಾಖೆ ಬಹಳ ದೊಡ್ಡ ಇಲಾಖೆ. ಬಹುತೇಕ ತಾಲ್ಲೂಕು ಮಟ್ಟದಲ್ಲಿ ಒಬ್ಬ ಸಹಾಯಕ ನಿರ್ದೇಶಕನ ಒಂದು ನೇತೃತ್ವದಲ್ಲಿ ಈ ಇಲಾಖೆ ಕೆಲಸ ಮಾಡುತ್ತಿದೆ. ಆದರೆ ಒಟ್ಟಾರೆ ಇದರ ಮೇಲೆ ವೆಚ್ಚ ಮಾಡಿದಂತಹ ಹಣವನ್ನು ನೋಡಿದಾಗ ಬೇರೆ ಬೇರೆ ತಾಲ್ಲೂಕಿಗೆ ಒಂದು ಲಕ್ಷ ಬಂತು, ಒಂದು ತಾಲ್ಲೂಕಿಗೆ ಹತ್ತು ಸಾವಿರ ಇನ್ನೊಂದು ತಾಲ್ಲೂಕಿಗೆ ಇವತ್ತು ಸಾವಿರ ಸಿಕ್ಕಿತ್ತು, ಅದು ಪರಿಕರಗಳನ್ನು ಅಥವಾ ವಿಶೇಷ ಕಾರ್ಯಕ್ರಮಗಳಿಗೆ ಸಣ್ಣ ಪ್ರಮಾಣದಲ್ಲಿ ರೈತರಿಗ ಆರ್ಥಿಕವಾಗಿ ಬೆಂಬಲವನ್ನು ನೀಡುತ್ತಿದೆ. ತಾಂತ್ರಿಕ ಅಥವಾ ಎಕ್ಸ್‌ಟೆನ್ಷನ್ ಕೊಡುವಂತಹ ಸ್ಥಿತಿ ಅವರಿಗೆ ಇದೆ. ಭೂಮಿಯ ಸಾರವನ್ನು ರಕ್ಷಣೆ ಮಾಡುವುದಕ್ಕೆ ಒಂದು ಸಾಯಿಲ್ ಕನ್‌ಸರ್ವೇಷನ್ ವಿಭಾಗ ಇದೆ. ಆದರೆ ಇವತ್ತು ಏನು ರೈತ ಮಿತ್ರ ಕೇಂದ್ರ ಎಂದು ಹೊಸ ಯೋಜನೆ ಮಾಡಿದ್ದೇವೆ, ಅದಕ್ಕೆ ಬೇಕಾದಂತಹ ಮ್ಯಾನ್‌ಪವರ್ ಅಥವಾ ತಾಂತ್ರಿಕ ಮಾರ್ಗದರ್ಶನವಾಗಿರಬಹುದು, ಅದು ಅಷ್ಟು ಉಪಯುಕ್ತವಾಗಿ ನಡೆಯುತ್ತಿಲ್ಲವೆನ್ನುವ ಭಾವನೆ ಇದೆ. ಅಂತಹ ಒಂದು ದೊಡ್ಡ ಜವಾಬ್ದಾರಿ ಕೃಷಿ ಮಂತ್ರಿಗಳ ಮೇಲೆ ಇದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ಈ ಇಲಾಖೆ ಕಾಲಾಂತರದಲ್ಲಿ ಏನು ಮೂಲ ಉದ್ದೇಶ ಇತ್ತು, ಎಕ್ಸ್‌ಟೆನ್ಷನ್ ಕೆಲಸ ಮಾಡುವುದರಲ್ಲಿ ಹಿಂದೆ ಬೀಳುತ್ತಿದೆ ಎಂದರೆ ತಪ್ಪಿಲ್ಲವೆಂದು ನಾನು ಭಾವಿಸುತ್ತೇನೆ. ಇವತ್ತು ಕೃಷಿ ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿ ಇದೆ. ಇಲಾಖೆಯಲ್ಲಿ ಅನೇಕರು ಪ್ರಮೋಷನ್ ಸಿಕ್ಕದೆ ಬಹಳಷ್ಟು ನಿರಾಶೆಗೊಂಡಂತಹ ಪರಿಸ್ಥಿತಿ ಇದೆ. ಮೊದಲು ಕೆಲಸಕ್ಕೆ ಸೇರಿಕೊಂಡ ನಂತರ ರಿಟೈರ್ಡ್ ಆಗುವಾಗ ಅವರಿಗೆ ಎರಡು ಮೂರು ಪ್ರಮೋಷನ್ ಅಷ್ಟೇ ಸಿಕ್ಕಿರುವುದು. ಅಸಿಸ್ಟೆಂಟ್ ಅಗ್ರಿಕಲ್ಚರ್ ಆಫೀಸರ್ ಆಗಿ ಸೇರಿದಂತಹ ವ್ಯಕ್ತಿ ಕೇವಲ ಅಗ್ರಿಕಲ್ಚರ್ ಆಫೀಸರ್ ಆಗಿ ಆಫೀಸರ್ ಆಗಿ ರಿಟೈರ್ಡ್ ಆದಂತಹ ಅನೇಕ ಉದಾಹರಣೆಗಳು

ನನ್ನ ಗಮನಕ್ಕೆ ಬಂದಿದೆ. ಇನ್ನೂ ಮುಂದೆ ಹೋದರೆ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಆಗುವಂತಹ ಒಂದು ಸನ್ನಿವೇಶ ಇದೆ. ಅನೇಕ ದೊಡ್ಡದೊಡ್ಡ ವ್ಯಕ್ತಿಗಳು ಈ ಇಲಾಖೆಯನ್ನು ನಡೆಸಿಕೊಂಡು ಹೋದಂತಹ ಲೀಡರ್‌ಗಳನ್ನು ಕೊಟ್ಟಂತಹ ಉದಾಹರಣೆಯನ್ನು ನಾವು ನೋಡಿದ್ದೇವೆ ಇವತ್ತು ಐ.ಎ.ಎಸ್. ಅಧಿಕಾರಿಗಳು ಉತ್ತಮರು ಇದ್ದಾರೆ. ಅದರಲ್ಲಿ ಎರಡು ಮಾತ್ತಿಲ್ಲ. ಆದರೆ ಅದರ ಉಪಯುಕ್ತತೆ ಜನರಿಗೆ ಈ ಇಲಾಖೆಗೆ ಹೇಗಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಯಾರೇ ಆಗಲಿ ಒಬ್ಬ ತಾಂತ್ರಿಕವಾಗಿ ಸೌಂಡ್ ಆಗಿ ಇರುವಂತಹ, ಎಲ್ಲಾ ಪ್ರಬುದ್ಧತೆಯನ್ನು ಹೊಂದಿದಂತಹ, ಜ್ಞಾನವನ್ನು ಹೊಂದಿದಂತಹ ವ್ಯಕ್ತಿ, ಸಾಮಾನ್ಯ ಜನರಿಗೆ ವಿಚಾರಗಳನ್ನು ಮುಟ್ಟುವಂತೆ ಕೆಲಸ ಮಾಡಿ ಆ ಇಲಾಖೆಯನ್ನು ಮುಂದುವರೆಸುವಂತಹ ಕೆಲಸವಾಗಬೇಕು. ಈ ವಿಚಾರವನ್ನು ಹೇಳುತ್ತಾ ನಾನು ಕಮೀಷನರ್‌ರವರು ಮಾಡಿರುವಂಥಾದ್ದು ತಪ್ಪು ಎಂದು ಹೇಳುವುದಿಲ್ಲ. ಅವರು ಬಹಳ ಉತ್ತಮವಾದಂತಹ ವ್ಯಕ್ತಿಗಳಾಗಿದ್ದಾರೆ. ಆ ಇಲಾಖೆಯ ಬಹಳ ಉಪಯುಕ್ತವಾದಂತಹ ಇಲಾಖೆಯಾಗಿದೆ. ಆದರೆ ಇದು ಸಾಮಾನ್ಯವಾದ ರೈತನನ್ನು ಹೋಗಿ ಮುಟ್ಟಬೇಕಾಗುತ್ತದೆ. ತಾವು ದಯವಿಟ್ಟು ಇದನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೊನೆಯದಾಗಿ ನಾವು ಬಯೋಟೆಕ್ನಾಲಜಿಯ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ಈ ಬಯೋಟೆಕ್ನಾಲಜಿಗೆ ಸರ್ಕಾರವೂ ಸಹ ಸಾಕಷ್ಟು ಒತ್ತನ್ನು ನೀಡುತ್ತಿದೆ, ಅದರಲ್ಲಿ ಏನೂ ಸಂಶಯವಿಲ್ಲ. ಆದರೆ ಕಾಲವನ್ನು ನಾವು ಬಹಳಷ್ಟು ಕಳೆಯಬಾರದು, ನಮ್ಮ ಶರದ್ ಜೋಶಿಯವರು ರೈತ ಚಳುವಳಿಯನ್ನು ಮಾಡಿದಂಥವರು, ನಾವು ನರಗುಂದ ತಾಲ್ಲೂಕಿನಲ್ಲಿ ಮಾಡುವಾಗ ಅವರು ನಿಪ್ಪಾಣಿಯಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಮಾಡುತ್ತಿದ್ದರು. ಅವರು ನಾಲ್ಕೈದು ವರ್ಷಗಳಲ್ಲಿ, ಎಂಟು ವರ್ಷಗಳಲ್ಲಿ ಬದಲಾವಣೆ ಬರುತ್ತದೆಂದು ಹೇಳುತ್ತಿದ್ದರು. ಆದರೆ ನನ್ನದೇ ಆದಂತಹ ಸಂಶಯ ಅದರಲ್ಲಿ ಇದೆ. ಸುಮಾರು ನಾವು 8-10 ವರ್ಷಗಳ ಕಾಲವನ್ನು ಈಗಾಗಲೇ ವ್ಯಯ ಮಾಡಿದ್ದೇವೆ. ಇಲ್ಲಿಯವರೆಗೆ ಸರ್ಕಾರದಿಂದಾಗಲಿ, ಅಥವಾ ಸ್ವಾಭಾವಿಕವಾಗಿ ಬರುವಂತಹ ಸ್ವಾತಂತ್ರವನ್ನು ನೀಡಿದಂತಹ ಸನ್ನಿವೇಶದಲ್ಲಿ ಅಥವಾ ಮುಕ್ತವಾಗಿ ಇರುವಂತಹ ಸನ್ನಿವೇಶದಲ್ಲಿ ಯಾವ ರೀತಿಯಾಗಿ ನಾವು ಸ್ಪಂದನ ಮಾಡಬೇಕಾಗಿತ್ತು, ಯಾವ ರೀತಿ ವರ್ತನೆ ಮಾಡಬೇಕಾಗಿತ್ತು? ಯಾವ ರೀತಿಯಾಗಿ ನಾವು ರೀ-ಕನ್‌ಸ್ಟ್ರಕ್ಟ್ ಮಾಡಬೇಕಾಗಿತ್ತು, ಈ ರೈತ ವರ್ಗವು ಲವಲವಿಕೆಯಿಂದ ಕೂಡಿ ಅದನ್ನು ಮಾಡುವಂತಹ ಸಂದರ್ಭ ಬರಬೇಕಾಗಿತ್ತು. ಆದರೆ ಅದು ಈ ರೀತಿಯಾಗಿ ಆಗಿಲ್ಲ, ನಾವು ವರ್ಷೆವರ್ಷೆ ನೆಗೆಟೀವ್ ಕಡೆಗೆ ಹೋಗುತ್ತಿದ್ದೇವೆ. ಹಾಗಾಗಿ ನಾವು ಬರುವ ನಾಲ್ಕಾರು ವರ್ಷಗಳು ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾಗಿ ಆಗುತ್ತದೆ? ಎಂದು ಹೇಳುವಾಗ ಅದರಲ್ಲಿ ಸರ್ಕಾರದ ಪಾತ್ರವಿಲ್ಲವೆಂದು ಹೇಳಿದಾಗ, ಅದು ಸಾಧ್ಯವಾಗುತ್ತದೆಂದು ಹೇಳುವಂಥಾದ್ದರಲ್ಲಿ ನನಗೆ ನಂಬಿಕೆ ಇಲ್ಲ. ಸರ್ಕಾರ ಬಹಳ ದೊಡ್ಡ ಪ್ರಮಾಣದಲ್ಲಿ ಈ ಕ್ಷೇತ್ರವನ್ನು

ನೋಡಬೇಕಾಗುತ್ತದೆ, ದೊಡ್ಡ ಪ್ರಮಾಣದಲ್ಲಿ ಬಂಡವಾಳ ಸಿಗುವಂತೆ ಮಾಡಬೇಕಾಗುತ್ತದೆ. ಮತ್ತೆ ತಾಂತ್ರಿಕ ಜ್ಞಾನವನ್ನು ಒದಗಿಸುವಂಥಾದ್ದು ಆಗಬೇಕಾಗುತ್ತದೆ. ತಾವು ಎಲ್ಲಾ ರೀತಿಯಲ್ಲೂ ರೈತರಿಗೆ ಬೆಂಬಲವನ್ನು ಕೊಡಬೇಕಾಗುತ್ತದೆ. ಅದನ್ನು ಮಾಡಿದಾಗ ಮಾತ್ರ ಈ ಒಂದು ಹೊಸ ವಾತಾವರಣವನ್ನು ಎದುರಿಸಿ, ಈಜಿ ಜಯಿಸುವುದಕ್ಕೆ ಸಾಧ್ಯವಾಗುತ್ತದೆಯೆಂದು ಹೇಳುತ್ತೇನೆ. ಇದಕ್ಕಾಗಿ ಹೊಸ ಹೊಸ ಕಾರ್ಯಕ್ರಮಗಳು ಏನಿವೆ, ಅದು ಬಿ.ಟಿ. ಹತ್ತಿ ತಳಿ ಇರಬಹುದು. ಈ ಬಯೋ ಟೆಕ್ನಾಲಜಿ ಬೇರೆ ಬೇರೆ ಫಸಲುಗಳಿಗೆ ಇರಬಹುದು, ಅವುಗಳಿಗೆ ಬೇಗ ಒತ್ತು ಕೊಡಬೇಕು. ತಮಗೆ ಗೊತ್ತಿರುವಂತೆ ವಿಶ್ವವಿದ್ಯಾಲಯಗಳು ಯಾವ ಮಟ್ಟದಲ್ಲಿ ಅವರು ಸಂಶೋಧನೆಗಳನ್ನು ಮಾಡಬೇಕಾಗಿತ್ತೋ, ಅದಕ್ಕೆ ಯಾವ ರೀತಿಯಾಗಿ ಹಣಕಾಸಿನ ನೆರವು ಸಿಗಬೇಕಾಗಿತ್ತೋ, ಅದು ಆಗುತ್ತಿಲ್ಲವೆನ್ನುವಂತಹ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಇವತ್ತಿಗೂ ಅವರು ಸಂಬಳವನ್ನು ಪಡೆಯುವುದಕ್ಕೆ, ಸ್ಥಾನಮಾನಗಳನ್ನು ಪಡೆಯುವಂಥಾದಕ್ಕೆ, ಪುರಸ್ಕಾರಗಳನ್ನು ನಡೆಯುವಂಥಾದ್ದಕ್ಕೆ, ಈ ಕೃಷಿ ವಿಶ್ವವಿದ್ಯಾಲಯಗಳು ಒಂದು ಸಂಸ್ಥೆಯಾಗಿ ಮಾತ್ರ ಮಾರ್ಪಾಡಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು ನೈಜವಾಗಿ ರೈತರಿಗೆ ಸಹಾಯ ಮಾಡಲು ಮುಂದೆ ಬರಬೇಕಾದರೆ ದೊಡ್ಡ ಪ್ರಮಾಣದಲ್ಲಿ ಸಂಶೋಧನೆಯ ಕೆಲಸ, ಎಕ್ಸ್‌ಟೆನ್ಷನ್ ಕೆಲಸವನ್ನು ಮಾಡಬೇಕಾದಂತಹ ಅವಶ್ಯಕತೆ ಇದೆ. ಅದಕ್ಕೆ ಪೂರಕವಾದಂತಹ ಹಣಕಾಸಿನ ಬೆಂಬಲವನ್ನು ಸರ್ಕಾರ ದೊಡ್ಡ ಪ್ರಮಾಣದಲ್ಲಿ ನೀಡಬೇಕಾಗುತ್ತದೆ. ಇವತ್ತು ಧಾರವಾಡದಲ್ಲಿ ಮಾಡಿದಂತಹ ಸಮಿಟ್ ಆಗಿರಬಹುದು, ಕೃಷಿ ಆಯೋಗವಾಗಿರಬಹುದು, ಅವರು ಕೊಟ್ಟಿರುವಂತಹ ಮತ್ತು ತೆಗೆದುಕೊಂಡಿರುವಂತಹ ನಿರ್ಣಯಗಳನ್ನು ಆದಷ್ಟು ಬೇಗ ಜಾರಿಗೆ ತರುವಂತಹ ಕೆಲಸವಾಗಬೇಕೆಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಗುಂಡಪ್ಪ ವಕೀಲ್ (ಔರಾದ್) :— ಮಾನ್ಯ ಉಪಾಧ್ಯಕ್ಷರೆ ನಾವು ನಮ್ಮ ರಾಜ್ಯದ ಮಟ್ಟಿಗೆ ಮಾತನಾಡಬೇಕೆಂದರೆ ಕಳೆದ 53-54 ವರ್ಷಗಳನ್ನು ಹೊರತುಪಡಿಸಿ ನಮ್ಮ ಹಿರಿಯರು ರಾಜ್ಯವನ್ನು ಕಟ್ಟಿದ್ದಾರೆ, ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಿದ್ದಾರೆ, ಎಷ್ಟೋ ಯುದ್ಧಗಳನ್ನು ಮಾಡಿದ್ದಾರೆ, ಅವರು ಪ್ರಗತಿಪರವಾದಂತಹ ಕೆಲಸಗಳನ್ನು ಮಾಡಿದ್ದಾರೆ. ಅವರು ತಮ್ಮಲ್ಲಿರುವಂತಹ ಆದಾಯವನ್ನು ಕ್ರೋಢೀಕರಿಸಿ ಪ್ರಗತಿಪರವಾದಂತಹ ಕೆಲಸವನ್ನು ಮಾಡಿದ್ದಾರೆ. ಆದರೆ ಇವತ್ತು ಏನಾಗಿದೆ ಎಂದರೆ ನಮ್ಮಲ್ಲಿರುವಂತಹ ಆದಾಯವನ್ನು ಕಳೆದುಕೊಂಡಿದ್ದೇವೆ, ಇಡೀ ದೇಶದಲ್ಲೇ ಈ ಪರಿಸ್ಥಿತಿಯಾಗಿದೆ. ಈಗ ನಮ್ಮಲ್ಲಿ ಏನೂ ಇಲ್ಲ, ನಾವು ಸಾಲವನ್ನು ತರುತ್ತಿದ್ದೇವೆ, ನಮಗೆ ಎಲ್ಲಿ ಸಾಲ ಸಿಗುತ್ತದೆಯೋ ಎಂದು ಹುಡುಕುವಂತಹ ಪರಿಸ್ಥಿತಿಯಲ್ಲಿದೆ, ಯಾರು ಸಾಲವನ್ನು ಕೊಡುತ್ತಾರೋ ಅವರ ಬೆನ್ನ ಹಿಂದೆ ಬೀಳುವಂತಹ ವ್ಯವಸ್ಥೆ ನಮ್ಮ ದೇಶದಲ್ಲಿ ಬೆಳೆದುಕೊಂಡು ಬರುತ್ತಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಮ್ಮಲ್ಲಿರುವಂತಹ

ಆದಾಯವನ್ನು ಖರ್ಚು ಮಾಡುವಾಗ ನಾವು ಹೆಚ್ಚು ಖರ್ಚು ಮಾಡಬಹುದು, ಕಡಿಮೆಯಾದರೂ ಖರ್ಚು ಮಾಡಬಹುದು, ಆ ಮಾತು ಬೇರೆ, ಅದರ ಪರಿಣಾಮ ನಮ್ಮ ಮೇಲೆ ಹೆಚ್ಚು ಆಗುತ್ತಾ ಇಲ್ಲ. ಆದರೆ ನಾವು ಬೇರೆ ದೇಶಗಳಿಂದ, ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಂಡು ಬಂದು, ಈ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಿಲ್ಲವೆಂದರೆ ಖಂಡಿತವಾಗಿ ನಮಗೆ ಜಾಗತಿಕ ಭವಿಷ್ಯವಿಲ್ಲವೆನ್ನುವ ಮಾತನ್ನು ಈ ಸಭೆಯಲ್ಲಿ ಹೇಳಬಯಸುತ್ತೇನೆ. ಇವತ್ತು ಜಾಗತಿಕ ಸಂಸ್ಥೆಗಳಿಂದ, ಹುಡ್ಕೋದವರಿಂದ, ಜರ್ಮನ್ ಫಂಡ್, ಈ ರೀತಿಯಾಗಿ ಎಲ್ಲಾ ವಿದೇಶಗಳಿಂದ ಸಾಲವನ್ನು ಬಡ್ಡಿರೂಪದಲ್ಲಿ ತೆಗೆದುಕೊಂಡು ಬಡ್ಡಿಯನ್ನು ಕಟ್ಟುತ್ತೇವೆ, ಈ ಬಡ್ಡಿ ಬೆಳೆಯುತ್ತಿರುತ್ತದೆ. ಈ ರೀತಿಯಾಗಿ ಹಣವನ್ನು ನಾವು ತಂದು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದರೆ ಖಂಡಿತವಾಗಿಯೂ ಭವಿಷ್ಯವಿದೆ, ಇಲ್ಲದಿದ್ದರೆ ಇಲ್ಲವೆನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಈ ಸಭೆಯಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಯವರು ಇದ್ದಾರೆ, ಅವರು ನಾನು ಹೇಳುವ ಮಾತನ್ನು ಗಮನಿಸಬೇಕು. ನಮ್ಮ ಬೀದರ್ ಜಿಲ್ಲೆ ಹಿಂದುಳಿದಿರುವಂತಹ ಜಿಲ್ಲೆಯೆಂದು ಘೋಷಿಸಿದ್ದಾರೆ, ಇಲ್ಲಿ 1989ರಿಂದ ಸುಮಾರು 5300 ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಇವತ್ತು ಅಲ್ಲಿ ಹೋಗಿ ನೋಡಿದರೆ ಕೇವಲ ಐದು ಕೈಗಾರಿಕೆಗಳು ಮಾತ್ರ ಕೆಲಸ ಮಾಡುತ್ತಿವೆ, ಇನ್ನು ಉಳಿದಂತಹ 5,295 ಕೈಗಾರಿಕೆಗಳು ಮುಚ್ಚಿ ಹೋಗಿವೆ, ಇವತ್ತು ಇಂತಹ ನೀತಿಯನ್ನು ನಾವು ಮಾಡುತ್ತಿದ್ದೇವೆ. ಇದನ್ನು "ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಏರಿಯಾ" ಎಂದು ಡಿಕ್ಲೇರ್ ಮಾಡಿ ಶೇ.35ರಷ್ಟು ಸಬ್ಸಿಡಿಯನ್ನು ಕೊಡುತ್ತಾರೆಂದು ಘೋಷಣೆಯನ್ನು ಮಾಡಿದರು. ಸ್ಟೇಟ್ ಗೌರ್ವನ್‌ಮೆಂಟ್‌ನವರು ಮ್ಯಾಚಿಂಗ್ ಸಬ್ಸಿಡಿಯನ್ನು ಕೊಡುತ್ತೇವೆಂದು ಘೋಷಣೆ ಮಾಡಿದರು. ಇಲ್ಲಿ ಯಾರು ಯಾರೋ ಬಂದು ಇಂಡಸ್ಟ್ರೀಯನ್ನು ಹಾಕಿದರು, ಸಬ್ಸಿಡಿಯನ್ನು ಎತ್ತಿಕೊಂಡು ಹೋದರು. ಈ ಬೀದರ್ ಜಿಲ್ಲೆಯ ಜನರು ಈ 5300 ಕೈಗಾರಿಕೆಗಳು ಪ್ರಾರಂಭವಾದರೆ ಸಾವಿರಾರು ಜನರಿಗೆ ಉದ್ಯೋಗ ಸಿಗುತ್ತದೆನ್ನುವಂತಹ ವಿಶ್ವಾಸದಲ್ಲಿದ್ದರು, ಆದರೆ ಅದೆಲ್ಲಾ ಸುಳ್ಳಾಯಿತು. ನಾವು ಈ ರೀತಿ ಒಂದು ಸರಿಯಾದ ಉದ್ದೇಶವಿಲ್ಲದೇ, ಗೊತ್ತುಗುರಿಯಿಲ್ಲದೇ ಯಾವುದೇ ಫೀಲ್ಡ್‌ನಲ್ಲಿ ಕೆಲಸ ಮಾಡಿದರೆ ಅಥವಾ ಯೋಜನೆಗಳನ್ನು ಹಾಕಿದರೆ ಖಂಡಿತವಾಗಿ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ನಾನು ಮತ್ತೊಂದು ಮಾತನ್ನು ಹೇಳಬಯಸುವುದೆನೆಂದರೆ "ನಮ್ಮ ಯಾವ ಕಾಲು ಎಡವಿ, ಬೆರಳಿಗೆ ನೋವಾಗುತ್ತದೆ, ಅದಕ್ಕೆ ಪದೇ ಪದೇ ಏಟಾಗುತ್ತದೆ" ಎನ್ನುವ ಮಾತನ್ನು ಹೇಳುತ್ತೇವೆ. ಅದೇ ರೀತಿಯಲ್ಲಿ ಬೀದರ್ ಜಿಲ್ಲೆಯಲ್ಲೂ ಕಂಟಿನ್ಯೂಯಸ್ ಆಗಿ ಹೊಡೆತದ ಮೇಲೆ ಹೊಡೆತ ಬೀಳುತ್ತಿದೆ. ಮಾನ್ಯ ಸಾರಿಗೆ ಮಂತ್ರಿಯವರು ಸಭೆಯಲ್ಲಿ ಇದ್ದಾರೆ, ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ 1992ನೇ ಇಸವಿಯಲ್ಲಿ ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಟಿಕೇಟ್‌ಗಳು ಪ್ರಿಂಟ್ ಆಗಿ ಇಡೀ

ಕರ್ನಾಟಕ ರಾಜ್ಯದ ಬಸ್‌ಗಳಲ್ಲಿ ಖರ್ಚಾಗುತ್ತಿತ್ತು, ಮತ್ತೆ 1996ರಲ್ಲಿ 50ರ ನಕಲಿ ನೋಟುಗಳೂ ಸಹ ಬೀದರ್ ಜಿಲ್ಲೆಯಲ್ಲೇ ಪ್ರಿಂಟ್ ಆಗಿ ಸರ್ಕುಲೇಷನ್ ಆಗುತ್ತಿತ್ತು.

4.10 ಪಿಎಂ

ಬೀದರ್ ಜಿಲ್ಲೆಯಲ್ಲಿ ಇದನ್ನು ಪ್ರಿಂಟ್ ಮಾಡಿರತಕ್ಕಂಥಹ ವ್ಯಕ್ತಿ ಯಾರು ಎಂದರೆ ಜಿಲ್ಲಾ ಪಂಚಾಯಿತಿಯ ಪ್ರೆಸಿಡೆಂಟ್ ಅವರು. ಅದು ಪತ್ತೆ ಆಯಿತು. ಆ ಪ್ರಿಂಟ್ ಮಾಡತಕ್ಕಂಥ ಮೆಷಿನರಿ ಸಹ ಸಿಕ್ಕಿತು. ಆದರೆ ಏನಾಯಿತು? ಇಲ್ಲಿಯವರೆಗೆ ಏನೂ ಕ್ರಮ ಜರುಗಿಲ್ಲ. ಯಾರ ಮೇಲೂ ಕ್ರಮ ಆಗಿಲ್ಲ. ಬಸ್ಸಿನ ಟಿಕೇಟ್ ಪ್ರಿಂಟ್ ಮಾಡಿ, ಏನೂ ಇಲ್ಲ ಸ್ವತಂತ್ರತೆ ಇದೆ. ಏನು ಬೇಕಾದ್ದು ಮಾಡಿ. ಖೋಟಾ ನೋಟುಗಳನ್ನು ಪ್ರಿಂಟ್ ಮಾಡಿ, ಯಾರೂ ಕೇಳುವವರು ಇಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಈಗ ಬಂದ್ ಮಾಡಿರುವಂತಹ ವಿಚಾರ ಅಲ್ಲ. ನಡೆಯುವಂತಹ ಸಂದರ್ಭದಲ್ಲಿ ಯಾರ್‍ಯಾರ ಕಾಲದಲ್ಲಿ ಏನೇನು ನಡೆಯಬೇಕೋ ಅದು ನಡೆದಿದೆ. ನಡೆದಿಲ್ಲ ಎಂಬ ವಿಚಾರ ಅಲ್ಲ. ಆದರೆ ಈ ಭಾಲ್ಕಿ ಟಿಕೇಟ್ ಪ್ರಕರಣದಲ್ಲಿ ಎಷ್ಟು ಜನ ಶಾಮೀಲಾಗಿದ್ದರು, ಅವರ ವಿರುದ್ಧ ಮೊಕದ್ದಮೆ ಹಾಕುವುದರ ಜೊತೆಗೆ ಇವತ್ತು ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಯುತ್ತಿದೆ. ತನಿಖೆ ನಡೆಸಿದ್ದೇವೆ. ಅದರಲ್ಲಿ ಭಾಗಿ ಆಗಿರುವಂತಹ ಹಿಂದಿನ ಸರ್ಕಾರದವರು ಮಾಡಿದ್ದಾರೆ, ಮಾಡಿಲ್ಲ ಎಂದಲ್ಲ. ಅದೇ ವಿಚಾರವಾಗಿ ಮುಂದುವರಿಯುತ್ತಿರುವಂತಹದು. ಆ ನ್ಯಾಯಾಲಯದ ತೀರ್ಪು ಬರುವವರೆಗಂತೂ ನಾವು ಕಾಯಬೇಕಲ್ಲಾ, ಅದರ ಮುಂಚಿತವಾಗಿ ನಾವು ಯಾವುದೇ ಆದೇಶವನ್ನು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ನ್ಯಾಯಾಲಯದ ನಿಂದನೆ ನಾನು ಮಾಡಿದ ಹಾಗಾಗುತ್ತದೆ. ಯಾವುದೇ ಒಂದು ತೀರ್ಪು ಸರ್ಕಾರದ ವತಿಯಿಂದಾಗಲೀ ಅಥವಾ ಇಲಾಖೆಯ ವತಿಯಿಂದ ಆಗಲಿ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ನ್ಯಾಯಾಲಯದ ನಿಂದನೆ ಆಗುತ್ತದೆ. ತನಿಖೆಯ ಹಂತದಲ್ಲಿದೆ. ತನಿಖೆ ಆದ ನಂತರ ಅದಕ್ಕೆ ಗುರಿಯಾಗಿರುವಂತಹ ಜನ ಯಾರು ಎಂದು ಗುರುತಿಸಿದ್ದೇವೆ. ಪೋಲೀಸ್ ಮೊಕದ್ದಮೆಗಳನ್ನು ಹಾಕಿದ್ದೇವೆ. ನ್ಯಾಯಾಲಯದಿಂದ ಅವರು ಜಾಮೀನು ಮೇಲೆ ಬಿಡುಗಡೆ ಆಗಿದ್ದಾರೆ. ಇವತ್ತು ನ್ಯಾಯಾಲಯಗಳಲ್ಲಿ ಮೊಕದ್ದಮೆಗಳು ಮುಂದುವರೆದಿವೆ. ತೀರ್ಪಿಗಾಗಿ ಕಾಯುತ್ತಿದ್ದೇವೆ. ನಂತರ ಸರ್ಕಾರ ನನ್ನ ಇಲಾಖೆ ನೇರವಾದಂತಹ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಗುಂಡಪ್ಪ ವಕೀಲ್ :— ಸ್ವಾಮಿ ಇನ್ನು 1968ರಲ್ಲಿ ಕಾರಂಜಾ ಯೋಜನೆ 9 ಕೋಟಿ ರೂಪಾಯಿಗಳಲ್ಲಿ ಪ್ರಾರಂಭ ಆಗಿದೆ. ಇವತ್ತಿನವರೆಗೂ ಮುಗಿದಿಲ್ಲ. ಖರ್ಚಾದ ಹಣ 356 ಕೋಟಿ ರೂಪಾಯಿಗಳು. ಈ 356 ಕೋಟಿ ರೂಪಾಯಿಗಳಲ್ಲಿ 200

ಕೋಟಿ ರೂಪಾಯಿಗಳು ಕೇವಲ ಈ ಸಾಮಾನು ಖರೀದಿಗೆ ಹೋಗಿದೆ. ಯಾರಿಗೆ ಶಿಕ್ಷೆ ಆಗಿದೆ? ಚಾಣಕ್ಯ ತನ್ನ ಅರ್ಥ ಶಾಸ್ತ್ರದಲ್ಲಿ ಬರೆದಿದ್ದಾನೆ. "ಯಾವ ರಾಜನು ತನ್ನ ಭ್ರಷ್ಟ ಅಧಿಕಾರಿಗಳನ್ನು ಗುರುತಿಸಿ ಕಠಿಣವಾದಂತಹ ಶಿಕ್ಷೆಯನ್ನು ಕೊಟ್ಟು ಇತರ ಅಧಿಕಾರಿಗಳಿಗೆ ಭಯ ಹುಟ್ಟಿಸುವಂತೆ ಮಾಡುವುದಿಲ್ಲವೋ ಆ ರಾಜ್ಯದಲ್ಲಿ ದರಿದ್ರ ದೇವತೆ ತಾಂಡವಾಡುತ್ತಾಳೆ" ಎಂದು ಬರೆದಿದ್ದಾನೆ. ಹಾಗೆ ಎಷ್ಟು ಜನರಿಗೆ ಶಿಕ್ಷೆ ಮಾಡಿದ್ದೀರಿ? ಇಡೀ ಬೀದರ್ ಜನ ಎಲ್ಲಾ ಅರ್ಜಿ ಕೊಡುತ್ತಾರೆ. ಅಲ್ಲೊಂದು ನಿಯೋಗಕ್ಕೆ ಬರುತ್ತಾರೆ, ಸರ್ಕಾರಕ್ಕೆ ಹೇಳುತ್ತಾರೆ. ಇವತ್ತು ಪತ್ರಿಕೆಯಲ್ಲಿ ಬರುತ್ತದೆ ಇಷ್ಟೆಲ್ಲಾ ಆದರೂ ಸಹಿತ ಒಂದಾದರೂ ಪ್ರಕರಣದಲ್ಲಿ ನೀವು ಶಿಕ್ಷೆ ಕೊಟ್ಟು ಬೀದರ್ ಜಿಲ್ಲೆಯಲ್ಲಿ ಆಡಳಿತ ಸುಧಾರಣೆಗಾಗಿ ಯಾವುದಾದರೂ ಕ್ರಮವನ್ನು ತೆಗೆದುಕೊಂಡು ಭಯವನ್ನು ಹುಟ್ಟಿಸತಕ್ಕಂಥ ಕ್ರಮ ಜರುಗಿದೆಯೇ ಎಂದು ಈ ಸಭೆಯಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತೇನಾಗುತ್ತದೆ ಎಂದರೆ ಈ ಉಪ್ಪಿನವನು ಅಳುತ್ತಾನೆಂದರೆ ತೆಂಗಿನವನೂ ಸಹ ಅಳುತ್ತಾನಂತೆ. ಉಪ್ಪಿನವ, ತೆಂಗಿನವರು ಇಬ್ಬರೂ ಕುಳಿತುಕೊಂಡು ವ್ಯಾಪಾರಕ್ಕೆ ಹೋದಾಗ ಮಳೆ ಆಗುತ್ತದೆ. ಉಪ್ಪಿನವ ಉಪ್ಪು ತೊಯ್ದು ಕರಗಿ ಹೋಗಿದೆ ಎಂದು ಅಳುವಾಗ ತೆಂಗಿನವನೂ ಸಹ ನನ್ನ ತೆಂಗೂ ಹೋಯ್ತು ಎಂದು ಅಳುತ್ತಿದ್ದನಂತೆ. ಇವತ್ತು ಆ ರೀತಿ ಆಗಿದೆ. ಇವತ್ತೇನು ಆಗಿದೆ ಎಂದರೆ ಬೀದರ್ ವಿಚಾರ ಹೇಳುತ್ತೇನೆ. ಎಲ್ಲಾದರೂ ಓಲ್ಡ್ ಮೈಸೂರಿನಲ್ಲಿ ನಾರ್ತ್ ಕರ್ನಾಟಕದಲ್ಲಿ ಈ ಉದಾಹರಣೆ ಇದೆಯಾ? ರೋಡಿಗೆ ರೋಡು ನುಂಗಿದ ಇದಾಹರಣೆ ಎಲ್ಲಾದರೂ ಇದೆಯಾ? ಸ್ವಾಮಿ, ಸಂತ್‌ಪುರ್‌ನಿಂದ ಸಣ್ಣಮೋರಿಗೆ ಆರು ತಿಂಗಳ ಕೆಳಗೆ ಒಂದು ಕೋಟಿ ರೂಪಾಯಿಯ ಬೋಗಸ್ ಬಿಲ್ ಮಾಡಿ ಹಣ ಲೂಟಿ ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಯಿಂದ ಆರು ಜನ ಸಸ್ಪೆಂಡ್ ಆಗಿದ್ದಾರೆ. ಇವತ್ತು ಆರು ತಿಂಗಳು ಸಸ್ಪೆಂಡ್‌ನಲ್ಲಿ ಉಳಿದರು ಎಂದು ಹೇಳಿ ಯಾವುದೇ ಎನ್‌ಕ್ವೈರಿ ಇಲ್ಲದೆ ಪುನ: ಅವರಿಗೆ ನೌಕರಿಯಲ್ಲಿ ತೆಗೆದುಕೊಂಡಿದ್ದೀರಲ್ಲಾ, ಅವರ ಸರ್ವೀಸ್ ತೆಗೆದುಕೊಂಡಿದ್ದೀರಲ್ಲಾ, ಈ ರೀತಿ ಮೈಸೂರಿನಲ್ಲಿ ಆಗುತ್ತದೆಯೇ? ಬೆಂಗಳೂರು ಏರಿಯದಲ್ಲಿ ಈ ರೀತಿ ಆಗುತ್ತದೆಯೇ? ಶಿವಮೊಗ್ಗದಲ್ಲಿ ಆಗುತ್ತದೆಯೇ? ಇವತ್ತು ರೋಡ್ ಮಾಡಲಾರದೇ ರೋಡ್ ಮಾಡಿದ್ದೇವೆಂದು ಹೇಳಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದರೆ ಇಲ್ಲಿನ ಜನ ಸುಮ್ಮನೆ ಕೂರುತ್ತಾರಾ? ಸ್ವಾಮೀ, ನಾವೂ ಸಹ ಸುಮ್ಮನೆ ಕೂಡುತ್ತಿಲ್ಲ. ನಾವೆಲ್ಲಾ ಏನು ಪ್ರಯತ್ನಗಳನ್ನು ಮಾಡಬೇಕೋ ಅವೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಆದರೆ ಆಕ್ಷನ್ ಆಗುತ್ತಿಲ್ಲ. ಏಕೆ ಆಗುತ್ತಿಲ್ಲ? ನಾನು ಹೇಳಬೇಕು ಎಂದರೆ ಸರ್ಕಾರದ ಯೋಜನೆಗಳು ಎಷ್ಟೇ ಒಳ್ಳೆಯವು ಆಗಿದ್ದರೂ, ಆ ಒಳ್ಳೆಯ ಯೋಜನೆಗಳನ್ನು ನಮ್ಮ ಕ್ಷೇತ್ರಕ್ಕೆ ಕಳುಹಿಸಿದರೂ ಕೂಡ ಆ ಯೊಜನೆಗಳನ್ನು ಅನುಷ್ಠಾನಗೊಳಿಸತಕ್ಕ ಮೆಷಿನರಿ ಎಲ್ಲಿಯವರೆಗೆ ಅದು ಸರ್ಕಾರದ ಕಂಟ್ರೋಲ್‌ನಲ್ಲಿ, ಪ್ರಜೆಗಳ ಕಂಟ್ರೋಲ್‌ನಲ್ಲಿ ಇದ್ದುಕೊಂಡು ಸತ್ಯವಾಗಿ

ಕೆಲಸವನ್ನು ಮಾಡುವುದಿಲ್ಲವೋ, ಅಲ್ಲಿಯವರೆಗೆ ಯಾವ ಪ್ರಗತಿಯೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದು ಮಾತು ಹೇಳುತ್ತೇನೆ. ನಮ್ಮ ಕಡೆ ಹಿರಿಯರು ಹೇಳುತ್ತಾರೆ, ಒಂದು ಬುದ್ಧಿ ಮಾತು ಹೇಳುತ್ತಾರೆ. ಏನೆಂದರೆ "ಯಾವ ಸಭೆಯಲ್ಲಿ ವಯಸ್ಸಾದಂತಹ ವೃದ್ಧರು ಇರುವುದಿಲ್ಲವೋ ಅದು ಸಭೆಯೇ ಅಲ್ಲ" ಯಾವ ಸಭೆಯಲ್ಲಿ ವಯಸ್ಸಾದಂತಹ ವೃದ್ಧರು ಇರುವುದಿಲ್ಲವೋ ಅದು ಸಭೆನೇ ಅಲ್ಲ. ಯಾವ ಹಿರಿಯರು, ವೃದ್ಧರು ಧರ್ಮದ ಮಾತಾಡುವುದಿಲ್ಲವೋ ಅವರು ಹಿರಿಯರಲ್ಲ, ವೃದ್ಧರಲ್ಲ ಯಾವ ಧರ್ಮದಲ್ಲಿ ಸತ್ಯದ ಉಲ್ಲೇಖ ಇರುವುದಿಲ್ಲವೋ ಅದು ಧರ್ಮ ಅಲ್ಲ. ಯಾವ ಸತ್ಯ ಮಾತಾಡುವುದರಿಂದ ಕಷ್ಟ ದೂರ ಆಗುವುದಿಲ್ಲವೊ ಅದು ಸತ್ಯ ಅಲ್ಲ ಎನ್ನತಕ್ಕಂಥಹ ಮಾತು ಇದೆ. ಇವತ್ತು ಈ ಸಭೆಯಲ್ಲಿ ಹಿರಿಯರು ಇದ್ದಾರೆ. ಧರ್ಮ, ನ್ಯಾಯ ನೀತಿ ಮೇಲೆ ನಡೆಯತಕ್ಕಂಥಹ ಹಿರಿಯರು ಇದ್ದಾರೆ. ಸತ್ಯವನ್ನು ಎತ್ತಿ ಹಿಡಿಯತಕ್ಕಂಥಹ ಹಿರಿಯರು ಇದ್ದಾರೆ. ಇಷ್ಟೆಲ್ಲಾ ಇದ್ದುಕೊಂಡು ಇವತ್ತು ನಮ್ಮಿಂದ ಈ ಭ್ರಷ್ಟಾಚಾರವನ್ನು ತಡೆ ಹಿಡಿಯಲಿಕ್ಕೆ ಆಗುತ್ತಿಲ್ಲ. ಆದ್ದರಿಂದ ನಾವು ಯಾವುದೇ ಯೋಜನೆ ಹಾಕಿಕೊಂಡರೂ, ಆ ಯೋಜನೆಗಳನ್ನು ಒಳ್ಳೆಯ ರೀತಿಯಿಂದ ಕಾರ್ಯಗತ ಮಾಡಲಾರದೇ ಹೋದರೆ ಜನಕ್ಕೆ ಆ ಯೋಜನೆಯ ಲಾಭ ಕೊಡಲಿಲ್ಲ ಎಂದರೆ ಅದು ಏನೂ ಸಾರ್ಥಕ ಆಗುವುದಿಲ್ಲ. ಏನಾಗುತ್ತದೆ ಎಂದರೆ ಈ ತೂತು ಬಿದ್ದ ರಂಧ್ರ ಇರತಕ್ಕ ಕೊಡದಲ್ಲಿ ಸಮುದ್ರ ತುಂಬಿದರೂ ಸಹ ಏನೂ ಆಗುವುದಿಲ್ಲ. ನೀರು ಸೋರಿ ಹೋಗುತ್ತದೆ. ಅದೇ ರೀತಿ ಇಂದಿನ ವ್ಯವಸ್ಥೆ ಆಗುತ್ತಿದೆ. ಆದರಿಂದ ಸರ್ವ ಸಾಮಾನ್ಯರಿಗೆ ಏನೂ ಉಪಯೋಗ ಆಗುತ್ತಿಲ್ಲ. ಆದ್ದರಿಂದ ನಾವು ಬೀದರ್ ಜನ ಎಲ್ಲಾ ಹೇಗಿದ್ದೇವೆಂದರೆ ನಮಗೆ ಎಷ್ಟೇ ಕಷ್ಟ ಆದರೂ ಸಹಿತ ನಾವು ತಾಳಿಕೊಳ್ಳುತ್ತೇವೆ. ಅದು ಬೇರೆ ಜನರಿಗೆ ಕಾಣುವುದಿಲ್ಲ. ಅದಕ್ಕಾಗಿ ನಮ್ಮ ಸಭಾಧ್ಯಕ್ಷರು ಬೆಲ್ ಹೊಡೆಯುತ್ತಿದ್ದಾರೆ. ನಾನು ಕೂರಬೇಕಾಗುತ್ತದೆ. ಏಕೆಂದರೆ ನಾನು ನೀವು ಬೆಲ್ ಹೊಡೆದರೆ ನಾನು ಕೂರುತ್ತೇನೆಂದು ಮಾತು ಕೊಟ್ಟಿದ್ದೇನೆ. ನನಗೆ ಅವಕಾಶ ಕೊಡಿ ಎಂದು ಹೇಳಿದ್ದಾನೆ. ಆದ್ದರಿಂದ ನಾನೊಂದು ಉರ್ದು ಕವಿತೆಯನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ. ಮಾನ್ಯ ಸಾರಿಗೆ ಸಚಿವರೇ, ನಾವು ಬೀದರ್ ಜನ ಹೇಗಿದ್ದೇವೆ ಎಂದರೆ ಆ ಬಗ್ಗೆ ಒಂದು ಉರ್ದು ಕವಿತೆ ಹೇಳುತ್ತೇನೆ.

"ದುನಿಯಾ ಮೇ ಕುಚ್ ಐಸೇ ಭೀ ಲೋಗ್ ಹೈ"

ಸಾರ್, ನಾನು ಹೇಳುತ್ತಿರುವುದು ಕವಿತೆ.

"ದುನಿಯಾ ಮೇ ಕುಚ್ ಐಸೇ ಭೀ ಲೋಗ್ ಹೈ"
ಜೋ ಮೆಹಿಫಿಲ್ ಮುಸ್ಕುರಾತೇ ಹೈ,
"ದುನಿಯಾ ಮೇ ಕುಚ್ ಐಸೇ ಭೀ ಇನ್ಸಾನ್ ಹೈ,
ಜೋ ಮೆಹಿಫಿಲ್ ಮುಸ್ಕುರಾತೇ ಹೈ,
ಔರ್ ತನಹಾಯ್ ಮೇ ರೋತೇ ಹೈ ..."

ಆ ರೀತಿ. ಜಗತ್ತಿನಲ್ಲಿ ಇಂತಹ ಜನರೂ ಇದ್ದಾರೆ. ಅವರು ಸಭೆ ಸಮಾರಂಭಗಳಲ್ಲಿ ನಗುತ್ತಾರೆ. ಆದರೆ ಏಕಾಂತದಲ್ಲಿ ಅಳುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಎಸ್.ಎಸ್ ಪಾಟೀಲ್ ಅವರೇ, ಮಾನ್ಯ ಸದಸ್ಯರು ಹೇಳಿದ ಕವಿತೆಯ ಅರ್ಥ ಗೊತ್ತಾಯಿತಾ? ಇಲ್ಲಿ ಇವರು ಮಾತನಾಡುವಾಗ ಬಹಳ ಸಂತೋಷ ಆಗುತ್ತದೆ. ಕ್ಷೇತ್ರಕ್ಕೆ ಹಿಂತಿರುಗಿದಾಗ ಅಳುತ್ತಾರೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :— ಸರ್ಕಾರದ ವೈಫಲ್ಯದಿಂದ ಅಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ :— ಸರ್ಕಾರದ ಆಡಳಿತ ನೋಡಿ ಜನ ಅಳುತ್ತಾರೆ ಎಂದು.

ಶ್ರೀ ಗುಂಡಪ್ಪ ವಕೀಲ್ :— ನಾನು ಸಬ್ಮಿಷನ್ ಮಾಡತಕ್ಕ ಉದ್ದೇಶ ಏನು ಎಂದರೆ ಬೀದರ್ ಜನತೆಗೆ ಅನ್ಯಾಯ ಆಗಿದ್ದರೂ ಸಹಿತ ಈ ಒಂದು ಪ್ರವೃತ್ತಿ ಇರತಕ್ಕ ಜನ ಎಂದು ಹೇಳಬೇಕಾಗಿತ್ತು. ಅದಕ್ಕೆ ಈ ಒಂದು ಕವಿತೆಯನ್ನು ನಾನು ಹೇಳುತ್ತಿದ್ದೇನೆ.

"ದುನಿಯಾ ಮೇ ಕುಛ್ ಐಸೇ ಭೀ ಲೋಗ್ ಹೋತೇ ಹೈ
ಜೋ ಮೈಫಿಲ್ ಮೇ ಮುಸ್ಕುರಾತೇ ಹೈ, ತನಹಾಯ್ ಮೇ ರೋತೇ ಹೈ"

ಆ ರೀತಿ ನಾವು ನಿಮಗೆ ನೋಡಲಿಕ್ಕೆ ಚೆನ್ನಾಗಿರುತ್ತೇವೆ, ನಗುತ್ತಿರುತ್ತೇವೆ- ಎಂದು ಕಾಣಿಸಿದರೂ ಸಹ ನಮ್ಮ ಮೇಲೆ ಬಹಳ ಅನ್ಯಾಯ ಆಗುತ್ತಿದೆ. ಆಫಿಸರ್ಸ್ ಅಲ್ಲಿ ಚೆನ್ನಾಗಿ ಬರುತ್ತಿಲ್ಲ. ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ವಿಶ್ವಬ್ಯಾಂಕಿನ ಕುಡಿಯುವ ನೀರಿನ ಯೋಜನೆಯಡಿ ನನ್ನ ಒಂದೇ ಕ್ಷೇತ್ರದಲ್ಲಿ 40 ಹಳ್ಳಿಗಳನ್ನು ಅಳವಡಿಸಿಕೊಂಡು 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಖಾತೆಯಲ್ಲಿ ಹಣ ಖರ್ಚಾಗಿದೆ. ಆದರೆ ಎಂದು ಹಳ್ಳಿಗೂ ನೀರಿನ ಸರಬರಾಜು ಆಗಿಲ್ಲ. ಸರ್ಕಾರದ ಕಡೆಯಿಂದ ಯಾವ ಹಳ್ಳಿಗಾದರೂ ಬಂದರೂ ಪ್ರಮಾಣಿಸಿ ನೋಡಬಹುದು. ಇಂಥ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಿದೆ. ನಮ್ಮ ಜಿಲ್ಲೆ ಹಿಂದುಳಿದ ಪ್ರದೇಶವೆಂದು ನಮ್ಮ ಜಿಲ್ಲೆಗೆ ಸರ್ಕಾರದಿಂದ ಹೆಚ್ಚಿಗೆ ಅನುದಾನ ಬಂದಿದೆ. ನಮ್ಮಲ್ಲಿರತಕ್ಕಂಥ ಧುರಿಣರು ಈ ನಿಟ್ಟಿನಲ್ಲಿ ವಿಚಾರ ಮಾಡಿ ಕೆಲಸ ಮಾಡಿಲ್ಲ. ರಾಜಕೀಯ ವ್ಯಕ್ತಿಗಳಾದ ನಾವೆಲ್ಲಾ ಕುಳಿತುಕೊಂಡು ಭ್ರಷ್ಟಾಚಾರವನ್ನು ಹೆಚ್ಚು ಮಾಡಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಬೇರೆ ಬೇರೆ ಪಾರ್ಟಿ ಎಂದು ಇಲ್ಲ. ಅಲ್ಲಿ ಇರುವುದು ಒಂದೇ, ಒಟ್ಟು ಪಾರ್ಟಿ ಅದುವೇ ಭ್ರಷ್ಟಾಚಾರದ ಪಾರ್ಟಿ. ಯಾವುದೇ ಒಂದು ಭ್ರಷ್ಟಾಚಾರ ಮಾಡಬೇಕಾದರೆ ಎಲ್ಲರೂ ಕುಳಿತುಕೊಂಡು ಮಾಡುವಂಥ ವ್ಯವಸ್ಥೆ ನಮ್ಮಲ್ಲಿ ಬಂದಿದೆ. ಇದು ಬಹಳ ಅಪಾಯ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್:— ಎಲ್ಲಾ ಪಾರ್ಟಿಯವರು ಎಂದು ಹೇಳಿದರೆ ಅದರಲ್ಲಿ ಇವರೊಬ್ಬರು ಸದಸ್ಯರಾಗಿರಬೇಕಲ್ಲಾ ಎಂದು ಕೇಳುತ್ತಿದ್ದೇನೆ.

ಶ್ರೀ ಗುಂಡಪ್ಪ ವಕೀಲ್:— ಮಾನ್ಯ ಉಪಾಧ್ಯಕ್ಷರೆ, ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಪೀರ್ ಎಂದು ಕೂಡಿಸುತ್ತಾರೆ. ಮೊಹರಂನಲ್ಲಿ ಪಂಜುಗಳು ಇರುತ್ತವೆ. ಆ ಪೀರ್‌ಗಳಲ್ಲಿ ಬಹಳಷ್ಟು ಪೀರ್‌ಗಳು ಇರುತ್ತವೆ. ಮೌಲನಸಾಬ್‌ಜಿ ಖಾಸಿಂದುಲಾ, ಹೈದರ್‌ಸಾಬ್ ಈ ರೀತಿಯೆಲ್ಲಾ ಪೀರ್‌ಗಳನ್ನು ಕೂಡಿಸುತ್ತಾರೆ. ಆ ಪೀರ್‌ಗಳನ್ನು ಕೂಡಿಸಿ ಅದನ್ನು ಈ ಮೊಹರಂನಲ್ಲಿ ಜುಲೂಸ್ ತೆಗೆಯುತ್ತಾರೆ. ಜುಲೂಸ್ ತೆಗೆಯುವಾಗ ಯಾವ ಪೀರ್‌ನ ಮುಂದೆ ಜನ ಇರುತ್ತಾರೋ ಆ ಪೀರ್‌ಗೆ ಮಾತ್ರ ಜೈ ಎಂದು ಹೇಳಬೇಕಾಗುತ್ತದೆ.

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, he is a very good orator. The difficulty in Bidar is one sher. ಅಲ್ಲಿ ಬಿ.ಜೆ.ಪಿ 5 ಜನ ಎಂ.ಎಲ್.ಎ ಏನು ಇದ್ದಾರೆ they are not taking others with them. ಅವರು ಕವಿತೆ ಏನು ಹೇಳುತ್ತಾರೆಂದರೆ 'ಹಯಾತ್ ಲೇಕೇ ಚಲೋ ಕಯನಾಥ್ ಲೇಕೇ ಚಲೋ, ಚಲೊತೋ ಸಾರೇ ಜಮಾನ್ ಕೊ ಸಾತ್ ಲೇ ಚಲೋ' ತಾವು ಎಂ.ಎಲ್.ಎ. ಆಗಿದ್ದೀರಿ, ಎಲ್ಲರನ್ನೂ ಒಟ್ಟಿಗೆ, ಜೊತೆಗೂಡಿಸಿ ತೆಗೆದುಕೊಂಡು ಹೋದರೆ ಬೀದರ್‌ಗೆ ಬಹಳ ಕರಕಿ ಆಗುತ್ತದೆ.

ಶ್ರೀ ಗುಂಡಪ್ಪ ವಕೀಲ್:— ಮಾನ್ಯ ಉಪಾಧ್ಯಕ್ಷರೆ, ನಾನು ಏನು ಹೇಳುತ್ತಿದ್ದೆನೆಂದರೆ ಈ ಪೀರ್‌ಗಳನ್ನು ಕೂಡಿಸುವಾಗ ಮೌಲಾನಾಸಾಬ್, ಖಾಸಿದುಲ್, ಹೈದರ್‌ಸಾಬ್ ಪೀರ್‌ಗಳು ಇರುತ್ತವೆ. ಈ ಪೀರ್‌ಗಳಿಗೆ ಜನರೆಲ್ಲಾ ಘೋಷಣೆ ಹಾಕುತ್ತಾರೆ. ಮೌಲಾನಿಜಿದೋ ಜಾರೊ ಜೀನೋ, ಹೈದರ್ ಸಾಬ್ ಜಿ ದೊ ಜಾರೋ ಜೀನೋ ಎಂದು ಈ ಘೋಷಣೆ ಹಾಕ್ಕುತ್ತಾರೆ. ಹಾಗೆ ಘೋಷಣೆ ಹಾಕುವುದಕ್ಕೆ ಒಬ್ಬನಿಗೆ ಸಿಟ್ಟು ಬಂತಂತೆ. ಅವನು ಏನು ಹೇಳಿದನೆಂದರೆ ಇದೆಲ್ಲಾ ಬೇರೆ ಬೇರೆ ಏಕೆ ಘೋಷಣೆ ಹಾಕುತ್ತೀರಿ, ಒಟ್ಟು ಪೀರ್‌ಕಿ ದೋ ಜಾರೋ ಜೀನೋ ಎಂದು ಘೋಷಣೆ ಹಾಕಿ ಎಂದು ಹೇಳಿದನಂತೆ. ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಕಳೆದ 50 ವರ್ಷಗಳಿಂದ ಏನು ಬೆಳೆಸಿದ್ದಾರೆ, ನಾವು 5 ಜನ ಎಂ.ಎಲ್.ಎ ಇದ್ದೇವೆ, ಆದರೆ ನಿಮ್ಮ ಜನ ಯಾರು ಇದ್ದಾರೆ ಅವರಿಗೆ ಯಾವ ಪಾರ್ಟಿ ಇಲ್ಲ, ಪಕ್ಷ ಇಲ್ಲ, ಹಣ ಲೂಟಿ ಮಾಡುವುದಕ್ಕೆ ಸ್ಟಾರ್ಟ್ ಮಾಡಿದವರೇ ಅವರು. ಸರ್ಕಾರ ಕೊಟ್ಟಂಥ 350 ಕೋಟಿ ರೂಪಾಯಿಗಳನ್ನು ತಿಂದವರು ಅವರೇ. ರೋಡ್ ಕೆಲಸ ಆಗದೆ ಅವರ ಹಣವನ್ನು ನುಂಗಿಹಾಕಿದವರು ಅವರೇ ಆಗಿದ್ದಾರೆ. ಅಂಥವರಿಗೆ ಎಂಕರೇಜ್ ಮಾಡಬೇಡಿ, ಸರ್ಕಾರದಲ್ಲಿರತ್ಕಂಥ ತಾವು ಆ ನಿಟ್ಟಿನಲ್ಲಿ ಸ್ವಲ್ಪ ಗಮನಹರಿಸಿ ನೋಡಿ ಎಂದು ನಾನು ಹೇಳುತ್ತಿದ್ದೇನೆ. ಇನ್ನು ಯಾವುದೇ ಒಂದು ಊರಿನಲ್ಲಿ ಒಬ್ಬ ಮನುಷ್ಯನಿಗೆ ಕಾಯಿಲೆ ಬಂದರೆ ನಾವು

ಜೀಪಿನಲ್ಲಿ ಅಥವಾ ಆಟೋರಿಕ್ಷಾದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಔಷಧಿ ಕೊಡಿಸುತ್ತೇವೆ. ಆದರೆ ಕಾಲರಾ ಅಥವಾ ಮಹಾಮಾರಿ ಬೇನೆ ಬಂದು ಇಡೀ ಊರಿಗೇ ಊರೇ ರೋಗಿಸ್ಟರಾಗಿ ಬಿದ್ದುಬಿಟ್ಟರೆ ಆಗ ದವಾಖಾನೆಯ ಡಾಕ್ಟರುಗಳು, ನರ್ಸ್‌ಗಳು ಆ ಊರಿಗೆ ಬಂದು ಕ್ಯಾಂಪ್ ಹಾಕಿ ಟ್ರೀಟ್‌ಮೆಂಟ್ ಕೊಡಬೇಕು. ಆ ಒಂದು ಅವಸ್ಥೆ ಬೀದರ್‌ನಲ್ಲಿದೆ. ಇಡೀ ಬೀದರ್ ಜಿಲ್ಲೆಯ ಜನರು ಕಾಯಿಲೆಯಿಂದ ನರಳುತ್ತಿದ್ದಾರೆ. ಆದಕ್ಕಾಗಿ ಆಸ್ಪತ್ರೆಯವರು ಎಲ್ಲಾ ಅಲ್ಲಿ ಬಂದು ಕ್ಯಾಂಪ್ ಹಾಕಬೇಕಾಗುತ್ತದೆ. ನಾನು ಈ ಸಭೆಯ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ವಿನಂತಿ ಮಾಡುಕೊಳ್ಳುವುದೇನೆಂದರೆ ಈ ಸರ್ಕಾರ ಒಂದು ಎರಡು ವರ್ಷವಾದರೂ ಸಹಿತ ತಾವು ಬೀದರ್ ಜಿಲ್ಲೆಗೆ ಬಂದಿಲ್ಲ. ತಾವು ಶೀಘ್ರದಲ್ಲಿಯೇ ಬೀದರ್ ಜಿಲ್ಲೆಗೆ ಬರಬೇಕು. ಬಂದು ಪರಿಶೀಲನಾ ಸಭೆಯನ್ನು ಕರೆದು ಎಲ್ಲಾ ವಿಷಯಗಳನ್ನು ಅಲ್ಲಿ ಕೂಲಂಕಷವಾಗಿ ಚರ್ಚೆ ಮಾಡಬೇಕು. ಮಾನ್ಯ ಖಮರುಲ್ ಇಸ್ಲಾಂರವರೆ, ತಾವು ನಮಗಿಂತ ಬಹಳ ಸೀನಿಯರ್ ಇದ್ದೀರಿ. ನಾವು 5 ಜನ ಎಂ.ಎಲ್.ಎಗಳು ಹೊಸಬರಾಗಿದ್ದೇವೆ. ಇನ್ನೂ ನಮಗೆ ರಾಜಕೀಯದಲ್ಲಿ ಜನ್ಮ ಆಗಿ ಒಂದೂವರೆ ವರ್ಷ ಆಗಿಲ್ಲ. ನಮಗೆ ಮಾತನಾಡಲಿಕ್ಕೆ ಬರುವುದಿಲ್ಲ, ಇನ್ನೂ ಕೈ ಆಡಿಸಲಿಕ್ಕೆ ಬರುವುದಿಲ್ಲ, ನಾವು ನಿಮಗೆ ಏನೂ ಮಾಡುವವರಲ್ಲ. ನಮ್ಮ ಬಗ್ಗೆ ಭಯಪಡಬೇಡಿ. ನಿಮ್ಮ ವೈರಿ ನಿಮ್ಮಲ್ಲಿಯೇ ಇದ್ದಾರೆ. ಅವರಿಂದ ನಿಮಗೆ ಕೆಟ್ಟ ಹೆಸರು ಬರುತ್ತಿದೆ. ಇವತ್ತು ಇಡೀ ಬೀದರ್‌ನಲ್ಲಿ ನಮ್ಮ ಒಂದು ತಾಕತ್ತಿನ ಮೇಲೆ ಆರಿಸಿ ಬಂದಿಲ್ಲ. ನಿಮ್ಮ ಜನ ಕೆಟ್ಟವರು ಯಾರು ಇದ್ದಾರೆ ಅವರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಆ ಸಲುವಾಗಿ ಆ ಜನರಿಗೆ ನೀವು ಎಂಕರೇಜ್ ಮಾಡಬೇಡಿ. ಬಹಳಷ್ಟು ಮಂದಿ ಒಳ್ಳೊಳ್ಳೆಯ ಜನರು ಇದ್ದಾರೆ. ಅಂಥ ಜನರನ್ನು ಹುಡುಕಿ ಅವರ ಮುಖಾಂತರ ಒಳ್ಳೊಳ್ಳೆಯ ಕೆಲಸಗಳನ್ನು ಮಾಡಿಸಿ ಬೀದರ್ ಜಿಲ್ಲೆಯ ಪರವಾಗಿ ಪುಣ್ಯ ಕಟ್ಟಿಕೊಳ್ಳಿ ಎನ್ನುವ ಮಾತನ್ನು ಹೇಳುತ್ತಾ ಇನ್ನು ಬೀದರ್ ಜಿಲ್ಲೆಯಲ್ಲಿ ಬಿ.ಜೆ.ಪಿ.ಯವರು ಇದ್ದಾರೆನ್ನುವ ಕಾರಣಕ್ಕಾಗಿ ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಿಲ್ಲವೆಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿ ನಮಗೆ ಬಹಳ ನೋವಾಗಿದೆ. ನಾವು ಯಾವುದೇ ಪಕ್ಷದವರಾಗಿದ್ದರೂ ಶಾಸಕರಾಗಿದ್ದೇವೆ. ನಮ್ಮ ಮುಖ್ಯಮಂತ್ರಿಗಳಾಗಿ ನೀವಿದ್ದೀರಿ. ನಿಮ್ಮನ್ನು ನಾವು ಸ್ವಾಗತ ಮಾಡಿ ಸಹಕಾರ ಕೊಟ್ಟು ನಿಮ್ಮ ಮಾನ ಮರ್ಯಾದೆಯನ್ನು ಹೆಚ್ಚು ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ, ನಾವು ಮಾಡಿ ತೋರಿಸುತ್ತೇವೆ. ಯಾವ ಜಿಲ್ಲೆಯಲ್ಲೂ ಅಂಥ ಸತ್ಕಾರ್ಯ ಸಿಕ್ಕಿರಬಾರದು, ಹಾಗೆ ನಾವು ನಿಮ್ಮನ್ನು ಸ್ವಾಗತ ಮಾಡುತ್ತೇವೆ, ದಯವಿಟ್ಟು ನಮ್ಮ ಜಿಲ್ಲೆಗೆ ಬನ್ನಿ. ಮೊನ್ನೆತಾನೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಆಗಲಿಕ್ಕೆ ಹೋದಾಗ- 'ಮಾನ್ಯ ಮುಖ್ಯಮಂತ್ರಿಗಳೇ, ನಮ್ಮ ಜಿಲ್ಲೆಯನ್ನು ದತ್ತುಗೆ ತೆಗೆದುಕೊಳ್ಳಿ' ಎಂದು ನಮ್ಮ ಗೆಳೆಯರು ಹೇಳುತ್ತಿದ್ದರು. ಸರಿಯಾದ ಮಾತನ್ನು ಹೇಳಿದ್ದಾರೆ. ನಮ್ಮ ಜಿಲ್ಲೆ ಅನಾಥ ಜಿಲ್ಲೆಯಾಗಿದೆ. ಅದನ್ನು ತಾವು ದತ್ತುಗೆ ತೆಗೆದುಕೊಂಡರೆ ತಮಗೆ ಪುಣ್ಯ ಬರುತ್ತದೆ.

ತಮ್ಮ ಅಧಿಕಾರಾವಧಿ ಹೆಚ್ಚು ಆಗುತ್ತದೆ. ತಮಗೆ ದೇವರು ಶಕ್ತಿ ಕೊಡುತ್ತಾನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆಡಿನ ಕೊರಳಲ್ಲಿ ಮಾಲೆ ಯಾವ ರೀತಿ ಉಪಯೋಗಕ್ಕೆ ಬರುವುದಿಲ್ಲವೋ ಆ ರೀತಿ ಕಳೆದ 53 ವರ್ಷಗಳಿಂದ ಬಂದಂಥ ಸರ್ಕಾರಗಳ ಅವಸ್ಥೆ ನಮ್ಮ ಜಿಲ್ಲೆ ಬಗ್ಗೆ ಆಗಿದೆ. ಆ ಭಾವನೆ ನಮ್ಮ ಜನರಲ್ಲಿ ಬೆಳೆದಿದೆ. ಆದ್ದರಿಂದ ಈ ಅವ್ಯವಹಾರಗಳು, ಭ್ರಷ್ಟಾಚಾರಗಳು, ನಮ್ಮ ಜಿಲ್ಲೆಯಲ್ಲಿ ಕಂಡುಬಂದರೆ ತಾವು ಉಗ್ರವಾದಂಥ, ಕಠಿಣವಾದಂಥ ಕ್ರಮವನ್ನು ತೆಗೆದುಕೊಂಡು ಭಯ ಹುಟ್ಟಿಸತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಿ ಸರ್ಕಾರದ ಯೋಜನೆಗಳು ಬಡವರಿಗೆ ಮುಟ್ಟಿಸುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ತಮಗೆ ನಾವು ಇರುವವರೆಗೆ ಪ್ರಾಮಾಣಿಕವಾದ ಸಹಕಾರವನ್ನು ಕೊಡುತ್ತೇವೆಂದು ಹೇಳಿ, ನನಗೆ ನಾಲ್ಕು ಮಾತುಗಳನ್ನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಮಾನ್ಯ ರಾಮಯ್ಯನವರೆ, ತಾವು ಈಗ ಬೇಡಿಕೆ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಿ.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) :— ಮಾನ್ಯ ಉಪಾಧ್ಯಕ್ಷರೆ, ಈಗ ಅವಕಾಶ ಕೊಟ್ಟಿದ್ದೀರಿ, ಬೇಕಾಗಿಲ್ಲ. ಹೊಸಬರಿಗೆ ಅವಕಾಶ ಕೊಡಿ. ನಿಮ್ಮದೂ ಸೇರಿದಂತೆ ಯಾರ ಕೃಪಾಕಟಾಕ್ಷದಲ್ಲೂ ನನಗೆ ಬದುಕಲಿಕ್ಕೆ ಇಷ್ಟ ಇಲ್ಲ. ಮಾತನಾಡಲಿಕ್ಕೂ ಇಷ್ಟ ಇಲ್ಲ. ನಿನ್ನೆಯ ದಿವಸ ಕೇಳಿದಾಗ ಬೆಳಗ್ಗೆ 10 ಗಂಟೆಗೆ ಪ್ರಾರಂಭ ಮಾಡಿ ಎಂದು ಮಾನ್ಯ ಸಭಾಧ್ಯಕ್ಷರು ಹೇಳಿದರು. ಇಡೀ ರಾತ್ರಿ ನೋಟ್ಸ್ ಪ್ರಿಪೇರ್ ಮಾಡಿ ಬೆಳಗ್ಗೆ 10 ಗಂಟೆಯಿಂದ ಕಾದಿದ್ದೇನೆ. ಬೆಳಗ್ಗೆಯಿಂದ ಆ ಸ್ಥಾನಕ್ಕೆ ಮೂರು ಜನ ಬಂದಿದ್ದೀರಿ. ನನ್ನ ಸರದಿ ಯಾವಾಗ ಬರುತ್ತದೆಂದು ಇಬ್ಬರಿಗೆ ಹೇಳಿ ಕಳುಹಿಸಿದೆ. 10 ಗಂಟೆಗೆ ಪ್ರಾರಂಭ ಮಾಡಿ ಎಂದು ನಿನ್ನೆಯ ದಿವಸ ಹೇಳಿದ್ದರೂ ನಾನು ಎರಡು ಗಂಟೆಯವರೆಗೆ ಕಾದು ಕುಳಿತೆ. ಪುನ: ತಾವು ಬಂದ ಮೇಲೆ ತಮ್ಮ ಹಿಂದೆ ಬಂದೆ. ತಾವು ಎಲ್ಲಿಗೆ ಹೋದ್ರೋ ನನ್ನ ಕೈಗೆ ಸಿಗಲಿಲ್ಲ. ಆ ಮೇಲೆ ಶ್ರೀ ಸಭಾಪತಿಯವರು ಆ ಸ್ಥಾನದಲ್ಲಿ ಕುಳಿತುಕೊಂಡ ಮೇಲೆ ಹೇಳಿ ಕಳುಹಿಸಿದೆ. ಅವರು ಯಾರೋ ಹಬ್ಬಕ್ಕೆ ಹೋಗುವವರಂತೆ, ಅವರು ಮಾತನಾಡಿದ ಮೇಲೆ ಮಾತನಾಡುವಿರಂತೆ ಎಂದು ಹೇಳಿದರು. ಅದನ್ನೂ ಕಾದೆ. 3 ಗಂಟೆಗೆ ನೀವು ಮೂರನೆಯವರಾಗಿ ಬಂದಿರಿ. ನೀವು ಯವ ನಿಯಮಗಳನ್ನು ಪಾಲನೆ ಮಾಡುತ್ತೀರೋ ಗೊತ್ತಾಗುತ್ತಿಲ್ಲ.

ಉಪಾಧ್ಯಕ್ಷರು :— ಮಾನ್ಯ ರಾಮಯ್ಯನವರೆ, ತಮಗೆ ಈಗ ಅವಕಾಶ ಸಿಕ್ಕಿದೆ. ದಯವಿಟ್ಟು ಸಮಯ ಹಾಳು ಮಾಡುವುದು ಬೇಡ. ಮಾತನಾಡಿ.

ಶ್ರೀ ವೈ.ಕೆ. ರಾಮಯ್ಯ :— ಕೃಪೆ ಮಾಡಿ ನಾನು ಹೇಳುವುದನ್ನು ಸ್ವಲ್ಪ ಕೇಳಿ.

ನೀವು ಹೇಳುವುದನ್ನು ನಾವು ಕೇಳುತ್ತೇವಲ್ಲಾ. ನಮ್ಮ ಮಾತನ್ನು ಸ್ವಲ್ಪ ಕೇಳಿ. ನಾನು ಅನೇಕ ಸಾರಿ ಈ ಸದನದಲ್ಲಿ ಛೇರ್‌ಗೆ ಪ್ರಾರ್ಥಿಸಿದ್ದೇನೆ. ಮೊದಲನೆಯದಾಗಿ, ನಾವು ಈ ಸದನದ ಸದಸ್ಯರು. ಕಾಂಗ್ರೆಸ್ ಕಮ್ಯುನಿಸ್ಟ್, ಬಿಜೆಪಿ, ಜನತಾದಳ (ಯು), ಜನತಾದಳ (ಎಸ್) ನವರು ಎನ್ನುವುದು ಆಮೇಲೆ. ನೀವು ರೌಂಡ್ ಕರೆಯುತ್ತೇವೆಂದರೆ ಮೂರು ಜನರನ್ನು ಕರೆದ ನಂತರ ಅವರು ತಮ್ಮ ಮಾತು ಮುಗಿಸುತ್ತಾರೆ. 4ನೇ ರೌಂಡಿಗೆ ಇಬ್ಬಿಬ್ಬರು ಬರುತ್ತಾರೆ. ಅದು ಬೇಡ. ನಾನು ಪ್ರಾರ್ಥಿಸುತ್ತಿದ್ದೇನೆ, ನಾವು ಮೊದಲು ಈ ಸದನದ ಸದಸ್ಯರಾಗಿದ್ದೇವೆ. ಎಲ್ಲಾ ಸದಸ್ಯರಿಗೇನೇನು ಹಕ್ಕುಬಾಧ್ಯತೆಗಳಿವೆಯೋ, ಅವೆಲ್ಲಾ ನಮಗೂ ಇವೆ. ಆದುದರಿಂದ, ಅಲ್ಲಿ ಮೂರು ಜನರಿಗೆ ಮಾತನಾಡಲು ಎಷ್ಟು ಸಮಯ ಕೊಡುತ್ತೀರೋ, ಅಷ್ಟೇ ಸಮಯವನ್ನು 40 ಜನರಿಗೂ ಅಲಾಟ್ ಮಾಡಿ. ಅಲ್ಲಿ ಮೂರು ಜನರಿಗೆ ಕೊಟ್ಟಾಗ, ನಮಗೆ 9 ಜನರಿಗೆ ಕೊಡಿ. ಆ ರೀತಿ ಒಂದು ನಿಯಮಾವಳಿ ಪ್ರಕಾರ ಅವಕಾಶ ಕೊಡಬೇಕು. ನಾನು ಯಾರ ಕೃಪಾಕಟಾಕ್ಷವನ್ನೂ ಅಪೇಕ್ಷಿಸಿಪಟ್ಟಿಲ್ಲ. ನನಗೆ ಇಲ್ಲಿ ಮಾತನಾಡಲು ಇಷ್ಟವಿಲ್ಲ. ಆದುದರಿಂದ, ಯಾರಾದರೂ ಹೊಸಬರಿಗೆ ಅವಕಾಶ ಕೊಡುವ ಅಪ್ಪಣೆಯನ್ನು ತಾವು ಮಾಡಿದ್ದೀರಿ, ಕೊಟ್ಟು ಮಾತನಾಡಿಸಬಹುದು. ಕೆಲವರು ಮಾತನಾಡಲು ಇಷ್ಟವಿಲ್ಲದ ದಿನ ಎದ್ದುನಿಂತು ಹೊಸಬರಿಗೆ ಅವಕಾಶ ಕೊಡಿ ಎನ್ನುತ್ತಾರೆ. ನಾನೂ ನೋಡಿದ್ದೇನೆ. ಯಾವ ಮಹಾನ್ ನಾಯಕರು ಮಾತನಾಡುವುದಕ್ಕೆ ಇಷ್ಟವಿರುವುದಿಲ್ಲವೋ, ಆಗ ಮಾತ್ರ ಹೊಸಬರಿಗೆ ಅವಕಾಶ ಕೊಡಿ ಎನ್ನುತ್ತಾರೆ. ಅವರು ಮಾತನಾಡುವಾಗ ಹೊಸಬರಿಗೆ ಅವಕಾಶ ಕೊಡಿ ಎಂದು ಹೇಳುವುದಿಲ್ಲ. ಅವರೇ ಮಾತನಾಡುತ್ತಾರೆ.

ಉಪಾಧ್ಯಕ್ಷರು :— ಹೊಸಬರಿಗೆ ಅವಕಾಶ ಕೊಡಬೇಕೆಂದಿದೆ. ಆದರೂ ಕೆಲ ಹಳಬರಿಗೂ ಅವಕಾಶ ಕೊಡಲೇಬೇಕು. ಇವತ್ತು ಕೊನೆ ದಿವಸ. ಸೋಮವಾರ ಮತ್ತೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆದಕ್ಕೋಸ್ಕರ ಇವತ್ತೇ ಮುಗಿಸಬೇಕು.

ಶ್ರೀ ವೈ.ಕೆ. ರಾಮಯ್ಯ :— ಆ ಸ್ಥಾನಕ್ಕೆ ತಾವು 3 ಜನರು ಬರುತ್ತೀರಿ. ಬೆಳಿಗ್ಗೆ ಅಧ್ಯಕ್ಷರು ಬಂದರು, ಅವರೊಂದು ನಿಯಮ ಫಾಲೋ ಮಾಡಿದರು. ಸಭಾಪತಿಯವರು ಬಂದರು ಅವರೊಂದು ನಿಯಮ ಫಾಲೋ ಮಾಡಿದರು. ಮೂರನೆಯದಾಗಿ ನೀವು ಬಂದಿರಿ ನೀವೊಂದು ಪದ್ಧತಿ ಫಾಲೋ ಮಾಡುತ್ತಿದ್ದೀರಿ. ನಾವು ಯಾರ ಪದ್ಧತಿಗೆ ಹೊಂದಿಕೊಳ್ಳಬೇಕು? ಅದರ ಬದಲು ಒಂದು ಪದ್ಧತಿಯನ್ನು ಅಡಾಪ್ಟ್ ಮಾಡಿಕೊಂಡುಬಿಡಿ. ನಾವು ಅದಕ್ಕೆ ಹೊಂದಿಕೊಳ್ಳುತ್ತೇವೆ. ಮೂರು ಜನರಲ್ಲಿ ನಾವು ಯಾರ ಪದ್ಧತಿಗೆ ಹೊಂದಿಕೊಳ್ಳಬೇಕು?

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಸನ್ಮಾನ್ಯ ಉಪಾಧ್ಯಕ್ಷರೇ, ನನಗೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಕೊನೆಯದಾಗಿ ಅವಕಾಶ ಕೊಟ್ಟಿದ್ದೀರಿ, ಅದಕ್ಕೆ

ನಾನು ಮೊದಲು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಹಿಂದೆ ನಾನು ಶಿಕ್ಷಣದ ಮತ್ತು ಶಿಕ್ಷಣ ಇಲಾಖೆ ಬಗ್ಗೆ ಮಾತನಾಡಿದ್ದೇನೆ. ಇವತ್ತು ಸುಮಾರು 58 ಬೇಡಿಕೆಗಳನ್ನು ಸರ್ಕಾರ ಈ ಸಭೆಯ ಮುಂದೆ ಮಂಡಿಸಿದೆ. ಈ ಎಲ್ಲಾ ಬೇಡಿಕೆಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕೆಲವು ಇಲಾಖೆಗಳ ಬಗ್ಗೆ ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ನಾನು ಹೇಳುವುದಕ್ಕಿಚ್ಛೆಪಡುತ್ತಿದ್ದೇನೆ. ಮೊದಲನೆಯದಾಗಿ, ಆರೋಗ್ಯ ಇಲಾಖೆ ಬಹಳ ಮುಖ್ಯವಾದ ಇಲಾಖೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡವರ, ನಿರ್ಗತಿಕರ, ದೀನದಲಿತರ ಆರೋಗ್ಯವನ್ನು ನೋಡಿಕೊಳ್ಳುವಂಥಾದ್ದು ಸರ್ಕಾರಿ ಆಸ್ಪತ್ರೆಗಳು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಖಾಸಗಿ ನರ್ಸಿಂಗ್ ಹೋಂಗಳು ಅಣಬೆ ರೀತಿಯಲ್ಲಿ ತಲೆ ಎತ್ತಿವೆ. ಆದರ ಬಗ್ಗೆ ಅಷ್ಟು ಸಮಸ್ಯೆ ಇಲ್ಲ. ಆದರೆ, ಬಡವರಾರೂ ಆರೊಗ್ಯ ತಪಾಸಣೆಗಾಗಲಿ, ಚಿಕಿತ್ಸೆಗಾಗಲಿ ಹೋಗುತ್ತಾರೆ, ಅವರು ಯಾವಾಗಲೂ ಸರ್ಕಾರಿ ಆಸ್ಪತ್ರೆಗಳನ್ನೇ ನಂಬಿ ಕೊಂಡಿರುತ್ತಾರೆ. ಯಾವುದೇ ಸರ್ಕಾರವಿರಲಿ, ಈ ಸರ್ಕಾರಿ ಆಸ್ಪತ್ರೆಗಳು ಮತ್ತು ಸರ್ಕಾರಿ ಶಾಲೆಗಳು ಈ ಎರಡೂ ಇಲಾಖೆಗಳ ಸಂಸ್ಥೆಗಳನ್ನು ಹೆಚ್ಚು ಆಕರ್ಷಣೀಯವಾಗಿ ಮಾಡಿದಾಗ ಮಾತ್ರ ಬಡವರ ಸೇವೆ ಆಗುತ್ತದೆಂಬುದು ನಮ್ಮೆಲ್ಲರ ಅಭಿಪ್ರಾಯ. ಇವತ್ತು ಆಸ್ಪತ್ರೆಗಳ ಪರಿಸ್ಥಿತಿಯನ್ನು ನಾವು ನೋಡಿದಾಗ, ಯಾವುದೇ ಪಕ್ಷದ ಸದಸ್ಯರು ಚೆನ್ನಾಗಿದೆಯೆಂದು ಹೇಳುವುದಿಲ್ಲ. ಆದೇಕೋ ಆದರ ಅಭಿವೃದ್ಧಿಗೆ ಪ್ರಯತ್ನ ಮಾಡುತ್ತಿಲ್ಲ. ನಾವು ಆಸ್ಪತ್ರೆಗಳನ್ನು ಕಟ್ಟಿಸುವುದಕ್ಕೆ ಸುಮಾರು 200 ಕೋಟಿ ರೂ.ಗಳನ್ನು ವಿಶ್ವಬ್ಯಾಂಕ್‌ನಿಂದ ಸಾಲ ತೆಗೆದು ಬಿಲ್ಡಿಂಗ್ ಕಟ್ಟಿಸಿದೆವು. ಎಲ್ಲಾ ತಾಲ್ಲೂಕುಗಳಿಗೆ ಸುಸಜ್ಜಿತವಾದದ ಕಟ್ಟಡಗಳಿವೆ. ಆದರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪ್ರತಿಯೊಂದು ಆಸ್ಪತ್ರೆಗಳಲ್ಲಿಯೂ ವೈದ್ಯರ ಕೊರತೆಯಿದೆ. ನೇಮಿಸಿದ ವೈದ್ಯರು ಅಲ್ಲಿ ಕೆಲಸ ಮಾಡುವುದಿಲ್ಲ. ಪ್ರತಿಯೊಬ್ಬರೂ ಪಟ್ಟಣಕ್ಕೆ ಬರುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಒಂದೊಂದು ಸಾರ್ವಜನಿಕ ಆಸ್ಪತ್ರೆಗಳನ್ನು ಕಟ್ಟಿದ್ದೀರಿ. ಆದಕ್ಕೆ ಪೋಸ್ಟ್‌ಗಳು ಸ್ಯಾಂಕ್ಷನ್ ಆಗಿದೆ. ಸವಲತ್ತುಗಳಿವೆ, ಸರ್ಕಾರ ಎರಡು ವರ್ಷಗಳ ಹಿಂದೆ ಕಟ್ಟಡ ಕಟ್ಟಿದ್ದರೂ ಆ ಸ್ಪೆಷಲೈಜ್ಡ್ ಪೋಸ್ಟ್‌ಗಳಿಗೆ ಅಪ್ರೂವ್ ಮಾಡಿಲ್ಲ ಮತ್ತು ನೇಮಕಾತಿಯನ್ನೂ ಮಾಡಿಲ್ಲ. ಆದಷ್ಟು ಬೇಗ ಈ ನೇಮಕಾತಿಗಳನ್ನು ಮಾಡಬೇಕೆಂಬುದು ನನ್ನ ಆಗ್ರಹ. 1995ನೇ ಇಸವಿಯಲ್ಲಿ ನಾವು ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡಿದೆವು. ಮುಖ್ಯಮಂತ್ರಿಗಳಾಗಿದ್ದ ಶ್ರೀ ಹೆಚ್.ಡಿ. ದೇವೇಗೌಡರವರು ಕರ್ನಾಟಕ ಮುಖ್ಯಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿ ಎಂಬ ವ್ಯವಸ್ಥೆಯನ್ನು ಜಾರಿಗೆ ತಂದರು. ಆದು ಸುಮಾರು ಐದು ವರ್ಷಗಳಿಂದಲೂ ಚೆನ್ನಾಗಿ ನಡೆದುಕೊಂಡು ಬಂದಿದೆ. ಬಡವರು, ನಿರ್ಗತಿಕರು, ಹೃದ್ರೋಗಕ್ಕೆ ಸಂಬಂಧಪಟ್ಟ ಖಾಯಿಲೆಗಳಿಗೆ ಜನರು ಖರ್ಚು ಮಾಡಲಾಗುವುದಿಲ್ಲ. ಸರ್ಕಾರ ಸ್ವಲ್ಪಮಟ್ಟಿಗೆ ಅಂಥವರಿಗೆ ಬೆಂಬಲ ಕೊಡಬೇಕೆಂಬುದು ಅವರ ಉದ್ದೇಶವಾಗಿತ್ತು. ಇದು ಬಹಳ ಒಳ್ಳೆಯ ಉದ್ದೇಶ. ಆದರೆ, ಬೆಂಗಳೂರು ನಗರದಲ್ಲಿ ಕೆಲವು ಆಸ್ಪತ್ರೆಗಳನ್ನು ಉದಾ: ಕಿದ್ವಾಯಿ,

ಜಯದೇವ ಇರಬಹುದು, ಗುರುತಿಸಿದ್ದೀರಿ, ಉತ್ತರ ಕರ್ನಾಟಕದ ಭಾಗದವರು ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದು ಹೋಗಬೇಕಾದರೆ ಪ್ರವಾಸ, ಇಲ್ಲಿ ಉಳಿದುಕೊಳ್ಳುವ ಖರ್ಚು ಇರಬಹುದು, ಅದಕ್ಕೆ ಕಷ್ಟವಾಗುತ್ತದೆ. ಹೀಗಾಗಿ, ಅದರಿಂದ ಈ ಭಾಗಕ್ಕೇನೋ ಸ್ವಲ್ಪ ಅನುಕೂಲವಾಗಿದೆ. ಆದರೆ ಉತ್ತರ ಕರ್ನಾಟಕ, ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ ಇರಬಹುದು, ಸೌಲಭ್ಯಗಳನ್ನು ಪಡೆಯುವುದರಲ್ಲಿ ಸ್ವಲ್ಪ ತೊಂದರೆಯಾಗಿದೆ ಎನ್ನುವುದು ನಮ್ಮ ಅಭಿಪ್ರಾಯ. ಆ ದೃಷ್ಟಿಯಿಂದ ನಮ್ಮ ರಾಯಚೂರಿನಲ್ಲಿ ಒಪೆಕ್ ಆಸ್ಪತ್ರೆಯನ್ನು ಸುಮಾರು 30 ಕೋಟಿ ರೂಪಾಯಿಗಳನ್ನು ಆ ಸಂಸ್ಥೆಯಿಂದ ತಂದು ಕಟ್ಟಿಸಿದ್ದೇವೆ. ಎಲ್ಲರಿಗೂ ಗೊತ್ತಿರುವ ಹಾಗೆ, ಮೊನ್ನೆ ನಾವು ಕೆಲವು ಮುಖಂಡರುಗಳು ಆಸ್ಪತ್ರೆಗೆ ಬೇಟಿ ನೀಡಿದ್ದೆವು. ಒಳ್ಳೆಯ ಕಟ್ಟಡವನ್ನು ಕಟ್ಟಿ ಅದಕ್ಕೆ ಸುಮಾರು 15 ಕೋಟಿ ರೂ. ಅಂದಾಜಿನ ಸ್ಕ್ಯಾನಿಂಗ್, ಬೇರೆ ಬೇರೆ ಎಕ್ಸ್-ರೇ ಇರಬಹುದು, ಆಧುನೀಕರಣವಾದ ಎಕ್ವಿಪ್‌ಮೆಂಟ್ಸ್‌ಗಳನ್ನು ಅಲ್ಲಿಟ್ಟಿದ್ದಾರೆ. ಆ ಒಂದು ಉಪಕರಣಗಳ ವಾರಂಟಿ ಅವಧಿ ಮುಗಿದುಹೋಗಿದೆ. ಅದನ್ನು ಕೆಟ್ಟು ಹೋಗಿದ್ದರೆ ಮತ್ತೇ ರಿಪ್ಲೇಸ್ ಮಾಡುವ ಅವಕಾಶವಿಲ್ಲ. ಅದನ್ನು ಪ್ರಾರಂಭಿಸಿದ್ದೀರಿ. ರಾಜೀವ್ ಗಾಂಧಿ ವೈದ್ಯಕೀಯ ಸಂಸ್ಥೆ ಎಂಬ ಹೆಸರನ್ನು ಹಾಕಿಸಿದ್ದೀರಿ, ಸಂತೋಷ. ಆದರೆ, ಅದೊಂದು ಜಿಲ್ಲಾ ಆಸ್ಪತ್ರೆಯ ಮಟ್ಟದಲ್ಲೂ ಇಲ್ಲ. ಅಷ್ಟೊಂದು ದೊಡ್ಡ ಕಟ್ಟಡ ಕಟ್ಟಿ, ಆ ಭಾಗದ ರೈತರಿಗಾಗಲಿ, ಕೂಲಿಕಾರರಿಗಾಗಲಿ, ಬಡವರಿಗಾಗಲಿ ಅನುಕೂಲವಾಗಬೇಕು, ಎಲ್ಲರೂ ಸಹ ಉತ್ತಮವಾದ ಚಿಕಿತ್ಸೆಗಾಗಿ ದೊಡ್ಡ ದೊಡ್ಡ ಖಾಯಿಲೆಗಳಿಗೆ ಬೆಂಗಳೂರಿಗೆ ಬರುವುದಕ್ಕಾಗುವುದಿಲ್ಲ, ಸ್ಪೆಷಲೈಸ್ಡ್ ಫೆಸಲಿಟೀಸ್ ಅಲ್ಲಿ ಸಿಗಬೇಕೆಂಬ ಉದ್ದೇಶದಿಂದ ಮಾಡಿದೆವು. ಅದು ಪ್ರಾರಂಭವಾಗಿ ಏಳು ತಿಂಗಳಾಯಿತು. ಅದು ಜಿಲ್ಲಾ ಆಸ್ಪತ್ರೆಯ ಮಟ್ಟದಲ್ಲೂ ಇಲ್ಲ. ಆದುದರಿಂದ ಅದನ್ನು ನೀವು ಯಾವಾಗ ಸುಸಜ್ಜಿತವಾದ ಆಸ್ಪತ್ರೆಯನ್ನಾಗಿ ಮಾಡುತ್ತೀರಿ. ಒಂದು ಪರಿಣಿತದ ಡಾಕ್ಟರ್‌ಗಳನ್ನು ಯಾವಾಗ ನೇಮಿಸುತ್ತೀರಿ? ಉಪಕರಣಗಳನ್ನು ಯಾವಾಗ ಉಪಯೋಗಿಸಿಕೊಳ್ಳುತ್ತೀರಿ? ಅದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಏಕೆಂದರೆ, ಅಷ್ಟು ದಿನಗಳಿಂದ ಅಂದರೆ 7-8 ತಿಂಗಳಿನಿಂದ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲವೆಂಬುದು ನನ್ನ ಅನಿಸಿಕೆ. ಸಮಾಜ ಕಲ್ಯಾಣ ಇಲಾಖೆ ತುಳಿತಕ್ಕೊಳಗಾದವರ, ಬಡವರ, ದೀನದಲಿತರ, ಪರಿಶಿಷ್ಟ ಜಾತಿ : ವರ್ಗದರರ ಕಲ್ಯಾಣಕ್ಕಿರುವ ಇಲಾಖೆ. ಈ ಸರ್ಕಾರದಲ್ಲಿ ಆ ಇಲಾಖೆ ಬಗ್ಗೆ ಕಳಕಳಿ ಇರುವ ಮಂತ್ರಿಗಳೇ ಮಂತ್ರಿಗಳಾಗಿದ್ದಾರೆ. ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದಿದ್ದೀರಿ. ಹೋದ ಸಭೆಯಲ್ಲಿ ನಾವು ಏನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಆದರೆ, ಅದಕ್ಕೆ ನಿರೀಕ್ಷಿತ ಮಟ್ಟದಲ್ಲಿ ಆರ್ಥಿಕ ಬೆಂಬಲ ಸಿಕ್ಕಿಲವೆಂಬುದು ನನ್ನ ಭಾವನೆ. ಮಕ್ಕಳ ಶಾಲಾ ಪ್ರವೇಶ ಕಡಿಮೆಯಾಗಬಾರದು, ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಬೇಕೆಂಬುದು ಸರ್ಕಾರದ ನೀತಿ ಎಂದು ನೀವು ಹೇಳಿದ್ದೀರಿ. ಅದಕ್ಕೆ ಶಿಕ್ಷಣ ಇಲಾಖೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರಲ್ಲಿ ಪ್ರಾಮುಖ್ಯವಾದುದೆಂದರೆ, ಹಾಸ್ಟೆಲ್ ಪ್ರವೇಶ ಕಾರ್ಯಕ್ರಮ.

ಫ್ರೀ ಮತ್ತು ಪೋಸ್ಟ್ ಮೆಟ್ರಿಕ್ ಇರಬಹುದು, ಬಡ ಮಕ್ಕಳಿಗೆ ವಿದ್ಯಾಭ್ಯಾಸ ಅಲ್ಲಿಂದಲೇ ಪ್ರಾರಂಭವಾಗುವುದು. ತಂದೆ ತಾಯಿಗಳು ಮಕ್ಕಳನ್ನು ಹಾಸ್ಟೆಲ್‌ಗಳಿಗೆ ಸೇರಿಸುತ್ತಾರೆ. 75-76 ಸಾವಿರ ಮಕ್ಕಳು ಫ್ರೀ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅದೇ ರೀತಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅದೇ ರೀತಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ 10-15 ಸಾವಿರ ವಿದ್ಯಾರ್ಥಿಗಳಿದ್ದಾರೆ. ವಿದ್ಯಾರ್ಥಿಗಳ

4.40 ಪಿಎಂ

ಬೇಡಿಕೆ ಇದೆ ಎಂದು ನನಗೆ ಅನ್ನಿಸುತ್ತದೆ, ಹಾಸ್ಟೆಲ್ ಕಟ್ಟಡಕ್ಕೆ ಕಾರ್ಯಕ್ರಮವೇನೋ ಹಾಕಿಕೊಂಡಿದ್ದೀರಿ ಕಟ್ಟಡ ಇದ್ದು, ಸ್ಥಳಾವಕಾಶ ಇದ್ದು, ವಿದ್ಯಾರ್ಥಿಗಳ ಬೇಡಿಕೆ ಇದ್ದರೂ ತಾವು ಇನ್ನು ಮಂಜೂರಾತಿ ಕೊಟ್ಟಿಲ್ಲ. ಆ ಬಡ ಮಕ್ಕಳಿಗೆ 5 ರಿಂದ 10ನೇ ತರಗತಿಯವರೆಗೆ ಹಾಸ್ಟೆಲ್ ಸೌಲಭ್ಯ ದೊರಕಿಸಿದರೆ ಅವರು ಅಲ್ಲಿ ವಿದ್ಯಾಭ್ಯಾಸ ಮಾಡಿ ಮುಂದಿನ ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಅದಕ್ಕಾಗಿ ಪ್ರವೇಶಾವಕಾಶವನ್ನು ಹೆಚ್ಚು ಮಾಡತಕ್ಕದ್ದು ಬಹಳ ಅತ್ಯಾವಶ್ಯಕ. ಪ್ರತಿಯೊಂದು ಕ್ಷೇತ್ರದಲ್ಲೂ ಈಗ ಎಷ್ಟು ಪ್ರವೇಶಾವಕಾಶ ಇದೆಯೋ ಅಷ್ಟು ಬೇಡಿಕೆ ಇದೆ. ಕೊನೇಪಕ್ಷ ಆ ಬೇಡಿಕೆಯ ಮೇಲೆ ಶೇಕಡ 15 ರಷ್ಟನ್ನಾದರೂ ಹೆಚ್ಚಿಗೆ ಮಾಡಿದಾಗ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕೊನೇ ಪಕ್ಷ 10 ಸಾವಿರ ಪ್ರವೇಶಾವಕಾಶವನ್ನು ಈ ವರ್ಷ ಹೆಚ್ಚಿಗೆ ಮಾಡಬೇಕು, ಇದಕ್ಕೆ ಹಣಕಾಸಿನ ಇಲಾಖೆಯವರು ಮಂಜೂರಾತಿ ನೀಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. "ಗಂಗಾಕಲ್ಯಾಣ ಯೋಜನೆಯನ್ನು" ಮಾನ್ಯ ಮುಖ್ಯಮಂತ್ರಿಗಳು ಹಾಗೂ ತಾವುಗಳೂ ಕೂಡ ಇದೊಂದು ಒಳ್ಳೆಯ ಕಾರ್ಯಕ್ರಮ, ದಲಿತರ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಇದೊಂದು ಒಳ್ಳೆಯ ಕಾರ್ಯಕ್ರಮವೆಂದು ತಾತ್ವಿಕವಾಗಿ ಒಪ್ಪಿಕೊಂಡಿದ್ದೀರಿ. ಕಳೆದ ಬಾರಿ ಕೆಲವು ತಾಲ್ಲೂಕುಗಳಲ್ಲಿ ಒಂದೆರಡು ಮಾತ್ರ ಇದೆ ಮುಂದಿನ ಸಾರಿ ಇದನ್ನು ಹೆಚ್ಚು ಮಾಡುತ್ತೇವೆಂದು ಹೇಳಿದ್ದೀರಿ. ಈ ವರ್ಷ ಮಧ್ಯದಲ್ಲಿ ಮಾನ್ಯ ಸಚಿವರು, ಎಸ್‌ಸಿಗೆ 15, ಎಸ್‌ಟಿಗೆ 5 ಒಟ್ಟಾರೆ 20 ಮಾಡುತ್ತೇವೆಂದು ಹೇಳಿದ್ದೀರಿ. ನನಗೆ ಅನ್ನಿಸುತ್ತದೆ ಇದೂ ಕೂಡ ಸಾಕಾಗುವುದಿಲ್ಲ. ಪ್ರತಿ ತಾಲ್ಲೂಕುಗಳಲ್ಲಿ ಇವತ್ತು ನೂರು ಅರ್ಜಿಗಳು ಪೆಂಡಿಂಗ್‌ನಲ್ಲಿದೆ ಹೀಗಿರುವಾಗ ನಾವು ಕೇವಲ 20 ಕೊಟ್ಟರೆ ಅದು ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಸರ್ಕಾರ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಸುಮಾರು 10 ಸಾವಿರ ಬೋರ್‌ವೆಲ್‌ಗಳನ್ನು ಕೊರೆಸಿರುವುದು ತಮಗೆಲ್ಲರಿಗೂ ಗೊತ್ತಿದೆ. ನಮ್ಮ ಸರ್ಕಾರ ಅಷ್ಟೊಂದು ಮಾಡಿರುವಾಗ, ದೀನದಲಿತರ ಹೆಸರು ಹೇಳಿಕೊಂಡು ಬಂದಿರುವ ಕಾಂಗ್ರೆಸ್ ಸರ್ಕಾರ 20 ಸಾವಿರ ತೆಗೆಸಬೇಕೆಂಬುದು ನನ್ನ ಅನಿಸಿಕೆ. ಏಕೆಂದರೆ, ಬೃಹತ್ ಮತ್ತು ಸಣ್ಣ ನೀರಾವರಿ ಸೇರಿದಂತೆ ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ಈ ನೀರಾವರಿಗಾಗಿ ಖರ್ಚು ಮಾಡುತ್ತೇವೆ. ಈ ಟ್ರ್ಯಾಕ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರ ಜಮೀನುಗಳು ಇರುವುದಿಲ್ಲ. ಇವರ ಜಮೀನುಗಳು ಎಲ್ಲೋ

ಒಂದು ಕಡೆ ಎರಡು, ಮೂರು ಎಕರೆ ಇಟ್ಟುಕೊಂಡಿರುತ್ತಾರೆ. ಇಂಥವರಿಗೆ ಈ ಯೋಜನೆ ಒಂದು ವರದಾನ. ಇಂಥವರು ಈ ಯೋಜನೆಯಿಂದ ಬೋರ್‌ವೆಲ್ ತೆಗೆಸಿಕೊಂಡು, ಪಂಪ್‌ಸೆಟ್ಟು ಹಾಕಿಕೊಂಡು ವರ್ಷಕ್ಕೆ ಕನಿಷ್ಟ ಒಂದು ಬೆಳೆಯನ್ನಾದರೂ ತೆಗೆಯುತ್ತಾರೆ. ಹೀಗಾಗಿ ಸಣ್ಣ ನೀರಾವರಿ ಇರಬಹುದು, ಬೃಹತ್ ನೀರಾವರಿ ಇರಬಹುದು, ಇದರಲ್ಲಿ ನಾನು ಪರ್ಸೆಂಟೇಜ್ ಪ್ರಕಾರ ಕೊಡಿ ಎಂದು ನಾನು ಕೇಳುತ್ತಿಲ್ಲ. Relatively to compensate with the demands - ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟರೆ, ಕೊನೇ ಪಕ್ಷ ಒಂದು ತಾಲ್ಲೂಕಿಗೆ 25 ಸಾಲುವುದಿಲ್ಲ ಒಂದು ನೂರು ಆದರೂ ನೀವು ಕೊಡಬೇಕಾಗುತ್ತದೆ ಇದಕ್ಕೆ ತಾವು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಇದಕ್ಕೆ ಹಣ ಬಿಡುಗಡೆ ಮಾಡಿಸಿಕೊಳ್ಳಬೇಕೆಂದು ನನ್ನ ಅನಿಸಿಕೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಕಳೆದ ಸಾರಿ ಒಟ್ಟು ರಾಜ್ಯಕ್ಕೆ ಒಂದು ಸಾವಿರ ಗಂಗಾ ಕಲ್ಯಾಣ ಸಿಕ್ಕಿತ್ತು. ಹಿಂದಿನ ಸರ್ಕಾರದವರು ಮಾಡಿದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ. 1995-96 ರಿಂದ 1998-99ರವರೆಗೆ 10 ಸಾವಿರ ವೈಯಕ್ತಿಕ ಮತ್ತು 10 ಸಾವಿರ ಗುಂಪು ಮಾಡಿದ್ದಾರೆ. ಈ ವರ್ಷ ನಾವು ಒಂದು ವರ್ಷಕ್ಕೆ 5 ಸಾವಿರ ಮಾಡಿದ್ದೇವೆ. ಇದೇ ಪ್ರಮಾಣದಲ್ಲಿ ನಾವು ಇನ್ನೂ ಮೂರು ವರ್ಷ ಹೋದರೆ ಖಂಡಿತವಾಗಿ ನಾವು ಕೂಡ ಅಷ್ಟೇ ಪ್ರಮಾಣದಲ್ಲಿ ಮಾಡುತ್ತೇವೆ. ಬೇರೆ ಬೇರೆ ಸಣ್ಣ ಪುಟ್ಟ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡುವುದಕ್ಕಿಂತ, ನಾವು ಮೂರು ನಾಲ್ಕು ಕಾರ್ಯಕ್ರಮಗಳಿಗೆ ವಿಶೇಷವಾದ ಆದ್ಯತೆಯನ್ನು ಕೊಟ್ಟಿದ್ದೇವೆ. ಕ್ರೋಢೀಕೃತ ಹಣ ಸ್ವಲ್ಪ ಜಾಸ್ತಿ ಸಿಕ್ಕಿದರೆ, ಕಳೆದ ಸಾರಿ ಅದು ನೂರು ಕೋಟಿ ರೂಪಾಯಿ ಇತ್ತು ಈ ಸಾರಿ ಅದು ಇನ್ನೂರು ಕೋಟಿ ಆಗಬಹುದೆಂದು ನಾವು ನಿರೀಕ್ಷೆ ಮಾಡಿದ್ದೇವೆ, ಮನೆ ಮತ್ತು ಗಂಗಾ ಕಲ್ಯಾಣ ಮತ್ತೊಂದು ತರಬೇತಿ, ಇವುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕೆನ್ನುವ ಆಶೆ ಇದೆ. ಹಣದ ಸಂಗ್ರಹಣೆಯ ಮೇಲೆ ಇದು ಅವಲಂಭಿಸಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಒಪ್ಪಿದ್ದಾರೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಮುಖ್ಯಮಂತ್ರಿಗಳ ಚಿಂತನೆಯಂತೆ ರಾಜ್ಯದಲ್ಲಿ 11 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆನ್ನುವ ಘೋಷಣೆ ಮಾಡಿದ್ದಾರೆ. ಇದೊಂದು ಒಳ್ಳೆಯ ಕಾರ್ಯಕ್ರಮ, ಏಕೆಂದರೆ, ಒಬ್ಬ ವ್ಯಕ್ತಿಗೆ ಮೂಲಭೂತವಾಗಿ ವಾಸ ಮಾಡುವುದಕ್ಕೆ ಮನೆ ಬಡವರಿಗೆ ಶಿಕ್ಷಣ, ನೀರಾವರಿ ಸೌಲಭ್ಯ ಕೊಡಬೇಕಾಗುತ್ತದೆ. ಪರಿಶಿಷ್ಟಜಾತಿಯವರಿಗೆ ನೀವು ಆ ಮೂರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ತಾವೇನು ಶಿಕ್ಷಣ ಹೌಸಿಂಗ್, ನೀರಾವರಿಗೆ ಏನು ಆದ್ಯತೆ ಕೊಟ್ಟಿದ್ದೀರಿ, ಅದೇ ಪ್ರಕಾರವಾಗಿ ಮನೆಗೆ ರಾಜೀವಗಾಂಧಿ ಹೌಸಿಂಗ್ ಕಾರ್ಪೋರೇಷನ್ ಅದು ನಡೆದುಕೊಂಡು ಹೋಗುತ್ತಿದೆ. ಅದೊಂದು ಒಳ್ಳೆಯ ಕಾರ್ಯಕ್ರಮ ಅದರ ಜೊತೆಗೆ ತಮ್ಮ ಮೂರು ವರ್ಷಗಳ ಒಳಗೆ

ಪರಿಶಿಷ್ಟ ಜಾತಿ ಅರ್ಹ ಫಲಾನುಭವಿಗಳು ಈ ರಾಜ್ಯದಲ್ಲಿ ಯಾರು ಇದ್ದಾರೆ ಅವರಿಗೆ ಹಂತ ಹಂತವಾಗಿ ಈ ಗಂಗಾ ಕಲ್ಯಾಣ ಯೋಜನೆಯನ್ನು ಕೊಡಿಸುತ್ತೇವೆನ್ನುವ ಘೋಷಣೆ ಮಾಡಿ. ಒಂದೇ ವರ್ಷದಲ್ಲಿ ಕೊಡಿ ಎಂದು ನಾನು ಹೇಳುವುದಿಲ್ಲ, ಬದಲಾಗಿ ನಿಮ್ಮ ಅಧಿಕಾರಾವಧಿಯಲ್ಲಿ ಯಾರ್ಯಾರು ಅರ್ಹತೆವುಳ್ಳ ಫಲಾನುಭವಿಗಳು ಇದ್ದರೆಂಬುದನ್ನು ಒಂದು ಸರ್ವೇ ಮಾಡಿ ಅವರಿಗೆ ಕೊಡತಕ್ಕಂಥ ಕೆಲಸ ಮಾಡಿದರೆ ಬಹಳ ಪುಣ್ಯ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :— ತಮ್ಮ ಅವಗಹನೆಗೆ ತರುವುದಾದರೆ, ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕುಟುಂಬಗಳಿಗೆ ಎಷ್ಟು ಮನೆಯಿಲ್ಲ ಅದನ್ನು ಸರ್ವೇ ಮಾಡಲಿಕ್ಕೆ ಈಗಾಗಲೇ ನಾನು ಕಳುಹಿಸಿದ್ದೇನೆ.

ಶ್ರೀ ಬಿ. ಸೋಮಶೇಖರ್ :— ಅವರಿಗೂ ಹಾಗೂ ಇತರರನ್ನು ಕೂಡ ಗುರುತಿಸಬೇಕು, ಏಕೆಂದರೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು 11 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಆದೊಂದು ತೀರ್ಮಾನದ ಪ್ರಕಾರ ನಾವು ಈಗಾಗಲೇ ಕೆಲಸವನ್ನು ಮಾಡಿದ್ದೇವೆ, ಮೊದಲನೇ ಹಂತದಲ್ಲಿ 2 ಲಕ್ಷ, ಕಟ್ಟಿದ್ದು, ಎರಡನೇ ಹಂತವಾಗಿ ಆ ಕಾರ್ಯಕ್ರಮ ಅನುಷ್ಠಾನವಾಗುತ್ತಿದೆ. ವಿಶೇಷವಾಗಿ ಉಳಿದ ಮೂರು ವರ್ಷಗಳ ಅವಧಿಯಲ್ಲಿ ಈ ಪರಿಶಿಷ್ಟ ಜಾತಿ ಮತ್ತು ವರ್ಗದ ಎಲ್ಲಾ ಜನರಿಗೂ ಮನೆ ಕೊಡತಕ್ಕಂಥ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಮಾಡಬೇಕೆನ್ನುವ ಚಿಂತನೆ ಇದೆ, ಇದಕ್ಕೆ ಹಣವನ್ನು ಒದಗಿಸಿಕೊಂಡು ಮಾಡುತ್ತೇವೆ ಜೊತೆಗೆ ಹೆಚ್ಚು ಸಂಖ್ಯೆ ಎಲ್ಲಿದೆಯೋ ಅಲ್ಲಿ ಹೆಚ್ಚು ಮನೆ ಕೊಡಬೇಕೆಂದು ಆಲೋಚನೆ ಮಾಡಿದ್ದೇವೆ.

ಶ್ರೀ ಬಿ. ಸೋಮಶೇಖರ್ :— ಪರಿಶಿಷ್ಟ ಜಾತಿಯವರಿಗೆ 50 ಸಾವಿರ ರೂ. ಆದಾಯ ಇದ್ದರೆ ಇಂಥವರಿಗೆ ವಿದ್ಯಾರ್ಥಿವೇತನ ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರದವರು ಈ ಒಂದು ಮಾರ್ಗಸೂಚನೆಯನ್ನು ಕೊಟ್ಟಿದ್ದಾರೆಂದು ಕಾಣಿಸುತ್ತದೆ. ಇದರಿಂದಾಗಿ ಬಹಳ ಅನ್ಯಾಯವಾಗುತ್ತದೆ, ಏಕೆಂದರೆ ಒಬ್ಬ ಅಟೆಂಡರ್ ಆದವನಿಗೂ ಕೂಡ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಆದಾಯ ಬರುತ್ತದೆ, ಇಂಥವರಿಗೆ ಆದಾಯ ಮಿತಿ ಹಾಕಿದರೆ, ಯಾವುದೇ ವಿದ್ಯಾರ್ಥಿವೇತನ ಬರುವುದಿಲ್ಲ. ಸುಮಾರು 450 ರೂಪಾಯಿಗಳನ್ನು ಹಾಸ್ಟೆಲ್‌ಗೆ ಕೊಡುತ್ತೀರಿ, ಡೇಸ್ ಸ್ಕಾಲರ್-ಷಿಪ್‌ಗಳಿಗೆ 200 ರೂಪಾಯಿಗಳವರೆಗೆ ಕೊಡುತ್ತೀರಿ, ಅದರ 50 ಪರ್ಸೆಂಟ್ ಆದರೂ ನೀವು ಹಾಸ್ಟೆಲ್‌ಗೆ ಕೊಡಬೇಕಾಗುತ್ತದೆ. ಎಸ್‌ಸಿಪಿಯಲ್ಲಿ ಡಿಫರೆನ್ಸ್ ಅಮೌಂಟ್‌ನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇದನ್ನು ನಮ್ಮ ರಾಜ್ಯದಲ್ಲಿಯಾದರೂ

ಆ ಒಂದು ಸೀಲಿಂಗ್ ಲಿಮಿಟ್ ಅನ್ನು ತೆಗೆದು ಅದರ ಡಿಫರೆನ್ಸ್‌ಸನ್ನು ಎಸ್‌ಸಿಪಿಯಲ್ಲಿ ಕೊಡತಕ್ಕಂಥದ್ದು ಸೂಕ್ತವೆಂದು ಹೇಳಲಿಚ್ಛಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆ ಕರೆದಿದ್ದರು, ಪರಿಶಿಷ್ಟ ಜಾತಿಯ ಹೈಪವರ್ ಕಮಿಟಿ ಎಂದು ಆಗ ಕರೆದಿದ್ದರು, ಅವರು ಒಂದು ಆಶ್ವಾಸನೆ ಕೊಟ್ಟಿದ್ದರು. ತಾವೂ ಕೂಡ ಹೇಳಿದ್ದೀರಿ, ಏನೆಂದರೆ, ಎಸ್‌ಸಿ ಎಸ್‌ಟಿ ಕಮೀಷನ್ ಮಾಡುವುದಕ್ಕೆ ನಾವು ಒಪ್ಪಿದ್ದೇವೆಂದು ಹೇಳಿದ್ದೀರಿ. ಏಕೆಂದರೆ ನಾವು ಆ ಬಿಲ್‌ನ್ನು ತಯಾರಿಸಿದ್ದೆವು, ಕಾರಣಾಂತರಗಳಿಂದ ಅದನ್ನು ನಾವು ತರಲಿಕ್ಕೆ ಆಗಲಿಲ್ಲ, ನಾನು ಆಗ ನಮ್ಮ ಸರ್ಕಾರ ಮಾಡಲಿಕ್ಕೆ ಆಗಲಿಲ್ಲ ನೀವಾದರೂ ಅದನ್ನು ಮಾಡಬೇಕು, ಏಕೆಂದರೆ, ಹಿಂದುಳಿದ ವರ್ಗಗಳ ಆಯೋಗ ಇದೆ, ಅಲ್ಪಸಂಖ್ಯಾತರ ವರ್ಗಗಳ ಆಯೋಗ ಇದೆ, ಹೀಗಾಗಿ ಎಸ್‌ಸಿ / ಎಸ್‌ಟಿ ಕಮೀಷನ್ ಮಾಡಬೇಕು, ಅದರ ಜೊತೆಗೆ ಪವರ್ಸ್ ಕೊಡಬೇಕು, ಸುಮ್ಮನೆ ಟೀಥ್‌ಲೆಸ್ ಕಮೀಷನ್ ಆದರೆ ಏನೂ ಪ್ರಯೋಜನವಿಲ್ಲ. ಕ್ವಾಸಿ ಜ್ಯೂಡಿಷೆಲ್ ಪವರ್ಸ್ ಕೊಟ್ಟು ಆ ಕಮೀಷನ್ ಮಾಡಬೇಕೆಂದು ಹೇಳಿದಾಗ ಅದಕ್ಕೆ ನೀವು ಒಪ್ಪಿಕೊಂಡಿದ್ದೀರಿ, ಅದನ್ನು ಏಕೆ ಈ ಅಧಿವೇಶನದಲ್ಲಿ ತರಲಿಲ್ಲ ಅದನ್ನು ತರಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ನಾನು ಈಗಾಗಲೇ ಮಂಜೂರಾತಿಯನ್ನು ನೀಡಿದ್ದೇನೆ, ಸಚಿವ ಸಂಪುಟದ ಮುಂದೆ ಈ ಅಧಿವೇಶನದಲ್ಲಿ ಮಂಡಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಸಂತೋಷ. ಮತ್ತೊಂದು ವಿಷಯ ಏನೆಂದರೆ, ಈ ಡಿಪಿಎಆರ್‌ನವರು ತಮ್ಮ ಗಮನಕ್ಕೆ ತಂದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದ ಜನಗಳಿಗೆ ನೀಡುತ್ತಿರುವ ಮೀಸಲಾತಿಯಿರಬಹುದು, ಉದ್ಯೋಗ ಇರಬಹುದು, ಬಡ್ತಿ ವಿಚಾರ ಇರಬಹುದು, ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು 1976-78 ರಲ್ಲಿ ಮಾನ್ಯ ದೇವರಾಜ್ ಅರಸ್ ರವರು ಮುಖ್ಯಮಂತ್ರಿಯಾಗಿದ್ದಾಗ ಹೈ ಪವರ್ ಕಮಿಟಿ ಎಂದು ಮಾಡಿದ್ದರು. ಇದರಲ್ಲಿ ಏನು ಎಂದರೆ ಪ್ರತಿ ಆರು ತಿಂಗಳಿಗೊಮ್ಮೆ ಸಭೆ ಸೇರಿ, ಮೀಸಲಾತಿ ಎಲ್ಲೆಲ್ಲಿ ಉಲ್ಲಂಘನೆಯಾಗಿದೆ, ಎಲ್ಲೆಲ್ಲಿ ಬಡ್ತಿ ಸರಿಯಾಗಿ ಕೊಟ್ಟಿಲ್ಲ, ಎಲ್ಲೆಲ್ಲಿ ನೇಮಕಾತಿ ಆಗಿಲ್ಲ, ಇದನ್ನೆಲ್ಲಾ ಮಾನೀಟರ್ ಮಾಡತಕ್ಕಂಥ ಈ ಹೈಪವರ್ ಕಮಿಟಿಗೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ, ಸಮಾಜ ಕಲ್ಯಾಣ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ, ಕೆಲವು ಮಂತ್ರಿಗಳೂ ಹಾಗೂ ಕೆಲವು ಶಾಸಕರು ಈ ಕಮಿಟಿಯಲ್ಲಿ ಇರುತ್ತಾರೆ. ಇದನ್ನು ನಾವು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಮತ್ತು ಮಾನ್ಯ ಜೆ.ಹೆಚ್. ಪಾಟೀಲ್‌ರವರ ಕಾಲದಲ್ಲಿ ಮುಂದುವರೆಸಿಕೊಂಡು ಬಂದು ಆರು ತಿಂಗಳಿಗೊಮ್ಮೆ ಸಭೆ ಸೇರುತ್ತಿದ್ದೆವು. ಈಗ ಎರಡು ವರ್ಷವಾಗಿದೆ ಒಂದು ಸಭೆಯೂ ಆಗಿದೆ ಎಂದು ನನಗೆ ಅನ್ನಿಸುತ್ತಿಲ್ಲ. ಬಹುಶ: ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಏಕೆಂದರೆ, ನೀವು ಆಗಿಂದಾಗ್ಗೆ ಈ ಸಭೆಯನ್ನು ಕರೆದು ಚರ್ಚೆ ಮಾಡಿದ್ದರೆ ಇಷ್ಟೊಂದು ನಿರುದ್ಯೋಗದ ಸಮಸ್ಯೆಯಾಗಲಿ,

ಬಡ್ತಿಯ ವಿಚಾರವಾಗಲಿ, ಇಂಥ ಸಮಸ್ಯೆಗಳು ಉದ್ಭವಿಸುತ್ತಿರಲಿಲ್ಲ. ಒಂದು ಕಡೆ ಬ್ಯಾಕ್‌ಲಾಗ್ ಹುದ್ದೆ ತುಂಬುವುದಿಲ್ಲವೆನ್ನುವ ಅಜಿಟೇಷನ್ ಮತ್ತೊಂದು ಕಡೆ ಬಡ್ತಿಯ ವಿಚಾರದಲ್ಲಿ ಅನ್ಯಾಯವಾಗಿದೆ ಅಂತಾರೆ, ಮತ್ತೊಂದು ಮೀಸಲುತಿ ಉಲ್ಲಂಘಿಸಿದ್ದಾರೆ ಅಂತಾರೆ, ಆದ್ದರಿಂದ, ನೀವು ಪ್ರತಿ ಆರು ತಿಂಗಳಿಗೊಮ್ಮೆ ಈ ಹೈಪವರ್ ಕಮಿಟಿ ಕರೆದು ಚರ್ಚೆ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಇನ್ನು ಮುಂದೆಯಾದರೂ ಆ ಸಭೆಯನ್ನು ಕರೆಯಬೇಕೆನ್ನುವುದು ನನ್ನ ಒಂದು ಆಗ್ರಹ. ಬ್ಯಾಕ್‌ಲಾಗ್ ವಿಚಾರವಾಗಿ ನಾವು ಬೇರೆ ರೂಪದಲ್ಲಿ ತಂದು ಅದರ ಬಗ್ಗೆ ನಂತರ ಮಾತನಾಡುತ್ತೇನೆ. ಈಗ ಈ ಬೇಡಿಕೆಗಳಿಗೆ ಸಂಬಂಧಿಸಿದಂತೆ ನಾನು ಮಾತನಾಡಲಿಚ್ಛಿಸುತ್ತೇನೆ. ೧೯೯೧ರಲ್ಲಿ ಎಸ್‌ಸಿ : ಎಸ್‌ಟಿ ರಿಸರ್ವೇಶನ್ ವೈಲೇಶನ್ ಆ್ಯಕ್ಟ್‌ಗೆ ನಾವು ರೂಲ್ಸ್‌ನ್ನು ಮಾಡಿದ್ದೆವು. ಇವತ್ತು ಎಲ್ಲಾ ಇಲಾಖೆಗಳಲ್ಲಿ ರಿಸರ್ವೇಶನ್ ವೈಲೇಶನ್ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ, ಸಹಕಾರ ಇಲಾಖೆಯ ವ್ಯಾಪ್ತಿಗೆ ಬರತಕ್ಕಂಥ ಸೊಸೈಟಿಗಳಲ್ಲಿಯೂ ಕೂಡ ಮೀಸಲಾತಿಯನ್ನು ವೈಲೇಷನ್ ಮಾಡಲಾಗುತ್ತಿದೆ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಹಕಾರ ಸಚಿವರಾಗಿದ್ದಂಥ ಸಂದರ್ಭಜದಲ್ಲಿ ಸಹಕಾರ ಇಲಾಖೆಗೆ ಈ ರೂಲ್ಸ್‌ನ್ನು ಮಾಡಿದ್ದರು. ಆದರೆ ಇವತ್ತಿನ ದಿವಸ ಯಾವುದೇ ಸೊಸೈಟಿಯಲಾಗಲಿ ಮತ್ತು ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿಯೂ ಕೂಡ ಮೀಸಲಾತಿಯನ್ನು ಅನುಸರಿಸುತ್ತಿಲ್ಲ. ಮೀಸಲಾತಿಯನ್ನು ಸರಿಯಾಗಿ ಅನುಸರಿಸದಿದ್ದರೆ ಕಠಿಣವಾದ ಶಿಕ್ಷೆಗೆ ಒಳಗಾಗುತ್ತಾರೆ ಎನ್ನತಕ್ಕಂಥ ಕಾನೂನು ಇದ್ದರೂ ಕೂಡ ಇವತ್ತಿನ ದಿವಸ ಯಾರೂ ಹೆದರುತ್ತಿಲ್ಲ. ಆದ್ದರಿಂದ ಇದನ್ನು ಕಟ್ಟುನಿಟ್ಟಾಗಿ ಆಚರಣೆಗೆ ತಂದಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥದನ್ನು ಪರಿಶೀಲನೆ ಮಾಡತಕ್ಕಂಥ ಅಧಿಕಾರ ಸಮಾಜ ಕಲ್ಯಾಣ ಇಲಾಖೆಯ ಸಚಿವರಿಗೆ ಇದೆ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರೆ ಎಲ್ಲಾ ಇಲಾಖೆಗಳಿಗೆ ಚುರುಕು ಮುಟ್ಟಿಸುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆಯಾಗಿದೆ. ನಾನು ಈಗಾಗಲೇ ಕಳೆದ ಬಾರಿ ಕಂದಾಯ ಇಲಾಖೆ ಬಗ್ಗೆ ಮಾತನಾಡಿದ್ದೇನೆ. ಆದರೆ, ಇವತ್ತಿನ ದಿವಸ ಎರಡು-ಮೂರೂ ಪ್ರಮುಖವಾದಂಥ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಒಂದೆರಡು ತಿದ್ದುಪಡಿಗಳನ್ನು ತಂದಿದ್ದೆವು. ಬಗರ್‌ಹುಕುಂ ಸಾಗುವಳಿ ಯಾರ್ಯಾರು ಮಾಡುತ್ತಿದ್ದಾರೆ, ಅಂಥವರು ಅರ್ಜಿ ಹಾಕಿಕೊಳ್ಳಲು ೧೯೯೧ರವರೆಗೆ ಸಮಯವನ್ನು ನಿಗದಿ ಮಾಡಲಾಗಿತ್ತು. ಆದರೆ, ನಾವು ೧೯೯೯ರವರೆಗೆ ಬಗರ್‌ಹುಕುಂ ಸಾಗುವಳಿಗೆ ಅರ್ಜಿ ಹಾಕಲು ತಿದ್ದುಪಡಿ ತಂದೆವು. ಇದೇ ರೀತಿಯಾಗಿ ಗೇಣಿದಾರರಿಗೆ ಅರ್ಜಿ ಹಾಕಲು ೧೯೭೭ರವರೆಗೆ ಮಾತ್ರ ಅವಕಾಶ ಇತ್ತು. ಇವರಿಗೂ ಸಹ ಮತ್ತೊಂದು ಅವಕಾಶವನ್ನು ಕೊಡಬೇಕೆಂದು ನಾವು ಮತ್ತೆ ತಿದ್ದುಪಡಿ ತಂದೆವು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸುಮಾರು ೧೦ ಲಕ್ಷ, ಅರ್ಜಿದಾರರು ಬಗರ್‌ಹುಕುಂ,

ಸಾಗುವಳಿ ಚೀಟಿ ಪಡೆಯಲು ಅರ್ಜಿ ಹಾಕಿದ್ದಾರೆ. ಈ ಬಗರ್‌ಹುಕುಂ ವ್ಯಾಪ್ತಿಯೊಳಗೆ ಸಣ್ಣ ಸಣ್ಣ ಕಾಫಿ ಬೆಳೆಗಾರರನ್ನು ಮತ್ತು ಕೇಂದ್ರ ಸರ್ಕಾರದಿಂದ ಸಿ ಅಂಡ್ ಡಿ ಲ್ಯಾಂಡ್ ಪಡೆದುಕೊಂಡಿರುವಂತವರನ್ನೂ ಕೂಡ ರೆಗ್ಯುಲರೈಸ್ ಮಾಡುವುದಕ್ಕೋಸ್ಕರ ಇದರಲ್ಲಿ ಸೇರಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಇರತಕ್ಕಂಥ ಕಮಿಟಿಯೂ ಕಳೆದ ಎರಡು ವರ್ಷಗಳಿಂದ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಇವತ್ತಿನ ದಿವಸ ಅಧಿಕಾರಿಗಳ ನೇತೃತ್ವದಲ್ಲಿ ಒಂದು ಕಮಿಟಿ ಮತ್ತು ಶಾಸಕರ ನೇತೃತ್ವದಲ್ಲಿ ಒಂದು ಕಮಿಟಿ ಶಿವಮೊಗ್ಗದಲ್ಲಿ ಮಾಡಿರತಕ್ಕಂಥದ್ದನ್ನು ನಾನು ಕೇಳಿದ್ದೇನೆ. ಇದು ಸರಿಯಾದ ವ್ಯವಸ್ಥೆಯಲ್ಲ. ಒಂದು ಕಮಿಟಿಯಲ್ಲಿ ಶಾಸಕರು ಇಲ್ಲದೇ ಇದ್ದರೆ, ಅವರನ್ನು ಬೇರೊಂದು ಕಮಿಟಿಗೆ ನೇಮಕ ಮಾಡುವುದು ಸಹಜ.

ಶ್ರೀ ಆರಗಜ್ಞಾನೇಂದ್ರ :— ಇವತ್ತಿನ ದಿವಸ ನೀವು ಎಷ್ಟೇ ಕಮಿಟಿ ಮಾಡಿದರೂ ಕೂಡ ತಾಲ್ಲೂಕುಗಳಲ್ಲಿ ಸರ್ವೆಯರ್‌ಗಳು ಇಲ್ಲ. ಸರ್ವೆ ಮಾಡದೇ ಕಮಿಟಿ ಯಾವ ರೀತಿ ಕೆಲಸ ಮಾಡುವುದಕ್ಕಾಗುತ್ತದೆ ಆದ್ದರಿಂದ, ಮೊದಲು ಸರ್ವೇಯರ್ ಕೊರತೆಯನ್ನು ನೀಗಿಸಬೇಕು.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಉಪಾಧ್ಯಕ್ಷರೆ ಇನ್ನೊಂದು ಐತಿಹಾಸಿಕ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಅದೇನೆಂದರೆ, ಸರ್ಕಾರಿ ಅಥವಾ ಖಾಸಗಿ ಜಮೀನುಗಳಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದರೆ ಅವುಗಳನ್ನು ರೆಗ್ಯುಲರೈಸ್ ಮಾಡತಕ್ಕಂಥ ಒಂದು ಕಾನೂನನ್ನು ತಂದಿದ್ದೇವು. ಕೆಲವು ಬಡವರು ಸುಮಾರು ೨೦ ವರ್ಷಗಳಿಂದ ಒಂದೇ ಕಡೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಬಹಳ ವರ್ಷಗಳಿಂದ ಇವರು ವಾಸವಾಗಿದ್ದರು ಕೂಡ ಅವರು ಖಾತೆ ಮಾಡಿಕೊಡಲಿಕ್ಕೆ ಅವಕಾಶ ಇಲ್ಲ. ಹಾಗೆಯೇ ಇವರು ಸದರಿ ಮನೆಯ ಹಕ್ಕುದಾರರು ಆಗದೇ ಇರುವುದರಿಂದ ಯಾವುದೇ ರೀತಿಯ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ಆಗುತ್ತಿರಲಿಲ್ಲ. ಆದ್ದರಿಂದ ಇವುಗಳನ್ನು ರೆಗ್ಯುರಲೈಸ್ ಮಾಡುವುದಕ್ಕೋಸ್ಕರ ನಾವು ೯೪ಸಿಗೆ ತಿದ್ದುಪಡಿಯನ್ನು ತಂದಿದ್ದೇವೆ. ಐದು ಸಾವಿರ ಮನೆಗಳನ್ನು ರೆಗ್ಯುಲರೈಸ್ ಮಾಡಿಸಿಕೊಟ್ಟಿದ್ದೇವೆ ಮತ್ತು ಇದರಿಂದ ಬಹಳ ಜನರಿಗೆ ಸಹಾಯವಾಗಿದೆಯೆಂದು ಸನ್ಮಾನ್ಯ ರೇವಣ್ಣನವರು ಮತ್ತು ವಸಂತ ಸಾಲಿಯಾನರವರು ಹೇಳಿದರು. ಇವತ್ತಿನದಿವಸ ಇನ್ನು ಕೆಲವು ಕಡೆ ಅರ್ಜಿಗಳನ್ನು ತೆಗೆದುಕೊಂಡಿಲ್ಲ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಸದರಿ ಕಾನೂನನ್ನು ಮಾಡಿದರೂ ಕೂಡ ನನ್ನ ಕ್ಷೇತ್ರದಲ್ಲಿ ನಮ್ಮ ತಾಲ್ಲೂಕಿನ ತಹಸೀಲ್ದಾರರವರು ಇದರ ಬಗ್ಗೆ ಸರಿಯಾದ ಪ್ರಚಾರ ಕೊಡದೇ ಇರುವುದರಿಂದ ಅನೇಕ ಅರ್ಜಿದಾರರಿಗೆ ಈ ಕಾನೂನು ಇದೇ ಎಂಬುದೇ ಗೊತ್ತಿಲ್ಲ. ಇದಕ್ಕೆ ಮತ್ತೆ ಕಾಲಮಿತಿ ಮಾಡಿ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸಬೇಕು. ಒಂದು ವೇಳೆ ಸಂಬಂಧಪಟ್ಟ ಅಧಿಕಾರಿಗಳು ಆಸಕ್ತಿಯಿಂದ ಸದರಿ

ಕಾರ್ಯವನ್ನು ನಿರ್ವಹಿಸದಿದ್ದರೆ, ಅಂಥ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಆಗಬೇಕು. ರೆಗ್ಯುಲರೈಸ್ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮತ್ತೊಮ್ಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ :— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನನ್ನ ತಾಲ್ಲೂಕಿನಲ್ಲಿ ತಹಸೀಲ್ದಾರರು ಐದು ಸಾವಿರ ಅರ್ಜಿಗಳನ್ನು ರೆಗ್ಯುಲರೈಸ್ ಮಾಡಿದ್ದಾರೆ. ಅದರಲ್ಲಿ ಶ್ರೀಮಂತರೇ ಸಾಗುವಳಿ ಚೀಟಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಆದರೆ ಬಡವರು ಮತ್ತು ದಲಿತರು ಒಂದು ಸಾಗುವಳಿ ಚೀಟಿಯನ್ನೂ ತೆಗೆದುಕೊಂಡು ಹೋಗಿಲ್ಲ. 20 x 30 ನಿವೇಶನಕ್ಕೆ ಎರಡೂವರೆ ಸಾವಿರ ರೂಪಾಯಿ ಖರ್ಚಾಗುವಾಗ ಹಳ್ಳಿಯಲ್ಲಿರತಕ್ಕಂಥ ಬಡವರು ಸಾಗುವಳಿ ಚೀಟಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ? ಆರ್ಥಿಕವಾಗಿ ಯಾರು ಹಿಂದುಳಿದಿದ್ದಾರೆ ಅಂಥವರಿಗೆ ನಾಮಿನಲ್ ರೇಟ್‌ನಲ್ಲಿ ಸಾಗುವಳಿ ಚೀಟಿ ಕೊಡುವಂಥ ವ್ಯವಸ್ಥೆ ಆಗಬೇಕು. ಆದ್ದರಿಂದ ಸದರಿ ಇರತಕ್ಕಂಥ ರೇಟ್‌ನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್‌ಹೆಗಡೆ :— ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಆಶ್ರಯ ಯೋಜನೆಯಲ್ಲಿ ಉಚಿತವಾಗಿ ಕೊಡುವಂಥ ಒಂದು ವ್ಯವಸ್ಥೆ ಇದೆ. ಆದರೆ ಈ ಒಂದು ಯೋಜನೆಯಲ್ಲಿ ಹಣ ಕೊಡಬೇಕಾಗಿರುವುದರಿಂದ, ಇದನ್ನು ಆಶ್ರಯ ಯೋಜನೆಯ ರೂಪದಲ್ಲೇ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು.

ಶ್ರೀ ಬಿ. ಸೋಮಶೇಖರ್ :— ಇವತ್ತಿನ ದಿವಸ ಇರತಕ್ಕಂಥ ಎಲ್ಲಾ ತೊಂದರೆಗಳನ್ನೂ ನಮ್ಮ ಸರ್ಕಾರ ಅರಿತುಕೊಂಡು, ಇದನ್ನು ನಿವಾರಣೆ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಕೆಲವೊಂದು ಆದೇಶಗಳನ್ನು ಹೊರಡಿಸಿದ್ದೇವೆ. ಆದರೆ ಇದನ್ನು ಸರಿಯಾಗಿ ಅನುಸರಿಸುತ್ತಿಲ್ಲವಷ್ಟೆ. ಮೊದಲು ಅವರಿಗೆ ಸಾಗುವಳಿ ಚೀಟಿ ಕೊಟ್ಟು ಆ ನಂತರ ಡಿಮಾಂಡ್‌ಗೆ ಸೇರಿಸಬೇಕೆಂದು ಹೇಳಿದ್ದೇವೆ. ಇವತ್ತಿನ ದಿವಸ ಇದನ್ನೂ ಕೂಡ ಅವರು ಮಾಡಿಲ್ಲ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೇ ೧೯೯೬ ರಿಂದ ೧೯೯೮ರವರೆಗೆ ಇಸವಿಯೊಳಗೆ ಮೈಸೂರಿನಲ್ಲಿ ಸುಮಾರು ೬೮ ಕೋಟಿ ರೂಪಾಯಿಗಳಷ್ಟು ಹಗರಣ ನಡೆದಿದೆ. ಈ ವಿಷಯದ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಹಾಗೆಯೇ ಇದರ ಬಗ್ಗೆ ವಿಚಾರಣೆ ಕೂಡ ನಡೆದಿದೆ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ತನಿಖೆ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಕ್ರಮ ತೆಗೆದುಕೊಂಡಿತ್ತು. ಈ ಒಂದು ನಿಟ್ಟಿನಲ್ಲಿ ನೀವು ಇವತ್ತಿನ ದಿವಸ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ.ನಾಲ್ಕು ಮಂಡಲ್ ಪಂಚಾಯತಿಗಳಲ್ಲಿ ಸುಮಾರು ೬೦೦ ಎಕರೆ ಸರ್ಕಾರ ಮತ್ತು ಖಾಸಗಿ ಜಮೀನಿನಲ್ಲಿ ಸುಮಾರು ೧೦ ಸಾವಿರ ಮನೆಗಳು

ಅನಧಿಕೃತವಾಗಿ ನಿರ್ಮಾಣವಾಗಿದೆ. ಇದರಲ್ಲಿ ಸುಮಾರು ೧೫ ಲಕ್ಷ ರೂಪಾಯಿ ಬೆಲೆ ಬಾಳುವಂಥ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿದ್ದಾರೆ. ಖಾಸಗಿ ಜಮೀನನ್ನು ಕನ್‌ವರ್ಶನ್ ಮಾಡಿಸಿದೆ; ಕೇವಲ ಪವರ್ ಆಫ್ ಅಟಾರ್ನಿ ಮಾಡಿ ಒಂದು ದೊಡ್ಡ ಹಗರಣವೇ ಆಗಿರುವಂಥದ್ದು ಸರ್ಕಾರದ ಗಮನಕ್ಕೆ ಬಂತು. ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳು ವರದಿ ಕೊಟ್ಟ ಮೇಲೆ ಸರ್ಕಾರದ ವತಿಯಿಂದ ಉಪ ಕಾರ್ಯದರ್ಶಿಯವರಿಂದ ಸದರಿ ವಿಷಯವನ್ನು ತನಿಖೆ ಮಾಡಿ ವರದಿ ತರಿಸಿಕೊಂಡಿದ್ದೆವು. ಸುಮಾರು ೭೮ ಕೋಟಿ ರೂಪಾಯಿಗಳಲ್ಲಿ ಖಾತೆ ಮಾಡತಕ್ಕಂಥದರಲ್ಲಿ ಸರ್ಕಾರಕ್ಕೆ ಸುಮಾರು ೧೨ ಕೋಟಿ ೮೦ ಲಕ್ಷ ರೂಪಾಯಿ ನಷ್ಟವಾಗಿದೆ. ಹಾಗೆಯೇ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ೪೯ ಕೋಟಿ ೭೨ ಲಕ್ಷ, ೧೨ ಸಾವಿರ ೮೦೦ ರೂಪಾಯಿಗಳು ನಷ್ಟವಾಗಿದೆ. ಮತ್ತೆ ಬೆಟರ್‌ಮೆಂಟ್ ಶುಲ್ಕದಿಂದ ೪೮ ಲಕ್ಷ ರೂಪಾಯಿ ಹಾಗೆಯೇ ನೋಂದಣಿ ಶುಲ್ಕ ೧೦ ಕೋಟಿ ೪೫ ಲಕ್ಷ ರೂಪಾಯಿಗಳಷ್ಟು ಸರ್ಕಾರಕ್ಕೆ ನಷ್ಟವಾಗಿದೆ. ಈ ಎಲ್ಲಾ ವಿಚಾರಗಳ ಮೇಲೆ ತೀಕ್ಷ್ಣವಾದಂಥ ಕ್ರಮ ತೆಗೆದುಕೊಳ್ಳಬೇಕಂದು ವರದಿ ಬಂದ ಮೇಲೆ ನಮ್ಮ ಸರ್ಕಾರ ದಿನಾಂಕ: ೨೪-೦೯-೧೯೯೯ರಲ್ಲಿ ಒಂದು ಆದೇಶ ಹೊರಡಿಸಿತ್ತು ಆದೇನೆಂದರೆ "ಈ ಪ್ರಕರಣದಲ್ಲಿ ಸರ್ಕಾರ ಜಮಿನೀನಲ್ಲಿ ಅನಧಿಕೃತವಾಗಿ ನಿವೇಶನ ಮತ್ತು ಮನೆಗಳನ್ನು ನಿರ್ಮಾಣ ಮಾಡಿಕೊಂಡಿರುವಂಥದು ಸರ್ಕಾರ ತಕ್ಷಣ ಇದನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕಂಥದ್ದು ಹಾಗೂ ಅನಧಿಕೃತವಾಗಿ ಮನೆ ನಿವೇಶನ ಆಗಿರುವಂಥದನ್ನು ಬಹಿರಂಗ ಹರಾಜು ಮಾಡಿ ಇತ್ಯರ್ಥ ಮಾಡಿ ಇದರಿಂದ ಬಂದಂಥ ಹಣವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಆದೇಶವನ್ನು ಮಾಡಿದ್ದೇವೆ." ಹಾಗೆಯೇ ಖಾಸಗಿ ಜಮೀನಿನಲ್ಲಿ ವೈಲೇಷನ್ ಮಾಡಿರತಕ್ಕಂಥದನ್ನು ಬೇಗ ಇತ್ಯರ್ಥ ಮಾಡಿ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ನಾವು ಆದೇಶವನ್ನು ಹೊರಡಿಸಿದ್ದೇವೆ ಸರ್ಕಾರಿ ಆದೇಶ ಹೊರಡಿಸಿ ಸುಮಾರು ಎರಡು ವರ್ಷವಾಯಿತು. ಆದರೆ ಇದುವರೆಗೆ ಯಾವುದೇ ಮನೆಯನ್ನು ಅಲ್ಲಿ ಹರಾಜು ಹಾಕಿಲ್ಲ. ಯಾವುದೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲವೆಂದು ಮಾನ್ಯ ಭಾರತೀಶಂಕರ್‌ರವರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು.

ಡಾ: ಭಾರತಿಶಂಕರ್ :— ಈ ಸಂದರ್ಭದಲ್ಲಿಯೂ ಕೂಡ ನಾನು ಸರ್ಕಾರಕ್ಕೆ ಕೇಳುವುದೇನೆಂದರೇ ಈ ವಿಷಯದ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಮನಸ್ಸು ಇದೆಯೋ ಅಥವಾ ಇಲ್ಲವೋ ಎಂಬುದನ್ನು ಇಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ :— ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ ಮತ್ತು ಈಗ ಇರುವ ಕಾಂಗ್ರೆಸ್ ಸರ್ಕಾರ ಕ್ರಮ ತೆಗೆದುಕೊಂಡಿಲ್ಲವೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ನಮ್ಮ ಸರ್ಕಾರ ಇದಕ್ಕೆ ಸಂಬಂಧಪಟ್ಟಂಥ

ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಿ 24-09-1999ರಲ್ಲಿ ನಿರ್ದಿಷ್ಟವಾದಂಥ ಆದೇಶವನ್ನು ವಿಭಾಗಾಧಿಕಾರಿಗಳಿಗೆ ಕೊಟ್ಟಿದೆ.

ಡಾ: ಭಾರತಿ ಶಂಕರ್:— ನಿರ್ದಿಷ್ಟವಾಗಿ ಜನಪ್ರತಿನಿಧಿಗಳು ಇದರಲ್ಲಿ ಭಾಗಿಗಳಾಗಿದ್ದಾರೆಂದು ವರದಿಯಲ್ಲಿ ಕೋಟ್ ಮಾಡಲಾಗಿದೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಅಧ್ಯಕ್ಷರೆ, ನಾನು ವ್ಯಕ್ತಿಗಳ ಹೆಸರನ್ನು ಹೇಳುತ್ತಿಲ್ಲ. ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ನೀಡಿರತಕ್ಕಂತ ವರದಿಯನ್ನು ಪರಿಶೀಲನೆ ಮಾಡಿದ್ದೇವೆ. ಈ ಪ್ರಕರಣದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿವೇಶನ ಮತ್ತು ಮನೆ ನಿರ್ಮಿಸಿರುವ ಬಗ್ಗೆ ಸರ್ಕಾರ ತಕ್ಷಣ ಮುಟ್ಟುಗೋಲು ಹಾಕಿಕೊಳ್ಳುವಂಥದ್ದು ಹಾಗೂ ಅನಧಿಕೃತವಾಗಿ ನಿವೇಶನ ಮನೆ ಆಗಿರುವಂಥದ್ದನ್ನು ಬಹಿರಂಗ ಹರಾಜು ಮಾಡಿ ಇತ್ಯರ್ಥಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆ ನಂತರ ಕಾನೂನು ಬಾಹಿರವಾಗಿ ಕಂದಾಯ ಜಮೀನನ್ನು ಭೂ ಪರಿವರ್ತನೆ ಮಾಡಿಸದೆ ಕಟ್ಟಡಗಳು ಹಾಗೂ ನಿವೇಶನ ಮಾಡಲು ಸಹಕರಿಸಿದ ಸ್ಥಳೀಯ ಅಂದಿನ ನಿರ್ದೇಶಕರು ಮತ್ತು ನಾಡ ಕಛೇರಿಯ ಉಪ ತಹಸೀಲ್ದಾರ್‌ರವರ ಮೇಲೆ ಕ್ರಮ ಕೈಗೊಂಡು, ಈ ಕೇಸ್‌ನ್ನು ಇತ್ಯರ್ಥ ಮಾಡಬೇಕೆಂದು ನಾವು ಆದೇಶವನ್ನು ಕೊಟ್ಟು ಸುಮಾರು ಎರಡು ವರ್ಷವಾಗಿದೆ. ಇದರ ಮೇಲೆ ನಮ್ಮ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆದರೆ ಎರಡು ವರ್ಷಗಳಿಂದ ಇದರ ಪ್ರಗತಿ ಏನಾಗಿದೆ ಎಂಬುದನ್ನು ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಬೇಕು. ಇಲ್ಲದಿದ್ದರೆ, ಮುಂದೆ ಯಾವತ್ತು ಅಥವಾ ಎಷ್ಟು ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಭಾರತಿಶಂಕರ್:— ಬಹುಶ: ಕಂದಾಯ ಮಂತ್ರಿಯವರಿಗೆ ಯಾರಾದರೂ ಇದರ ಬಗ್ಗೆ ಒತ್ತಾಯ ತಂದಿದ್ದಾರೆಯೇ ಅಥವಾ ಇಲ್ಲವೊ ಎಂಬುದರ ಬಗ್ಗೆ ಆ ಸದನದಲ್ಲಿ ಸ್ಪಷ್ಟಪಡಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಕಾನೂನು ಇಲಾಖೆಯವರು ಲೋಕಾಯುಕ್ತ ಕಾಯಿದೆಗೆ ತಿದ್ದುಪಡಿ ತರಬೇಕೆಂದು ಹೇಳುತ್ತಲೇ ಇದ್ದೇವೆ. ಈಗ ಹೊಸದಾಗಿ ಲೋಕಾಯುಕ್ತರು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಅವರು ಬಹಳ ಆಸಕ್ತಿಯಿಂದ ತಪಾಸಣೆಯನ್ನು ಮಾಡುತ್ತಿದ್ದಾರೆ, ಬಹಳ ಸಂತೋಷ. ಅವರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದರು, ಹೈಕೋರ್ಟಿನಿಂದ ಸುಪ್ರೀಂಕೋರ್ಟಿಗೆ ಹೋಗಿರುವ ಹಿರಿಯ ನ್ಯಾಯಾಧೀಶರಾಗಿದ್ದಾರೆಂದು ನನಗನ್ನಿಸುತ್ತದೆ. ಅವರಿಗೆ ಬಹಳ ಉತ್ಸಾಹ ಇರಬಹುದೆಂದು ಕಾಣಿಸುತ್ತದೆ, ಅವರು ಈ ಕಾನೂನಿನ ತಿದ್ದುಪಡಿಯಾಗುವುದಕ್ಕೆ

ಮುಂಚೆಯೇ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದರಿಂದ ಅವರು ತೀಕ್ಷ್ಣತೆಯನ್ನು ಅರ್ಥ ಮಾಡಿಕೊಂಡು, ಏಕೆಂದರೆ, ಈಗಿರತಕ್ಕಂತಹ ಲೋಕಾಯುಕ್ತ ಕಾಯಿದೆಯಲ್ಲಿ ಪ್ರೋಮೋಟೋ ಇನ್ಸ್‌ಪೆಕ್ಷನ್‌ಗೆ ಅವಕಾಶವಿಲ್ಲ. ಯಾರಾದರೂ ಅರ್ಜಿಯನ್ನು ಕೊಟ್ಟಾಗ ಮಾತ್ರ ಆ ಅರ್ಜಿಯ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ. ಪ್ರೋಮೋಟೋ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಿದ್ದುಪಡಿಯನ್ನು ತರಬೇಕು, ಅವರು ಇನ್ ಅಡ್ವಾನ್ಸ್ ಆಗಿ ಸುಪ್ರೋಮೋಟೋ ಇನ್ಸ್‌ಪೆಕ್ಷನ್ ಮಾಡುತ್ತಿರುವುದರಿಂದ ತಿದ್ದುಪಡಿಯನ್ನು ಬೇಗ ಮಾಡಿ ಅವರು ಆಸಕ್ತಿಯಿಂದ ಕೆಲಸವನ್ನು ಮುಡುವುದಕ್ಕೆ ತಾವು ಬೆಂಬಲವನ್ನು ಕೊಡಬೇಕೆಂದು ನನ್ನ ಅನಿಸಿಕೆಯಾಗಿದೆ. ಹೈಕೋರ್ಟಿಗೆ ಹೋಗಿ ನಮ್ಮ ಪಬ್ಲಿಕ್ ಸರ್ವೆಂಟ್ಸ್ ಯಾರ್‍ಯಾರು ರಿಟರ್ನ್ಸ್ ಕೊಡುವುದಿಲ್ಲ ಅಂಥವರ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳು ಬರುತ್ತಿದೆ. ಇದರ ಬಗ್ಗೆ ನ್ಯಾಯಾದೀಶರು ಅನೇಕ ನಿದರ್ಶನಗಳನ್ನು ಕೊಡುತ್ತಿದ್ದಾರೆ. ಅದಕ್ಕೆ ತಿದ್ದುಪಡಿಯನ್ನು ತಂದು ಮ್ಯಾನ್‌ಡೇಟರಿ ಮಾಡುವಂತಹ ಕಾನೂನನ್ನು ತರಬೇಕು. ಏಕೆಂದರೆ, ಅನಾವಶ್ಯಕವಾಗಿ ನಮ್ಮ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಶಾಸಕರಿಗೆ, ಮಂತ್ರಿಗಳಿಗೆ ಟೀಕೆ ಟಿಪ್ಪಣಿಗಳು ಬರುತ್ತಿರುವುದರಿಂದ ಈ ಮ್ಯಾನ್‌ಡೇಟರಿ ಮಾಡಿದಾಗ ಆ ನಿಗಧಿತ ಅವಧಿಯೊಳಗಡೆ ನಮ್ಮ ಒಂದು ರಿಟರ್ನ್ಸ್‌ನ್ನು ಕೊಡತಕ್ಕಂತಹ ಪ್ರಯತ್ನಗಲಾಗುತ್ತದೆ. ಸರ್ಕಾರದ ವತಿಯಿಂದ ನೂರಾರು, ಸಾವಿರಾರು ಪ್ರಕರಣಗಳು ಇವತ್ತು ಹೈಕೋರ್ಟಿನಲ್ಲಿರಬುಹುದು, ಬೇರೆ ಬೇರೆ ನ್ಯಾಯಾಲಯಗಳಲ್ಲಿರಬಹುದು. ಇವತ್ತಿನ ಮಾಹಿತಿಗಳ ಪ್ರಕಾರ ಶೇಕಡ 85 ರಷ್ಟು ಕೇಸ್‌ಗಳು, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ತೀರ್ಮಾನವಾಗುತ್ತಿದೆ. ಇದು ಬಹಳ ಆತಂಕಕಾರಿಯಾದ ಸಂಗತಿಯಾಗಿದೆ, ಯಾವುದಾದರೂ ಒಬ್ಬ ವ್ಯಕ್ತಿಗಳು ಸರ್ಕಾರದ ವಿರುದ್ಧವಾಗಿ ಕೋರ್ಟಿಗೆ ಹೋದರೆ, ಕೋರ್ಟಿನಲ್ಲಿ ವೈಯಕ್ತಿಕವಾದಂತಹ ಅಹಿತವಾದ ತೀರ್ಮಾನವಾಗುತ್ತಿದೆಯೇ ಹೊರತು, ಸರ್ಕಾರದ ಹಿತ ಇವತ್ತು ಬಲಿಯಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ, ನಮ್ಮಲ್ಲಿ ಸರಿಯಾದಂತಹ ಸಹಕಾರಗಳಿಲ್ಲ, ನಮ್ಮ ಅಧಿಕಾರಿಗಳು ಸ್ಟೇಟ್‌ಮೆಂಟ್ಸ್‌ನ್ನು ಕೊಡುವುದಾಗಲಿ, ಅದಕ್ಕೆ ಸರಿಯಾದಂತಹ ಸ್ಟೇಟ್‌ಮೆಂಟ್‌ಗಳಾಗುತ್ತಿಲ್ಲ. ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಷನ್ಸ್ ಇರಬಹುದು, ಪ್ಯಾರಾವೈಸ್ ರಿಮಾರ್ಕ್ಸ್ ಇರಬಹುದು ಅದನ್ನು ಅವರು ಸರಿಯಾಗಿ ಕೊಡುತ್ತಿಲ್ಲ, ಇಲ್ಲವೆಂದರೆ ನ್ಯಾಯಾಲಯದಲ್ಲಿ ಸರ್ಕಾರಿ ವಕೀಲರುಗಳು ಅವರು ಸರಿಯಾಗಿ ನ್ಯಾಯಾಲಯದ ಮುಂದೆ ಸರಿಯಾಗಿ ವಾದವನ್ನು ಮಾಡುತ್ತಿಲ್ಲ. ಅಬ್ಸೆಂಟ್ ಆಗುತ್ತಿರುತ್ತಾರೆ, ಈ ಎಲ್ಲಾ ಕಾರಣಗಳಿಂದಲೂ ಸಹ ಸರ್ಕಾರದ ಹಿತ ಬಲಿಯಾಗುತ್ತಿದೆ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ಈ ಸರ್ಕಾರಿ ವಕೀಲರುಗಳು ಅವರಿಗೆ ಏನು ಫೀಯನ್ನು ಕೊಡುತ್ತೀರಿ, it should be linked with performance. ತಾವು ಕೂಡ ಲಾ ಮಿನಿಸ್ಟರ್ ಆಗಿದ್ದೀರಿ, ಕೋರ್ಟಿಗೆ ಅವರು ಹೋಗಿ ಗೆಲ್ಲಲಿ ಅಥವಾ ಬಿಡಲಿ, ಅವರಿಗೆ ಫೀಯನ್ನು ಕೊಡಬೇಕು. ಯಾರು 2-3 ಸಾರಿ ಗೈರು ಹಾಜರಾಗುತ್ತಾರೆ,

ಅಂತಹವರನ್ನು ಪ್ಯಾನಲ್‌ನಿಂದ ತೆಗೆದುಹಾಕಬೇಕು. ಇಲ್ಲದಿದ್ದರೆ ಸರ್ಕಾರಿ ವಕೀಲರುಗಳನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಅವರು ಎಷ್ಟರ ಮಟ್ಟಕ್ಕೆ ಹೋಗಿದ್ದಾರೆಂದರೆ, 100ಕ್ಕೆ 90 ಭಾಗ ಸರ್ಕಾರಿ ವಕೀಲರುಗಳು ಸರ್ಕಾರದ ಪರವಾಗಿ ವಾದವನ್ನು ಮಾಡುತ್ತಿಲ್ಲ. ಇದನ್ನು ನಾನು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಹೇಳುತ್ತಿದ್ದೇನೆ. ನೀವು ಯಾವುದನ್ನಾದರೂ ತೆಗೆದುಕೊಳ್ಳಿ, 100ಕ್ಕೆ 85 ರಷ್ಟು ಪ್ರಕರಣಗಳು ಸರ್ಕಾರದ ವಿರುದ್ಧವಾಗಿಯೇ ತೀರ್ಮಾನವಾಗುತ್ತಿದೆ, ಅದಕ್ಕೆ ಸರ್ಕಾರಿ ಅಧಿಕಾರಿಗಳಿರಬಹುದು, ಅಥವಾ ಸರ್ಕಾರಿ ವಕೀಲರುಗಳಿರಬಹುದು. ಇದನ್ನು ಕಂಟ್ರೋಲ್ ಮಾಡಬೇಕು. ನಮ್ಮ ಅಧಿಕಾರಿಗಳು ಯಾರು ಸರಿಯಾದಂತಹ ಮಾಹಿತಿಯನ್ನು ಒದಗಿಸುವುದಿಲ್ಲವೋ, ಅಂತಹವರ ಮೇಲೆ ತೀಕ್ಷ್ಣವಾದ ಕ್ರಮವನ್ನು ತೆಗೆದುಕೊಳ್ಳಬೇಕು, ಅದನ್ನು ತಿದ್ದುಪಡಿ ಆ್ಯಕ್ಟಿನಲ್ಲಿ ತರಬೇಕೆಂದು ನನ್ನ ಒಂದು ಅನಿಸಿಕೆಯಾಗಿದೆ. ಮಾನ್ಯ ವಾರ್ತಾ ಸಚಿವರಾದ ಶ್ರೀ ಬಿ.ಕೆ. ಚಂದ್ರಶೇಖರ್‌ರವರು ಸದನದಲ್ಲಿಲ್ಲ. ಅವರು ಮಾಹಿತಿಯ ಬಗ್ಗೆ ಒಂದು ಆ್ಯಕ್ಟ್‌ನ್ನು ತಂದರು, ಸರ್ಕಾರ ಯಾವುದೇ ಖಾತೆಯಲ್ಲಿ "ರೈಟ್ ಟು ಇನ್‌ಫರ್‌ಮೇಷನ್" ಬಹಳ ಸಂತೋಷ, ಅದನ್ನು ನಾನು ಸ್ವಾಗತಿಸುತ್ತೇನೆ. ಇದರ ಬಗ್ಗೆ ಸರ್ಕಾರವು ಚೆನ್ನಾಗಿ ಮಾಡಿದೆ ಎಂದು ಪ್ರಚಾರ ಚೆನ್ನಾಗಿ ಸಿಕ್ಕಿತು. ಆದರೆ ನಿಯಮಾವಳಿಗಳು ಇನ್ನೂ ರಚನೆಯಾಗಿಲ್ಲ. ಒಳ್ಳೆಯ ಕಾರ್ಯಕ್ರಮಗಳನ್ನು ತಂದು, ಅದನ್ನು ಜಾರಿಗೆ ತರದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಏಕೋ ಏನೋ ಮೀನಾ-ಮೇಷ ಎಣಿಸುತ್ತಿದ್ದಾರೆ. ಎಲ್ಲಾ ಕೆಲಸಗಳಾದ ಮೇಲೆ "ರೈಟ್ ಟು ಇನ್‌ಫರ್‌ಮೇಷನ್" ತರೋಣವೆಂದುಕೊಂಡಿದ್ದಾರೆಂದು ನನಗನ್ನಿಸುತ್ತದೆ. ಆದ್ದರಿಂದ ಇವತ್ತು ಬೇಗ ಅದಕ್ಕೆ ರೂಲ್ಸ್‌ನ್ನು ತರಬೇಕೆಂದು ನಾನು ಹೇಳುತ್ತೇನೆ, ಏಕೆಂದರೆ, ಇದು ಉತ್ತಮವಾದಂತಹ ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕರು, ಸರ್ಕಾರ ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಿದೆ, ಏನೇನು ಮಾಹಿತಿಯನ್ನು ಪಡೆಯತಕ್ಕಂತಹ ಹಕ್ಕು ಸಾರ್ವಜನಿಕರಿಗಿದೆ, ಆ ಹಕ್ಕನ್ನು ಒದಗಿಸಿಕೊಡುವಂಥದ್ದು ಇದು ಐತಿಹಾಸಿಕವಾದಂಥ ತೀರ್ಮಾನವಾಗಿದೆ; ಅದನ್ನು ಆದಷ್ಟು ಬೇಗ ಜಾರಿಗೆ ತರಬೇಕು. ಎಲ್‌ಓಸಿಯನ್ನು ಕೊಡತಕ್ಕಂಥದ್ದು ಅದು ಟ್ರಾನ್ಸ್‌ಪರೆನ್ಸಿ ಆ್ಯಕ್ಟ್‌ನಲ್ಲಿಯೇ ಸೇರಿದೆ, ಆದರೂ ಅದನ್ನು ಮಾಡಿಲ್ಲ. ಇನ್ನು ಮಾನ್ಯ ಮುಖ್ಯಮಂತ್ರಿಗಳ ಇಲಾಖೆಯಾದ ಸಾಮಾನ್ಯ ಆಡಳಿತ ಇಲಾಖೆಯ ಬಗ್ಗೆ ಹೇಳುವುದಾದರೆ, ಸಾಮಾನ್ಯ ಆಡಳಿತದಲ್ಲಿ ಮೊದಲು ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣವನ್ನು ಕೊಟ್ಟಿರುವಂಥದ್ದನ್ನು ನಾನು ನೋಡಿದೆ. ಅವರು ರಿಪ್ಲೈ ಕೊಟ್ಟಿರತಕ್ಕಂಥದ್ದನ್ನು ಸಹ ನೋಡಿದ್ದೇನೆ. ಅದರಲ್ಲಿ ಅವರು ಏನು ಹೇಳಿದ್ದಾರೆಂದರೆ, ಸರ್ಕಾರದ ಆಡಳಿತದಲ್ಲಿ ವಿಳಂಬ ತಪ್ಪಿಸಲು ಸರ್ವೀಸ್ ರೂಲ್ಸ್‌ಗೆ ನಾನು ತಿದ್ದುಪಡಿಯನ್ನು ತರುತ್ತೇನೆ. ಡಿಲೇ ಮಾಡುವುದನ್ನು ಯಾವ ರೀತಿಯಾಗಿ ತಪ್ಪಿಸಬೇಕು ಎನ್ನುವ ಬಗ್ಗೆ ತಿದ್ದುಪಡಿಯನ್ನು ತರುತ್ತೇನೆಂದು ಹೇಳಿದ್ದಾರೆ. 1978 ರಿಂದ ಯಾರೂ ಸಹ ಆಡಳಿತ ಸುಧಾರಣೆಯ ಬಗ್ಗೆ

ಯಾರೂ ಚಿಂತನೆಯನ್ನು ಮಾಡಿಲ್ಲ. ಅಡ್ಮಿನಿಸ್ಟ್ರೇಷನ್ಸ್ ರಿಫಾರ್ಮ್ಸ್ ಬಗ್ಗೆ ನಾನು ಅದನ್ನು ಮಾಡುತ್ತಿದ್ದೇನೆ. ಈ ವರ್ಗಾವಣೆ ನೀತಿಯನ್ನು ನಾವು ಮಾಡುತ್ತೇವೆ; ಇವೆಲ್ಲವೂ ಒಳ್ಳೆಯ ಘೋಷಣೆಗಳಾಗಿರುತ್ತವೆ. ನಾನು ಈ ಬಗ್ಗೆ ಬಹಳ ಸಂತೋಷವನ್ನು ಪಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ತಕ್ಷಣ ಅವರು ಒಳ್ಳೆಯ ಚಿಂತನೆಯನ್ನು ಮಾಡಿದ್ದಾರೆ, ಆಡಳಿತವನ್ನು ಒಳ್ಳೆಯ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತಾರೆಂದು ಸಂತೋಷವನ್ನು ಪಟ್ಟೆ. ಯಾರಾದರೂ ಬಂದು ಸಾರ್ವಜನಿಕರಿಗೆ ಒಳ್ಳೆಯದಾಗುತ್ತದೆಂಬ ಕಾರ್ಯಕ್ರಮವನ್ನು ಘೋಷಣೆಯನ್ನು ಮಾಡಿದಾಗ ಅದಕ್ಕೆ ಸಂತೋಷಪಡುವವರು ನಾವು. ನಾವು ವಿರೋಧಪಕ್ಷದಲ್ಲಿದ್ದರೂ ಸಹ ಸ್ವಾಗತವನ್ನು ಮಾಡುತ್ತೇವೆ. ಆದರೆ ಇವರು ಅಧಿಕಾರಕ್ಕೆ ಬಂದು ಎರಡು ವರ್ಷಗಳಾಯಿತು, ಟ್ರಾನ್ಸ್‌ಫರ್ ಪಾಲಿಸಿ ಇನ್ನೂ ಆಗಿಲ್ಲ, ಆಡಳಿತ ಸುಧಾರಣೆಯವರು ವರದಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಗೊತ್ತಿಲ್ಲ. ಈ ಡಿಲೇ ಆಗುವುದಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೇವೆ, ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಭ್ರಷ್ಟಾಚಾರದ ಬಗ್ಗೆ ಇವತ್ತು ಸಮರವನ್ನು ಸಾರುತ್ತೇನೆ, ಧರ್ಮಯುದ್ಧವನ್ನು ಸಾರುತ್ತೇನೆ, ಎಂದು ಹೇಳಿದರು. ಇದರ ಬಗ್ಗೆ ಅನೇಕ ನಿದರ್ಶನಗಳನ್ನು ಕೊಡಬಹುದು. ಈ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿಯೂ ಸಹ ಅನೇಕ ವಿಚಾರಗಳನ್ನು ಗಮನಕ್ಕೆ ತಂದಿದ್ದೇನೆ. ಒಂದರ ಬಗ್ಗೆಯೂ ಸಹ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಭ್ರಷ್ಟಾಚಾರದ ಪ್ರಕರಣಗಳಲ್ಲಿ ಟ್ರಾನ್ಸ್‌ಫರ್ ಪಾಲಿಸಿಯಲ್ಲಿಯೂ ಸಹ ಏನೇನೂ ಇಲ್ಲ. ಈ ರೀತಿ ವಿಳಂಬವಾಗುತ್ತಿರುವುದನ್ನು ತಪ್ಪಿಸುವ ಬಗ್ಗೆ ಹೇಳುವುದಾದರೆ, ಒಂದು ಸಣ್ಣ ಉದಾಹರಣೆಯನ್ನು ಮಾನ್ಯ ಗೃಹ ಸಚಿವರ ಇಲಾಖೆಯ ಬಗ್ಗೆ ಹೇಳುತ್ತೇನೆ. ಒಂದು ಸಣ್ಣ ಬದಲಾವಣೆಯನ್ನು ಮಾಡುವ ಬಗ್ಗೆ ಒಂದು ಅರ್ಜಿಯನ್ನು ತಮಗೆ ಕೊಟ್ಟು 2 ವರ್ಷಗಳಾಯಿತು. ಒಂದು ಪೊಲೀಸ್ ಸ್ಟೇಷನ್ ತಾಲ್ಲೂಕಿನಲ್ಲಿದೆ, ಅದರ ಸರ್ಕಲ್‌ನ್ನು ಇನೊಂದು ತಾಲ್ಲೂಕಿಗೆ ವರ್ಗಾವಣೆಯನ್ನು ಮಾಡಿದ್ದಾರೆ. ನಮ್ಮ ಸರ್ಕಾರದಲ್ಲಿ ಆಗಿರಬಹುದು, ನಮ್ಮ ಸರ್ಕಾರದವರು ತಪ್ಪನ್ನು ಮಾಡಿದ್ದರೆ ನೀವು ಸರಿ ಮಾಡಬಾರದೇ? ಕೆಲವು ಮೋಸ ಮಾಡುವ ಅಧಿಕಾರಿಗಳಿರುತ್ತಾರೆ, ಅವರಿಗೆ ಕೆಡಕು ಮಾಡುವಂತಹ ಬುದ್ಧಿಯಿರುತ್ತದೆ, ಅಂತಹ ಯಾವುದೇ ಅಧಿಕಾರಿ ಗುಟ್ಟಾಗಿ ಒಂದು ಪ್ರಪೋಸಲ್ ಅನ್ನು ಕಳುಹಿಸಿಕೊಟ್ಟಿದ್ದನ್ನು ಬದಲಾವಣೆ ಮಾಡಿಸಿದ್ದಾನೆ. ಆದರಿಂದಾಗಿ ತಾಲ್ಲೂಕು ಒಂದು ಕಡೆ ಇದೆ, ಸರ್ಕಲ್ ಒಂದು ತಾಲ್ಲೂಕಿನಲ್ಲಿ ಇದೆ. ಹೀಗಾಗಿ ತಾಲ್ಲೂಕು ಆಫೀಸಿಗೆ ಒಂದು ಕಡೆಗೆ ಹೋಗಬೇಕು, ಇದರ ಬಗ್ಗೆ ವರದಿಯನ್ನು ತರಿಸಿ ಎಂದು ಹೇಳಿ ಎರಡು ವರ್ಷಗಳಾಯಿತು. 10-15 ಸಾರಿ ಜಿಲ್ಲಾ ಕಛೇರಿಗೂ ಮತ್ತು ಕೇಂದ್ರ ಕಛೇರಿಗೂ ಬಂತು. ಕೊನೆಯಪಕ್ಷ ಆ ವರದಿ ಬಂದು 5-6 ತಿಂಗಳಾಯಿತು, ವರದಿಯನ್ನು ಇಲ್ಲಿಗೆ ಕಳುಹಿಸಿಕೊಡಬೇಕಾದರೆ, ಇನ್ನು ಐದು ತಿಂಗಳಾದರೂ ಕಳುಹಿಸಿಕೊಟ್ಟಿಲ್ಲ. ಅವರು ವರದಿಯನ್ನು ಕೊಟ್ಟು ಶಿಫಾರಸ್ಸನ್ನು ಮಾಡಿದ್ದರೂ ಸಹ,

ಇಲ್ಲಿ ತಪ್ಪಾಗಿದೆ ತಿದ್ದುಕೊಳ್ಳಬೇಕೆಂದು ಹೇಳಿದ್ದರೂ ಸಹ ಅದು ಇನ್ನೂ ಐದು ತಿಂಗಳಾದರೂ ಸಹ ಆಗಿರುವುದಿಲ್ಲ. ನಾವು ಮಂತ್ರಿಗಳು ನಾವೇ ಕೆಲಸವನ್ನು ಮಾಡಬೇಕಾಗಿಲ್ಲ. Our image should work. We should not work. Our image should work. ಆ ತರಹ ಇಮೇಜನ್ನೇ ನೀವು ಸೃಷ್ಟಿ ಮಾಡಿಲ್ಲ. ಈ ಒಂದು ತಪ್ಪು ಮಂತ್ರಿಗಳ ಗಮನಕ್ಕೆ ಹೋದರೆ, ಸರ್ಕಾರದ ಗಮನಕ್ಕೆ ಹೋದರೆ ಈ ವಿಳಂಬ ಗೊತ್ತಾದರೆ ನನ್ನ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೋ ಎಂಬ ಬಗ್ಗೆ ಅಧಿಕಾರಿಗಳಿಗೆ ಭಯವೇ ಇಲ್ಲ. ಹೀಗೆಲ್ಲಾ ಇದು ಹುಟ್ಟಬೇಕಾದರೆ, ಈ ಟ್ರಾನ್ಸಫರ್ ಪಾಲಿಸಿಯೊಳಗಡಡೆ ಇವೆಲ್ಲಾ ನ್ಯೂನತ್ಯಗಳಿವೆ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಕೆಎಎಸ್‌ನಿಂದ ಐಎಎಸ್ ಮತ್ತ ಐಪಿಎಸ್‌ಗಳನ್ನು ಕೊಡಬೇಕಾದರೆ ಶೇಕಡ 10ರಷ್ಟು ಇರುವುದನ್ನು ಶೇಕಡ 50 ರಷ್ಟು ಮಾಡುತ್ತೇನೆಂದು ಘೋಷಣೆಯನ್ನು ಮಾಡಿದರು. ಅದನ್ನು 50 ಪರ್ಸೆಂಟ್ ಮಾಡಿದರೆ ಆಡಳಿತದಲ್ಲಿ ಅದು ಇನ್ನೂ ಅಧೋಗತಿಗೆ ಹೋಗುತ್ತದೆಂಬ ನನ್ನ ವೈಯಕ್ತಿಕವಾದ ಅಭಿಪ್ರಾಯವಾಗಿದೆ. ಐಎಎಸ್ ಮಾಡಿದಂತಹ ಉದ್ದೇಶವೇನೆಂದರೆ, ದೊಡ್ಡ ದೊಡ್ಡ ಹುದ್ದೆಗಳಲ್ಲಿರುವಂತಹ ಅಧಿಕಾರಿಗಳು ಅವರಿಗೆ ರಾಷ್ಟ್ರವ್ಯಾಪಿ ಚಿಂತನೆ ಇರಬೇಕು, ನ್ಯಾಷನಲ್ ಔಟ್‌ಲುಕ್ ಇರಬೇಕು, ರೀಜನಲ್ ಕಮ್ಯೂನಲ್ ಔಟ್‌ಲುಕ್ ಇರಬಾರದು, ಇದು ನಮ್ಮ ದೇಶದ ಸಾರ್ವಜನಿಕ ಕೆಲಸವೆನ್ನುವ ಭಾವನೆಯಿರಬೇಕೆಂದು ಅದನ್ನು ಮಾಡಿದರು. ಆದರಲ್ಲಿ ಒಂದು ಸಣ್ಣ ಪ್ರಾವಿಷನ್‌ನ್ನು ಇಟ್ಟುಕೊಂಡು 10 ಪರ್ಸೆಂಟ್ ರಾಜ್ಯದವರು ಬಂದು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಾಗಿರಬಹುದು ಎಂದು ಮಾಡಿಕೊಂಡರು, ಕನ್ನಡಿಗರಾಗಬೇಕು, ಅವರಿಗೆ ಸ್ಥಳೀಯ ಸಮಸ್ಯೆಗಳು ಗೊತ್ತಿರುತ್ತದೆ, ಅವರಿಗೆ ಕಳಕಳಿಯಿರುತ್ತದೆ, ನಮ್ಮ ರಾಜ್ಯವನ್ನು ಅಭಿವೃದ್ಧಿ ಮಾಡುತ್ತಾರೆ ಈ ವಾದವೆಲ್ಲವೂ ಸರಿಯಾಗಿರುತ್ತದೆ. ಆದರೆ ಎಲ್ಲಾ ಜಾತಿಯಲ್ಲಿ ಬೇರೆ ರೀತಿಯಾಗಿ ರಾಜಕೀಯವನ್ನು ಮಾಡುತ್ತಾರಲ್ಲಾ, ಅದು ರಾಜಕೀಯವಿರಬಹುದು, ಅಥವಾ ಜಾತಿಯ ಆಧಾರದ ಮೇಲೆ ಆಡಳಿತವಿರಬಹುದು. ಇದು ಬಹಳ ಅಧೋಗತಿಗೆ ಹೋಗಿದೆ. ಇದನ್ನು ಮಾಡಿದರೆ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುತ್ತದೆ. ಇವತ್ತು ನೀವು ಮುಖ್ಯಮಂತ್ರಿಗಳಾಗಿದ್ದರೆ ನಿಮ್ಮ ಜಾತಿಯವರೇ ದೊಡ್ಡ ದೊಡ್ಡ ಅಧಿಕಾರಿಗಳು ಇರುತ್ತಾರೆ. ಇನ್ನೊಂದು ಜಾತಿಯವರು ಮುಖ್ಯಮಂತ್ರಿಗಳಾದರೆ ಅವರವರ ಜಾತಿಗಳವರೇ ಕೀ ಪೋಸ್ಟ್‌ಗಳಲ್ಲಿ ಇರುತ್ತಾರೆ. ಬೇರೆಯವರೆಲ್ಲರೂ ಹತಾಷರಾಗಿರುತ್ತಾರೆ.

5.10 ಪಿಎಂ

ಒಬ್ಬೊಬ್ಬ ಅಧಿಕಾರಿಗಳನ್ನು ಮಂತ್ರಿಗಳು ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ; ಈ ಪರಿಸ್ಥಿತಿ ಬಂದಿದೆ. ನಾನು ಯಾವ ಸರ್ಕಾರವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಸಾಮಾಜಿಕ ವ್ಯವಸ್ತೆ ಏನಾಗಿದೆ ಎಂದು ಹೇಳುವುದಾದರೆ, ಅಧಿಕಾರಿಗಳು ಒಬ್ಬ

ಮಂತ್ರಿಗಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳುವುದಿಲ್ಲ. ಅಂತಹ ಅಧಿಕಾರಿಗಳು ಸ್ಥಳೀಯರಾಗಿರುತ್ತಾರೆ, ನಾವು ಬೇರೆ ರಾಜ್ಯದಿಂದ ಬಂದಿರುವಂತಹ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬಹುದು. ಅವರಿಗೆ ಯಾವುದೇ ಸ್ಥಳೀಯ ಹಿತಾಸಕ್ತಿಗಳಿರುವುದಿಲ್ಲ. ಅವರ ಸಂಬಂಧಿಕರು, ಜಾತಿಯವರು ಇರುವುದಿಲ್ಲ, ಅವರು ಚುನಾವಣೆಯಲ್ಲಿ ನಮ್ಮನ್ನು ಜನಗಳನ್ನು ಎತ್ತಿಕಟ್ಟಿ ಸೋಲಿಸುತ್ತಾರೆಂಬ ಭಯವಿರುವುದಿಲ್ಲ. ನಿನ್ನನ್ನು ಡಿಸ್‌ಮಿಸ್ ಮಾಡುತ್ತೇನೆಂದು ಹೆದರಿಕೊಂಡು ಯು.ಪಿ.ಗೆ, ಬಿಹಾರಕ್ಕೆ ಕಳುಹಿಸಿಕೊಡುತ್ತೇನೆಂದು ಹೇಳಬಹುದು. ಅದನ್ನು ನೀವು ಕಂಟ್ರೋಲ್ ಮಾಡಬಹುದು, ಆದರೆ ನೀವು ಇವರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆಯೇ? ಇವತ್ತು ಗೃಹ ಇಲಾಖೆಯಲ್ಲಿ ಏನಾದರೂ ವೈಫಲ್ಯವೆಂದು ನಾವು ಏನು ಹೇಳುತ್ತೇವೆ, ಆ ರೀತಿಯಾಗಿದ್ದರೆ ವರ್ಗಾವಣೆಯಲ್ಲಿ ಅದು ಪೋಸ್ಟಿಂಗ್ಸ್‌ನಲ್ಲಿ ಆಗಿರತಕ್ಕಂತಹ ಪಟ್ಟಭದ್ರ ಹಿತಾಸಕ್ತಿಯಿಂದ ಆಗಿದೆ. ಅಥವಾ ರಾಜಕೀಯ ಪೋಸ್ಟಿಂಗ್ಸ್ ಎಲ್ಲಾ ಇಲಾಖೆಗಳಲ್ಲಿ ಜಾತಿ ಆಧಾರದ ಪೋಸ್ಟಿಂಗ್ಸ್‌ಗಳು ಇರಬಹುದು, ನಿಮ್ಮ ಮಾತುಗಳನ್ನು ಕೆಲವರು ಕೇಳುವುದೇ ಇಲ್ಲ, ಅವರಿಗೆ ನಿಮ್ಮ ಬಗ್ಗೆ ಭಯವೇಕೆ ಬರುತ್ತದೆ, ಇದಕ್ಕೆಲ್ಲಾ ರೋಗ ಬರಬೇಕಾದರೆ ಅದನ್ನು ಮಾಡುವುದಕ್ಕೆ ಹೋಗಬೇಡಿ. ಅವರು ನನ್ನ ಬಗ್ಗೆ ಏನೇ ತಿಳಿದುಕೊಂಡರೂ ಚಿಂತೆಯಿಲ್ಲ. ಈ ದೊಡ್ಡ ದೊಡ್ಡ ಹುದ್ದೆಗಳಲ್ಲಿರತಕ್ಕಂಥವರಿಗೆ ವಿಶಾಲವಾದಂತಹ ದೃಷ್ಟಿ ಬರಬೇಕಾದರೆ ಅವರು ಈ ರಾಜ್ಯದವರೇ ಆಗಲಿ, ಇಲ್ಲದಿದ್ದರೆ ಐಎಎಸ್‌ನ್ನು ಕೊಟ್ಟು ಬೇರೆ ರಾಜ್ಯಗಳಿಗೆ ಕಳುಹಿಸಿಕೊಡಿ ಚಿಂತೆಯಿಲ್ಲ; ಇದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಟ್ರಾನ್ಸ್‌ಫರ್ ಪಾಲಿಸಿಯೊಳಗಡೆ ನನಗನ್ನಿಸುವುದೇನೆಂದರೆ, ಆಡಳಿತದಲ್ಲಿ ಹಸ್ತಕ್ಷೇಪ ಇರಬಾರದು, We have to be here only to make policies. We have to frame rules. We have to frame policies and give it to the officers to implement. What has happened here? We have taken the transfers and we have given policy to the Officers. They do not know how to make policy and we do not know how to make transfer. ಇದು ಈ ಪರಿಸ್ಥಿತಿಗೆ ಬಂದಿದೆ. ಇದು ನೈಜಸತ್ಯವಾಗಿರುವುದನ್ನು ಹೇಳುತ್ತಿದ್ದೇನೆ. ಒಬ್ಬ ಗ್ರಾಮ ಲೆಕ್ಕಾಧಿಕಾರಿಯವರನ್ನು ಜಿಲ್ಲಾಧಿಕಾರಿಯವರು ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ. ಒಬ್ಬ ಫಾರೆಸ್ಟ್ ಗಾರ್ಡ್‌ನ್ನು ಚೀಫ್ ಕನ್ಸರ್‌ವೇಟರ್ ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ. ನಾವು ಒಬ್ಬ ಮಂತ್ರಿಗಳು ಐ.ಬಿ.ಗೆ ಹೋದರೆ, ಪ್ರವಾಸಿ ಮಂದಿರದಲ್ಲಿರುವಂತಹ ಮೇಟಿ ನಾನು ಹೋದಾಗಲೇ ಒಂದು ತರಹ ಟ್ರೀಟ್‌ಮೆಂಟ್, ಮಾನ್ಯ ಸಚಿವರಾದ ದೇಶಪಾಂಡೆಯವರು ಹೋದಾಗಲೇ ಒಂದು ಟ್ರೀಟ್‌ಮೆಂಟ್, ಮಾನ್ಯ ಗೃಹ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೋದಾಗ ಒಂದು ತರಹ ಟ್ರೀಟ್‌ಮೆಂಟ್ ಮಾಡುತ್ತಾನೆ. ಇಂತಹ ಮನೋಭಾವವಿರತಕ್ಕಂತಹ ಸಮಾಜದಲ್ಲಿ, ಯಾವ ರೀತಿಯಾಗಿ ಮಾಡುತ್ತೀರಿ, ನಾನು ಅವರನ್ನು ವರ್ಗ ಮಾಡಿದರೆ,

ನಾನು ನನ್ನ ಜಾತಿಯವರನ್ನು ಹಿಡಿದುಕೊಂಡು ನಾನು ವರ್ಗಾವಣೆಯನ್ನು ಕ್ಯಾನ್ಸಲ್ ಮಾಡಿಕೊಂಡು ಬರುತ್ತೇನೆ ಎಂಬ ಧೈರ್ಯ ಅವರಿಗಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು, ಟ್ರಾನ್ಸ್‌ಫರ್ ಪಾಲಿಸಿಯನ್ನು ಮಾಡುತ್ತೇವೆಂದು ಹೇಳಿದ ತಕ್ಷಣ ನನಗೆ ಬಹಳ ಸಂತೋಷವಾಯಿತು. ಈ ಟ್ರಾನ್ಸ್‌ಫರ್‌ನ್ನು ನಾವು ಮುಖ್ಯವಾಗಿ ಇಟ್ಟುಕೊಳ್ಳಲೇ ಬಾರದು, ನಮಗೆ ಏನು ಇರಬೇಕೆಂದು ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಬೇಕು. We must make them accountable. We must give them target. They must give us achievement. We should give them policy. ಅವರು ಮಾಡಲಿಲ್ಲವೆಂದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ನಾವು ಪಾಲಿಸಿಯನ್ನು ಮಾಡುವುದು, ಅವನನ್ನು ಪೋಸ್ಟಿಂಗ್ಸ್‌ನ್ನು ಮಾಡಿ, ಅವನು ನಮ್ಮ ಮಾತನ್ನೇ ಕೇಳುವುದಿಲ್ಲ, ಅವನು ಇನ್ನೊಬ್ಬರ ಮಾತನ್ನು ಕೇಳುತ್ತಾನೆ. ಯಾವುದೇ ಸರ್ಕಾರದ ಕಾರ್ಯಕ್ರಮಗಳು ಇವತ್ತು ಅನುಷ್ಠಾನಕ್ಕೆ ಆಗುತ್ತಿಲ್ಲ. ಅದರಿಂದ ನಾನು ಮೊದಲಿನ ಸಭೆಯಲ್ಲಿ ಹೇಳಿದ್ದೇನೆ, ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್ ಎಂದು ಮಾಡಿ ಒಂದು ವರ್ಗಾವಾರು ನಾರ್ಮ್ಸ್‌ನ್ನು ಹಾಕಿ, ಯಾವ ಅಧಿಕಾರಿ ಯಾವ ತಾಲ್ಲೂಕಿನಲ್ಲಿಬೇಕು, ಅವನ ಹುಟ್ಟಿದ ಊರು ಯಾವುದು? ಅವನ ಯಾವ ಹಂತದಲ್ಲಿ ಯಾವ ಅಧಿಕಾರಿ ಇರಬೇಕು. ಸ್ಥಳೀಯ ತಾಲ್ಲೂಕಿನಲ್ಲಿ ಯಾರಿರಬೇಕು, ಜಿಲ್ಲಾ ಮಟ್ಟದಲ್ಲಿ ಯಾರು ಇರಬೇಕು, ರೀಜನ್ ಬಿಟ್ಟು ರೀಜನ್ ಯಾರಿರಬೇಕು, ಎಲ್ಲಾ ವಿಚಾರಗಳ ಬಗ್ಗೆ ನಾರ್ಮ್ಸ್‌ನ್ನು ಹಾಕಿ ಎಷ್ಟು ವರ್ಷ ಅವನು ಎಲ್ಲಿ ಕೆಲಸ ಮಾಡಬೇಕು, ಎಕ್ಸಿಕ್ಯೂಟೀವ್‌ನಲ್ಲಿ ಎಷ್ಟು ವರ್ಷ ಕೆಲಸ ಮಾಡಬೇಕು, ನಾನ್ ಎಕ್ಸಿಕ್ಯೂಟೀವ್‌ನಲ್ಲಿ ಎಷ್ಟು ವರ್ಷ ಕೆಲಸ ಮಾಡಬೇಕು ಈ ರೀತಿಯಾಗಿ ಒಂದು ನಾರ್ಮ್ಸ್‌ನ್ನು ಮಾಡಿ ಅದನ್ನು ಅಧಿಕಾರಿಗಳಿಗೆ ಕೊಟ್ಟು ಅವರು ಆ ಪ್ರಕಾರ ಕೆಲಸವನ್ನು ಮಾಡಲಿಲ್ಲವೆಂದರೆ, ನೀವು ಅವರ ಮೇಲೆ ಕಾರ್ಯದರ್ಶಿಯವರಿಗೆ ತಿಳಿಸಿ ಕ್ರಮವನ್ನು ತೆಗೆದುಕೊಳ್ಳಬೇಕು. ಕಾರ್ಯದರ್ಶಿಯವರ ಜುಟ್ಟು ನಿಮ್ಮ ಕೈಯಲ್ಲಿ ಇರಬೇಕು, ನೀವು ವಿಲೇಜ್ ಅಕೌಂಟೆಂಟ್ ಜುಟ್ಟನ್ನು ಹಾಗೂ ಸೆಕ್ರೆಟರಿಯವರ ಜುಟ್ಟನ್ನು ಇಟ್ಟುಕೊಳ್ಳುತ್ತೀರಿ, ಅದು ಹೇಗೆ ಆಗುತ್ತದೆ? ಅದನ್ನಾದರೂ ಮಾಡಬೇಕೆಂದು ನನ್ನ ಆಸೆಯಾಗಿದೆ. ನಾವೇನೇ ಕಾನೂನುಗಳನ್ನು ತಂದರೂ ಏನೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಅನುಷ್ಠಾನಕ್ಕೆ ತರುವಂತಹವರು ಅಧಿಕಾರಿಗಳಾಗಿದ್ದಾರೆ. ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರಬೇಕಾದರೂ ಅಧಿಕಾರಿಗಳೇ, ಕೆಟ್ಟ ಹೆಸರನ್ನು ತರಬೇಕಾದರೂ ಅಧಿಕಾರಿಗಳೇ. ಅದಕ್ಕಾಗಿ ಅಧಿಕಾರಿಗಳನ್ನು ನೀವು ಒಂದು ಹಿಡಿತದಲ್ಲಿಟ್ಟುಕೊಳ್ಳದೆ ಹೋದರೆ ನಮ್ಮ ಸರ್ಕಾರವೇ ಇರಬಹುದು, ನಿಮ್ಮ ಸರ್ಕಾರವೇ ಇರಬಹುದು, ಆ ಸರ್ಕಾರಗಳು ವಿಫಲವಾಗುತ್ತವೆ. ಆ ದೃಷ್ಟಿಯಿಂದ ನಾನು ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನೀವಾದರೂ ಈ ಬಗ್ಗೆ ಗಮನವನ್ನು ಹರಿಸಿ ಒಂದು ಟ್ರಾನ್ಸ್‌ಫರ್ ಪಾಲಿಸಿಯನ್ನು ಬೇಗನೆ ತನ್ನಿ, ಈ ವರ್ಗಾವರ್ಗಿಯನ್ನು ನಮ್ಮ ಎಂಎಲ್‌ಎಗಳಿಗೇ

ಕೊಡಬಾರದು, ಒಬ್ಬ ಎಂಎಲ್ಎ ಅವನ ವಿರುಧವಾಗಿ ಅಧಿಕಾರಿಯನ್ನು ವರ್ಗಾವಣೆ ಮಾಡಿಸುತ್ತಾನೆ, ಮತ್ತೆ ಅವನಿಗೆ ಕಿರುಕುಳವನ್ನು ಕೊಡಿಸುತ್ತಾನೆ. ನಾವು ಅಧಿಕಾರಿಗಳನ್ನು ನಮಗೆ ಬೇಕಾದವರನ್ನು ಏತಕ್ಕಾಗಿ ಹಾಕಿಸಿಕೊಳ್ಳುತ್ತೇವೆಂದರೆ ನನಗೆ ಬೇಕಾದ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೋಸ್ಕರ. ಸಾರ್ವಜನಿಕರಿಗೆ ಬೇಕಾದ ಕೆಲಸವನ್ನು ಯಾರು ಬೇಕಾದರೂ ಮಾಡುತ್ತಾರೆ, ಇದನ್ನು ನಾನು ಹೇಳಬೇಕಾಗಿಲ್ಲ. ಸಾರ್ವಜನಿಕವಾಗಿ ಕೆಲಸಮಾಡಲು ಯಾವ ಅಧಿಕಾರಿ ಬೇಕಾದರೂ ಮಾಡುತ್ತಾನೆ. ಆದರೆ ನನಗೆ ಬೇಕಾಗಿದ್ದನ್ನು ಸಾರ್ವಜನಿಕರಿಗೆ ವಿರುದ್ಧವಾಗಿದ್ದರೂ ಸಹ ಅದನ್ನು ಮಾಡಿಸಿಕೊಳ್ಳುವುದಕ್ಕೋಸ್ಕರ ನನಗೆ ಬೇಕಾದವರನ್ನು ಹಾಕಿಸಿಕೊಳ್ಳುತ್ತೇನೆ. ಇದರ ಬಗ್ಗೆ ಯಾರಾದರೂ ಚಿಂತನೆಯನ್ನು ಮಾಡಿ ಇದನ್ನು ತೀಕ್ಷ್ಣವಾಗಿ ಪರಿಶೀಲನೆ ಮಾಡಿ ಟ್ರಾನ್ಸಫರ್ ಪಾಲಿಸಿಯನ್ನು ಬೇಗನೆ ತರಬೇಕೆಂದು ನನ್ನ ಅನಿಸಿಕೆಯಾಗಿದೆ. ಇನ್ನು ಅನೇಕ ವಿಚಾರಗಳ ಬಗ್ಗೆ ಮಾತನಾಡಬೇಕಾಗಿತ್ತು ತಾವು ಸಮಯವನ್ನು ಕೊಡುತ್ತಿಲ್ಲ, ಆದರೂ ಈ ಹೈದರಾಬಾದ್-ಕರ್ನಾಟಕದ ಬಗ್ಗೆ...

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಸೋಮಶೇಖರ್‌ರವರು ಒಂದು ಮಾತನ್ನು ಹೇಳಿದರು, ಯಾರೋ ಒಬ್ಬ ಅಧಿಕಾರಿಗಳನ್ನು ನಾವು ಏತಕ್ಕಾಗಿ ಹಾಕಿಸಿಕೊಳ್ಳುತ್ತೇವೆಂದರೆ ನಮಗೆ ಬೇಕಾದಂತಹ ಕೆಲಸವನ್ನು ಅವರು ಮಾಡಿಕೊಡಲಿ ಎಂದು ಹೇಳಿದ್ದಾರೆ. It cannot be genaralised. ಯಾರೋ ಒಬ್ಬ ಅಧಿಕಾರಿ ನಮಗೆ ಗೊತ್ತಿದ್ದಾನೆ, ಅವನ ನೇಚರ್ ಎಲ್ಲಾ ನಮಗೆ ಗೊತ್ತಿದೆ, ಅವನನ್ನು ತಂದು ನಮ್ಮ ಏರಿಯಾಕ್ಕೆ ಹಾಕಬೇಕಾದಾಗ ನಾವು ಅದನ್ನು ವಿರೋಧಿಸುತ್ತೇವೆ. ಅವನು ನಮ್ಮ ಏರಿಯಾಕ್ಕೆ ಬಂದರೆ ನಮ್ಮ ಹೆಸರು ಹಾಳಾಗುತ್ತದೆ, ನಮ್ಮ ಕ್ಷೇತ್ರದಲ್ಲಿ ಕೆಲಸಗಳಾಗುವುದಿಲ್ಲ, ನಮ್ಮ ಕ್ಷೇತ್ರದ ಜನ ತೊಂದರೆಗೊಳಗಾಗುತ್ತಾರೆ ಎಂದು ನಾವು ಇದನ್ನು ವಿರೋಧಿಸಬಾರದೇ?

ಶ್ರೀ ಬಿ. ಸೋಮಶೇಖರ್:— ಯಾವ ಅಧಿಕಾರಿಯನ್ನು ಯಾವ ಸ್ಥಳಕ್ಕೆ ಹಾಕಬೇಕೆಂದು ಒಂದು ನಾರ್ಮ್ಸ್ ಇದ್ದಾಗ ಕಂಪ್ಲೈಂಟ್ಸ್ ಯಾರಿಗೆ ಇದೆ, ಯಾರ ಮೇಲೆ ಎನ್‌ಕ್ವಯರಿ ಆಗಿದೆ, ಯಾರ ಮೇಲೆ ಚಾರ್ಜ್‌ಶೀಟಾಗಿದೆ, ಅಂತಹವನನ್ನು ತಂದು ಹಾಕಿದರೆ ಹಾಕಬಾರದು ಎಂದು ಪಾಲಿಸಿಯನ್ನು ಮಾಡಿದಾಗ ಅವನನ್ನು ಹಾಕುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ,, ಅದಕ್ಕಾಗಿ ನಾರ್ಮ್ಸ್‌ನ್ನು ಹಾಕಿಕೊಡಬೇಕು. ಕೆಲವು ಎಕ್ಸಿಕ್ಯೂಟೀವ್ ಪೋಸ್ಟ್‌ನಲ್ಲಿ 20 ವರ್ಷಗಳಿಂದಲೂ ಇರುತ್ತಾರೆ. Honest officers are the most sufferers. Honesty has become a casualtuy to-day. ಇವತ್ತು ಯಾರ ಮೇಲೆ ಭ್ರಷ್ಟಾಚಾರದ ಆರೋಪಗಳಿವೆ, ಅವರೆಲ್ಲರೂ ದೊಡ್ಡ ದೊಡ್ಡ ಕೀ ಪೋಸ್ಟ್‌ಗಳಲ್ಲಿದ್ದಾರೆ. ಇದರ ಬಗ್ಗೆ ನಾನು ಬೇಕಾದಷ್ಟು ಹೆಸರುಗಳನ್ನು ಕೊಡಬಹುದು, ಯಾರ್‍ಯಾರಿಗೆ ಜಾತಿಗಳ ಬೆಂಬಲವಿದೆ, ಯಾರ್‍ಯಾರಿಗೆ ಭ್ರಷ್ಟಾಚಾರವಿದೆ, ಅವರೆಲ್ಲರೂ ಇವತ್ತು ಕೀ ಪೋಸ್ಟ್‌ಗಳಲ್ಲಿದ್ದಾರೆ. ಅವರೆಲ್ಲರೂ ನಿಮ್ಮ ಮಾತನ್ನು ಕೇಳುತ್ತಾರೆಯೇ? ಯಾರೂ ನಿಮ್ಮ ಮಾತನ್ನು ಕೇಳುವುದಿಲ್ಲ, ಅದಕ್ಕೋಸ್ಕರ ಒಂದು ನಾರ್ಮ್ಸ್‌ನ್ನು ಹಾಕಿಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಪ್ರಮೋಷನ್‌ಗೆ ಇದನ್ನು ಪ್ರೀ ಕಂಡಿಷನ್ ಮಾಡಿ ಪೊಲೀಸ್ ಇಲಾಖೆ, ಅರಣ್ಯ ಇಲಾಖೆಯಿರಬಹುದು, ಎಲ್ಲಾ ವಿಂಗ್‌ಗಳಲ್ಲಿ ಅವರು ವರ್ಕ್ ಮಾಡದೆ ಇದ್ದರೆ ಅವರನ್ನು ಪ್ರಮೋಷನ್‌ಗೆ ಎಲಿಜಿಬಲ್ ಇಲ್ಲವೆಂದು ಮಾಡಿದರೆ ಕ್ರಮೇಣ ಇದನ್ನು ಜಾರಿಗೆ ತರುವುದಕ್ಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ :— ನೀವು ಒಂದು ಪ್ರಮೋಷನ್‌ನಿಂದ ಮತ್ತೊಂದು ಪ್ರಮೋಷನ್‌ಗೆ ಹೋಗಬೇಕಾದರೆ, ಅವನು ಅಗತ್ಯವಾದ ವಿಂಗ್‌ಗಳಲ್ಲಿ ಸೇವೆಯನ್ನು ಮಾಡಿರಬೇಕು. ಅವನು ಎಕ್ಸಿಕ್ಯೂಟೀವ್ ಹಾಗೂ ನಾನ್-ಎಕ್ಸಿಕ್ಯೂಟೀವ್‌ಗಳಲ್ಲೂ ಸಹ ಕೆಲಸವನ್ನು ಮಾಡಿರಬೇಕು. ಇದರ ಬಗ್ಗೆ ಉದಾಹರಣೆಯನ್ನು ಸಹ ಹೇಳುತ್ತೇನೆ. ಪೊಲೀಸ್ ಸಬ್-ಇನ್ಸ್‌ಪೆಕ್ಟರಾಗಿ ಕೆಲಸಕ್ಕೆ ಸೇರಿದವನು ಸರ್ಕಲ್ ಇನ್ಸ್‌ಪೆಕ್ಟರಾಗಿ 10 ವರ್ಷದಲ್ಲಿ ಬಡ್ತಿಯನ್ನು ಹೊಂದಬೇಕಾದರೆ ಸಿಓಡಿಯಲ್ಲಿ ಮೂರು ವರ್ಷಗಳಿರಬೇಕು, ಗುಪ್ತದಳದಲ್ಲಿ ಎರಡು ವರ್ಷಗಳಿರಬೇಕು ಎಂದು ಮಾಡಿದರೆ ನನಗೆ ಪ್ರಮೋಷನ್ ಸಿಗುವುದಿಲ್ಲವೆಂದು ಹೇಳಿ ತಾನೇ ವರ್ಗಾವಣೆಯನ್ನು ಮಾಡಿಸಿಕೊಂಡು ಹೋಗುತ್ತಾನೆ. In the absence of these rules, an Inspector who has got influence will continue to be an Inspector for 20 years. ಯಾರಿಗೆ ಇನ್‌ಪ್ಲ್ಯೂಯೆನ್ಸ್ ಇರುವುದಿಲ್ಲ ಅವನನ್ನು ಸಿಒಡಿಗೆ ತಂದು ಹಾಕುತ್ತಾರೆ, ಎಲ್ಲಾ ಇಲಾಖೆಗಳಲ್ಲೂ ಇದಾಗಿದೆ, ಅದಕ್ಕಾಗಿ ಒಂದು ನಾರ್ಮ್ಸ್‌ನ್ನು ಹಾಕಿಕೊಟ್ಟರೆ, ಅಂತಹವನಿಗೆ ಆ ನಾರ್ಮ್ಸ್ ಪ್ರಕಾರ ಪ್ರಮೋಷನ್ ಸಿಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಸೋಮಶೇಖರ್‌ರವರೇ, ಡಿಪಿಎಆರ್‌ನವರು ಇದನ್ನು ಮಾಡುತ್ತಿಲ್ಲವೇ? ಆ ಇಲಾಖೆ ಇರುವುದೇ ಈ ಕೆಲಸವನ್ನು ಮಾಡುವುದಕ್ಕಾಗಿ, ಎತಕ್ಕಾಗಿ ಅವರು ಮಾಡುತ್ತಿಲ್ಲ?

ಶ್ರೀ ಬಿ. ಸೋಮಶೇಖರ್ :— ಡಿಪಿಎಆರ್‌ನವರು ಏನು ಕೆಲಸವನ್ನು ಮಾಡುತ್ತಾರೆ? ಅದಕ್ಕಾಗಿ ರಾಜಕೀಯ ಇಚ್ಛಾಶಕ್ತಿ ಬೇಕು, ಮತ್ತು ವಿಶಾಲವಾದ ದೃಷ್ಟಿಯಿರಬೇಕು. ಸಾರ್ವಜನಿಕ ಕೆಲಸ ಮಾಡಬೇಕೆಂಬ ವಿಶಾಲವಾದ ದೃಷ್ಟಿಯಿರಬೇಕು. ಇನ್ನು ಉತ್ತರ ಕರ್ನಾಟಕದ ಬಗ್ಗೆ ಹೇಳುವುದಾದರೆ, ಎಲ್ಲಾ ಉತ್ತರ ಭಾಗದಲ್ಲಿ ಸಮಾನವಾಗಿ ಅಭಿವೃದ್ಧಿಯಾಗಬೇಕಾದರೆ,...

ಶ್ರೀ ಬಿ.ಆರ್. ಯಾವಗಲ್ :— ಮಾನ್ಯ ಸೋಮಶೇಖರ್‌ರವರೇ, ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ತಾವು ಹಿಂದೆ ಮಂತ್ರಿಗಳಾಗಿದ್ದೀರಿ, ಆಗ ಇದನ್ನು ತರಬಹುದಾಗಿತ್ತಲ್ಲಾ?

ಶ್ರೀ ಬಿ. ಸೋಮಶೇಖರ್ :— 1987 ರಲ್ಲಿ ಸುಮಾರು 95 ಅಸಿಸ್ಟೆಂಟ್ ಎಜ್ಯುಕೇಷನಲ್ ಆಫೀಸರ್‌ರವರನ್ನು ಪೋಸ್ಟ್ ಮಾಡಿದೆ, ಎಇಓರವರನ್ನು ಪೋಸ್ಟ್

ಮಾಡಬೇಕಾದರೆ, 80 ಜನ ಒಂದೇ ಶಾಲೆಯಲ್ಲಿ ಪ್ರೊಬೇಷನರ್ಸ್ ಹೆಡ್‌ಮಾಸ್ಟರ್ಸ್‌ಗಳಾಗಿದ್ದರು, ಕೆಲವರು ಬಡ್ತಿಯನ್ನು ತೆಗೆದುಕೊಂಡು ಎಇಒ ಎಕ್ಸಿಕ್ಯೂಟೀವ್ ಪೋಸ್ಟ್‌ನಲ್ಲಿ, ಎಲ್ಲರೂ ಹಣವನ್ನು ಕೊಟ್ಟು ಅಲ್ಲಿಯೇ ಮುಂದುವರಿಯುತ್ತಿದ್ದರು. 10 ರಿಂದ 20 ವರ್ಷಗಳವರೆಗೂ ಅಲ್ಲಿಯೇ ಏಇಒಗಳಾಗಿದ್ದರು. ನಾನು ಬಂದು ಯಾರು ಎಇಒಗಳಾಗಿ ಕೆಲಸವನ್ನು ಮಾಡಿಲ್ಲವೋ, ಅವರೆಲ್ಲರೂ ಎಇಒಗಳಾಗಿ ಕೆಲಸವನ್ನು ಮಾಡಬೇಕು; ಏಇಒಗಳಾಗಿ 5-5 ವರ್ಷಗಳಿಂದ ಯಾರಿದ್ದಾರೆ, ಅವರೆಲ್ಲೂ ಹೆಡ್‌ಮಾಸ್ಟರ್ ಆಗಬೇಕೆಂದು ಪಾಲಿಸಿಯನ್ನು ಮಾಡಿದೆ. ನಮ್ಮ ಸಿಂಧ್ಯಾರವರು ಈ ರೀತಿಯಾಗಿ ಮಾಡಬೇಕೆಂದು ಹೇಳಿದರು, ನಾನು ಮಾನ್ಯ ಸಿಂಧ್ಯಾರವರಿಗೆ ಈ ರೀತಿಯಾಗಿ ತಾವು ಕೇಳಬೇಡಿ ಎಂದು ನಾವು ಒಂದು ನಾರ್ಮ್ಸ್‌ನ್ನು ಇಟ್ಟುಕೊಂಡು ಮಾಡುತ್ತಿದ್ದೇನೆ ಎಂದು ಹೇಳಿದೆ. ಯಾರೊಬ್ಬರೂ ನನ್ನ ಹತ್ತಿರ ಬರಲಿಲ್ಲ. ಇವತ್ತು ನಿಮ್ಮ ಅಧಿಕಾರಿಗಳಿದ್ದಾರೆ, ಬೇಕಾದರೆ ಅವರನ್ನು ಕೇಳಿ. ಅವರೆಲ್ಲರೂ ಕೂಡ ಇವತ್ತು ಡಿಡಿಪಿಐಗಳಾಗಿದ್ದಾರೆ, ಎಲ್ಲರೂ ನನ್ನನ್ನು ಪ್ರಶಂಶಿಸಿದರು. 80 ಜನರು ಇಂತಹ ಮಂತ್ರಿ ಈ ರೀತಿಯಾಗಿ ಪಾಲಿಸಿಯನ್ನು ಮಾಡಿದವರು ಯಾರು ಇಲ್ಲವೆಂದು ಹೇಳಿದರು. ಇದನ್ನು ನಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಇದನ್ನು ಅವರೆಲ್ಲರೂ ಒಪ್ಪಿಕೊಂಡರು, ನಾನು ಎಂ.ಎಲ್‌ಎಗಳಿಗೆ ನಿಮ್ಮ ಜಾತಿಯ ಅಧಿಕಾರಿಗಳನ್ನು ಕೊಡುವುದಿಲ್ಲವೆಂದು ಹೇಳಿದೆ, ನಿಮ್ಮ ತಾಲ್ಲೂಕಿಗೆ ನಿಮ್ಮ ಜಾತಿಯ ಅಧಿಕಾರಿಗಳು ಬೇಡವೆಂದು ಹೇಳಿದೆ. ಆದರೆ ಬೇರೆ ಜಾತಿಯವರನ್ನು ಅಲ್ಲಿಗೆ ಕೊಡುತ್ತೇನೆ. ಹಾರ್ಟಿಕಲ್ಚರ್ ಮಂತ್ರಿಯಾಗಿಯೂ ಸಹ ಕೆಲಸವನ್ನು ಮಾಡಿದ್ದೇನೆ, ಶಿಕ್ಷಣ ಇಲಾಖೆಯ ಮಂತ್ರಿಗಳಾಗಿಯೂ ಸಹ ಮಾಡಿದ್ದೇನೆ. ಇದರಲ್ಲಿ ಒಂದು ಬದಲಾವಣೆಗಲಾಗಿರುವುದಿಲ್ಲ, ಇದರ ಬಗ್ಗೆ ಏನಾದರೂ ಬಂದರೆ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಸ್ಯಾಕ್ರಿಫೈಸ್ ಮಾಡುವುದಕ್ಕೂ ತಯಾರಾಗಿರಬೇಕು, ಏನಾದರೂ ಒಳ್ಳೆಯದನ್ನು ಮಾಡಬೇಕಾದರೆ ನಾವು ತ್ಯಾಗ ಮಾಡುವುದಕ್ಕೂ ಸಿದ್ಧರಾಗಿರಬೇಕು. ಇಲ್ಲದಿದ್ದರೆ ತ್ಯಾಗ ಮಾಡದಿದ್ದರೆ ಏನೂ ಸಾಧನೆಯನ್ನು ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಭಾಗದಲ್ಲಿ ಅಭಿವೃದ್ಧಿಯು ಸಮಾನವಾಗಿ ಆಗಬೇಕಾದರೆ ಮತ್ತು ಅಸಮಾನತೆ ತೆಗೆದುಹಾಕಬೇಕಾದರೆ ಉತ್ತರ ಕರ್ನಾಟಕದಲ್ಲಿ, ಸಂವಿಧಾನ ತಿದ್ದುಪಡಿ ಬಗ್ಗೆ ಮಾನ್ಯ ಖರ್ಗೆಯವರು ಮಧ್ಯಪ್ರವೇಶಿಸಿ ಹೇಳಿದರು. ನಾವು 8ನೇ ಜುಲೈ 1998ರಲ್ಲಿ ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರ ಪತ್ರ ಬರೆದಿದೆ.

``Sub:- Amendment of Constitution of India for providing Regional reservation in Karnataka.

ಆಗ ನಾವೇನು ಮಾಡಿದ್ದೇವೆಂದರೆ,

....

a) to promote accelerated development of the backward areas of the State of Andhra Pradesh so as to secure the balanced development of the State as a whole;

b) to provide equitable opportunities to different areas of the State in the matter of education, employment and career prospects in Public Service ;

To promote accelerated development of backward areas in Karnataka, the Government has constituted the Hyderabad-Karnataka Area Development Baord; Malnad Area Development Board and Bayaluseeme Development Board, so as to secure the balance development of the State as a whole. Copies of the enactments creating these Boards are enclsoed.

The Government of Karnataka proposes to provide for regional reservation with a view to make available suitable opportunities and facilities for the people belonging to different parts of the State in the matter of public employment and in the matter of education, as has been doen in Andhra Pradesh and thus promote accelerated development of Backward areas of Karnataka. Therefore, I am to request you kindly to take immediate necessary action to amend the Constitution of India so as to make special provision with respect to the State of Karnataka on the lines of Article 371(D) of the Constitution which provides for special provision in respect of the State of Andhra Pradesh."

ಆಂದರೆ ನಾವು ಕಾನ್ಸಿಟ್ಯುಷನಲ್ ಅಮೆಂಡ್‌ಮೆಂಟ್ ಮಾಡಬೇಕೆಂದು ನಾವು ಈಗಾಗಲೇ ಪ್ರಸ್ತಾವನೆಯನ್ನು ನಾವು ಕಳುಹಿಸಿದ್ದೇವೆ. ನಾನು ಇವತ್ತೂ ಸಲಹೆ ಕೊಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಬಿಲ್ಲನ್ನು ಏನೂ ತಯಾರು ಮಾಡಬೇಕಾಗಿಲ್ಲ. ಸರ್ಕಾರ ಇವತ್ತು ಮೂವ್ ಮಾಡಲಿ ನಾವು ರೆಸಲ್ಯೂಷನ್ ಮಾಡೋಣ. ಎಲ್ಲಾ ಪಕ್ಷದವರು ಸೇರಿ ಇಂತಹ ಒಂದು ಕಾನ್ಸಿಟ್ಯುಷನಲ್ ಅಮೆಂಡ್‌ಮೆಂಟ್‌ನ ಅವಶ್ಯಕತೆಯಿದೆ ಎಂದು ಹೇಳಿ ನಾವೆಲ್ಲರೂ ಬೆಂಬಲ ಕೊಡುತ್ತೇವೆ. ತಾವೊಂದು ರೆಸಲ್ಯೂಷನ್ ತನ್ನಿ, ಅದನ್ನು ನಾವೆಲ್ಲರೂ ಪಾಸ್ ಮಾಡಿ ಕಳುಹಿಸೋಣ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಬ್ಯಾಡಗಿ) :— ಮಾನ್ಯ ಉಪಾಧ್ಯಕ್ಷರೆ, ಕಳೆದ ಒಂದೂವರೆ ವರ್ಷದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಾರ್ವಜನಿಕರಿಗೆ

ಅನುಕೂಲವಾಗುವ ಬಹಳಷ್ಟು ಕೆಲಸಗಳನ್ನು ಹಮ್ಮಿಕೊಂಡಿದೆ. ಮುಂದಿನ ದಿನಗಳಲ್ಲಿ ಸರ್ಕಾರ ಸಾಕಷ್ಟು ಕೆಲಸಗಳನ್ನು ಮಾಡಬೇಕೆಂದು ಆಶಿಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾಮೀಣ ಪ್ರದೇಶಗಳಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವಂತಹ ನೂರು ಲಕ್ಷ ರೂಪಾಯಿಗಳ ಯೋಜನೆಯಡಿಯಲ್ಲಿ ಸಾಕಷ್ಟು ರಸ್ತೆಗಳಗನ್ನು ಮಾಡಿ ಯಾವ ಹಳ್ಳಿಯ ಜನರಿಗೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಲಿಕ್ಕೆ ದಾರಿಯೇ ಇರಲಿಲ್ಲವೋ ಅಂತಹ ಕಡೆಗಳಲ್ಲಿ ಬಹಳಷ್ಟು ಉತ್ತಮವಾದ ಕೆಲಸಗಳನ್ನು ಮಾಡಿದೆ. ಅದೇ ರೀತಿಯಲ್ಲಿ ಮತ್ತೊಂದು ಸಾರಿ ನೂರು ಲಕ್ಷ, ರೂಪಾಯಿಗಳ ಯೋಜನೆಯನ್ನು ಜಾರಿಗೆ ತಂದು ಇಎಎಸ್ ಮತ್ತು ಸರ್ಕಾರ ಕೊಡತಕ್ಕ ಅನುದಾನದಲ್ಲಿ ರಸ್ತೆಗಳನ್ನು ಮಾಡಿದರೆ ಬಹುಮಟ್ಟಿಗೆ ಹಳ್ಳಿಗಳ ಸಂಪರ್ಕ ರಸ್ತೆಯಿಂದ ಜನರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶಿಕ್ಷಣ ಕ್ಷೇತ್ರದಲ್ಲಿ ಮಾನ್ಯ ಶಿಕ್ಷಣ ಸಚಿವರು ಬಹಳಷ್ಟು ಮಹತ್ತರವಾದ ಬದಲಾವಣೆಗಳನ್ನು ಮಾಡಿದ್ದಾರೆ. ಇದರಲ್ಲಿ ಶಾಲೆ ಬಿಟ್ಟ ಮಕ್ಕಳಿಗೆ ಚಿಣ್ಣರ ಅಂಗಳ ಕಾರ್ಯಕ್ರಮ ಚೆನ್ನಾಗಿದೆ. ಚಿಣ್ಣರ ಅಂಗಳ ಕಾರ್ಯಕ್ರಮದಡಿಯಲ್ಲಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕೇಂದ್ರಗಳನ್ನು ಓಪನ್ ಮಾಡಿ ಪ್ರಗತಿದಾಯಕವಾದ ಕೆಲಸವನ್ನು ಮಾಡಿದ್ದಾರೆ. ಈ ಕೆಲಸವನ್ನು ಮಾಡಿರುವುದಕ್ಕೆ ನಾನು ಸರ್ಕಾರವನ್ನು ಶ್ಲಾಘಿಸುತ್ತೇನೆ. ಇಂತಹ ಕೆಲಸಗಳನ್ನು ಮಾಡಿರುವುದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದರ ಜೊತೆಗೆ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಅವರ ಮುಂದಿನ ಭವಿಷ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಅವರಿಗೆ ವ್ಯವಸ್ಥೆಗಳನ್ನು ಕಲ್ಪಿಸಬೇಕಾಗಿದೆ. ಉದಾಹರಣೆಗೆ ನಾನು ಕೂಡ ಶಾಲೆ ಬಿಟ್ಟ ಒಬ್ಬ ವಿದ್ಯಾರ್ಥಿಯಾಗಿದ್ದೆ. ನಾನು ಶಾಲೆಗೇ ಹೋಗುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ನನ್ನನ್ನು ಒಬ್ಬ ಶಿಕ್ಷಕರು ಕರೆದು ತಂದು ಒಂದೇ ವರ್ಷದಲ್ಲಿ ಒಂದನೆಯ ಮತ್ತು ಎರಡನೆಯ ಕ್ಲಾಸ್, ಮುಂದಿನ ವರ್ಷದಲ್ಲಿ ಮೂರು ನಾಲ್ಕು ಹೀಗೆ ಹಳೆಯ ಅಡ್ಮಿಷನ್ ಪ್ರಕಾರ ನನ್ನನ್ನು ಅಡ್ಮಿಟ್ ಮಾಡಿಕೊಂಡು ಕಲಿಸಿದ್ದರಿಂದ ಇವತ್ತು ನಾನು ಬಿ.ಎ. ತನಕ ಎಜ್ಯುಕೇಷನ್ ಮುಗಿಸಿ ಇವತ್ತು ಒಬ್ಬ ಶಾಸಕನಾಗಿ ತಮ್ಮ ಮುಂದೆ ಇದ್ದೇನೆ. ಅದೇ ರೀತಿಯಲ್ಲಿ ಶಾಲೆ ಮಕ್ಕಳಿಗೆ ಏನು ಅವಕಾಶ ಮಾಡಿಕೊಟ್ಟಿದ್ದೀರಿ, ಈ ಕಾರ್ಯಕ್ರಮವನ್ನು ಬಹಳ ಭರವಸೆಯಿಂದ ಸರ್ಕಾರ ನಡೆಸಿದರೆ ಬಡ ಜನರಿಗೆ ಅನುಕೂಲವಾಗುತ್ತದೆ. ಮೊನ್ನೆ ಗುಲ್ಬರ್ಗ ಜಿಲ್ಲೆಯ ಬಗ್ಗೆ ಮಾನ್ಯ ಗೃಹ ಸಚಿವರು ಹೇಳುತ್ತಿದ್ದರು. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ 80 ಸಾವಿರ ಜನ ಮಕ್ಕಳು ಇವತ್ತು ಶಾಲೆಯಲ್ಲಿ ಕಲಿಕೆಯಿಂದ ವಂಚಿತರಾಗಿದ್ದನ್ನು ಗುರುತಿಸಿ ಸರ್ಕಾರ ಈ ಕಾರ್ಯಕ್ರಮದಡಿಯಲ್ಲಿ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದರಿಂದ ಬಹಳಷ್ಟು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದೂ ಕೂಡ ಸ್ವಾಗತಾರ್ಹವಾದ ಯೋಜನೆ. ಜೊತೆಗೆ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ,

ಹಳ್ಳಿಗಳಲ್ಲಿರತಕ್ಕ ಪ್ರೌಢಶಾಲೆಗಳಲ್ಲಿ ಶಿಕ್ಷಣದ ಕೊರತೆಯಿಂದ ಇವತ್ತು ಇಂಗ್ಲೀಷ್ ಹೇಳುವ ಶಿಕ್ಷಕರು ಇಲ್ಲ. ವಿಜ್ಞಾನ, ಗಣಿತ ಹೇಳುವ ಶಿಕ್ಷಕರು ಇಲ್ಲ. ಇತರೆ ವಿಷಯಗಳ ಶಿಕ್ಷಕರ ಕೊರತೆಯಿರುವುದರಿಂದ ಬಹಳಷ್ಟು ತೊಂದರೆಯಾಗಿದೆ. ಉದಾಹರಣೆಗೆ ನನ್ನ ಕ್ಷೇತ್ರದ ಒಂದು ಶಾಲೆಯಲ್ಲಿ ಮೂರು ನಾಲ್ಕು ಜನ ಶಿಕ್ಷಕರ ಕೊರತೆಯಿರುವುದರಿಂದ ಇವತ್ತು ವಿದ್ಯಾರ್ಥಿಗಳು ನೂರಕ್ಕೆ ಎಂಭತ್ತು ಜನ ಪಾಸಾಗತಕ್ಕ ಕಾಲದಲ್ಲಿ ಶೇಕಡ 10-15 ರಷ್ಟು ಜನ ಪಾಸಾಗುತ್ತಿದ್ದಾರೆ. ಸರ್ಕಾರ ಕೂಡಲೇ ಶಿಕ್ಷಕರನ್ನು ಸರ್ಕಾರಿ ಪ್ರೌಢಶಾಲೆಗಳಲ್ಲಿ ಜೂನಿಯರ್ ಕಾಲೇಜುಗಳಲ್ಲಿ, ಪದವಿ ಕಾಲೇಜುಗಳಲ್ಲಿ ಇವತ್ತು ಏನು ಶಿಕ್ಷಕರ ಕೊರತೆಯಿದೆ ಅದನ್ನು ಕೂಡಲೇ ನೀಗಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹೊಸ ಶಿಕ್ಷಣ ಯೋಜನೆಯಡಿಯಲ್ಲಿ ಪರ್ಸೆಂಟೇಜ್ ಕಟ್ ಮಾಡಿ ಹೊಸ ಹುದ್ದೆಗಳನ್ನು ಕೊಡಬಾರದೆಂದು ಹೇಳುತ್ತಿದ್ದಾರೆ. ಮ್ಯಾನೇಜ್‌ಮೆಂಟ್‌ನವರು ಆ ಹುದ್ದೆಗಳನ್ನು ತುಂಬಿಕೊಳ್ಳಲಿಕ್ಕೆ ಆಗುವುದಿಲ್ಲ ಅವರು ಪಗಾರ ಕೊಡಲಿಕ್ಕೆ ಅವರಲ್ಲಿ ದುಡ್ಡು ಇರುವುದಿಲ್ಲ. ನಾವೆಲ್ಲಾ ಹೆಚ್ಚಾಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ತೆಗೆಯುತ್ತಿದ್ದೇವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿರತಕ್ಕ ಡಿಗ್ರಿ ಕಾಲೇಜುಗಳು ಸಂಪೂರ್ಣವಾಗಿ ಬಂದ್ ಆಗತಕ್ಕ ಪರಿಸ್ಥಿತಿ ಬಂದಿದೆ. ಈಗಾಗಲೇ ಸರ್ಕಾರ ಆದೇಶ ಮಾಡಿ ಇಷ್ಟು ಜನ ವಿದ್ಯಾರ್ಥಿಗಳು ಇರಬೇಕು ಇಲ್ಲದಿದ್ದರೆ ಕಾಲೇಜು ಇರಬಾರದೆನ್ನುವ ತೀರ್ಮಾನಕ್ಕೆ ಬರಲಾಗಿದೆ. ಮುಂದಿನ ದಿನಗಳಲ್ಲಿ ನನಗೆ ಹೀಗೆ ಅನ್ನಿಸುತ್ತದೆ, ಬರೀ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಮಾಡಿಬಿಟ್ಟರೆ ಇಂಜಿನಿಯರ್ ಪಾಸು ಮಾಡಿದಂತಹವರಿಗೆ ಹೆಚ್ಚು ಉದ್ಯೋಗಗಳನ್ನು ಕೊಡಲಿಕ್ಕೆ ಆಗುತ್ತಿಲ್ಲ. ಹೆಚ್ಚು ಹೆಚ್ಚು ಇಂಜಿನಿಯರ್‌ಗಳನ್ನು ತಯಾರು ಮಾಡಿ ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತಿದ್ದೇವೆ. ಅವರಿಗೆ ಉದ್ಯೋಗವಿಲ್ಲ. ಮತ್ತೊಂದು ಕಡೆ ನಮ್ಮ ಮುಂದಿನ ಮಕ್ಕಳಿಗೆ ಕಲಿಯುವುದಕ್ಕೆ ಗಣಿತ, ವಿಜ್ಞಾನ ಪಾಠ ಹೇಳತಕ್ಕ ಶಿಕ್ಷಕರ ತೊಂದರೆಯಾಗುತ್ತದೆ. ಅಂತಹ ಸಂದರ್ಭಗಳಲ್ಲಿ ತಾವೇನು ಮಾಡುತ್ತೀರಿ? ಸರ್ಕಾರ ಇದಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಕೆಲಸ ಮಾಡಬೇಕು. ಇವತ್ತು ಡಿಗ್ರಿ ಕಾಲೇಜುಗಳೆಲ್ಲ ಮುಚ್ಚಿಹೋಗುತ್ತಿವೆ. ಇದಕ್ಕೆ ಪುನಶ್ಚೇತನವನ್ನು ಕೊಡಬೇಕು, ಆ ದೃಷ್ಟಿಯಲ್ಲಿ ಸರ್ಕಾರ ಹೆಚ್ಚು ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಹೆಚ್ಚುವರಿ ಮ್ಯಾನೇಜ್‌ಮೆಂಟ್ ತುಂಬತಕ್ಕ ಶಿಕ್ಷಕರ ಕೊರತೆ ಏನಿದೆ ಅದನ್ನು ಬ್ಯಾಕ್‌ಲಾಗ್ ಹುದ್ದೆಗಳ ಪ್ರಕಾರ ತುಂಬಲಿಕ್ಕೆ ನಮಗೆ ಅವಕಾಶವಿರಬೇಕು. ನಾವು ತುಂಬಿವುದಿಲ್ಲ, ಸರ್ಕಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ಇದುವರೆಗೆ ತುಂಬಿಲ್ಲ. ಹಿಂದಿನ ಸರ್ಕಾರ ತುಂಬಿಲ್ಲವೆಂದು ಈ ಸರ್ಕಾರ ಆ ನೆವ ಹೇಳಿಕೊಳ್ಳಬಾರದು, ತಕ್ಷಣ ಕ್ರಮ ಕೈಗೊಂಡು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬತಕ್ಕ ಕಾರ್ಯಕ್ರಮವನ್ನು ಮಾಡಬೇಕು. ಇವತ್ತು ಹತ್ತು ಹನ್ನೆರಡು ವರ್ಷಗಳ ಹಿಂದೆ ಶಾಶ್ವತ ಅನುದಾನರಹಿತ ಕನ್ನಡ ಶಾಲೆಗಳನ್ನು ಪದರಿ ಪೂರ್ವ ಕಾಲೇಜು ಡಿಗ್ರಿ ಕಾಲೇಜುಗಳನ್ನು

ತೆಗೆದಿದ್ದಾರೆ. ಆದರೆ ಇದುವರೆಗೆ ಅವುಗಳಿಗೆ ಅನುದಾನ ನೀಡತಕ್ಕ ವ್ಯವಸ್ಥೆಯಾಗಿರಲಿಲ್ಲ. ಈ ಬಗ್ಗೆ ಪರಿಶಿಷ್ಟಜಾತಿ ಪರಿಶಿಷ್ಟವರ್ಗಗಳ ಶಾಸಕರು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಂಡಾಗ, ಅವರು ಕೂಡಲೇ ಅನುದಾನವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನೂ ಕೂಡ ಸರ್ಕಾರ ಬಹಳಷ್ಟು ತೀವ್ರವಾಗಿ ಪರಿಗಣಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೃಷಿ ಪ್ರಧಾನವಾಗಿರತಕ್ಕ ನಮ್ಮ ದೇಶದಲ್ಲಿ ನೂರಕ್ಕೆ 75-80ರಷ್ಟು ಜನ ಹಳ್ಳಿಗಳಲ್ಲಿ ಜೀವನಕ್ಕೆ ಕೃಷಿಯನ್ನೇ ಅವಲಂಭಿಸಿಕೊಂಡಿದ್ದಾರೆ. ಈ ಸಲ ಬರಗಾಲ ಬಂದು ಬಹಳಷ್ಟು ಜನರಿಗೆ ತೊಂದರೆಯಾಗಿದೆ. ಸರ್ಕಾರ ಈಗಾಗಲೇ ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ತ್ವರಿತವಾಗಿ ಹಣವನ್ನು ಬಿಡುಗಡೆ ಮಾಡಿ ಕೆಲಸಕಾರ್ಯಗಳನ್ನು ತ್ವರಿತವಾಗಿ ಮಾಡಬೇಕು. ನಮ್ಮ ಕಡೆ ಹೋಬಳಿಗಳ ಸಂಖ್ಯೆ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ಭಾಗದ ಕಂದಾಯ ಇಲಾಖೆಯಲ್ಲಿ ಬಹಳಷ್ಟು ಖಾಲಿಯಿರತಕ್ಕ ಹುದ್ದೆಗಳನ್ನು ತುಂಬತಕ್ಕ ವ್ಯವಸ್ಥೆಯನ್ನು ಮಾಡಬೇಕು. ಹಿಂದಿನ ದಿನಗಳಲ್ಲಿ ಬಣವೆ ಸುಟ್ಟರೆ ಮನೆ ಸುಟ್ಟರೆ ಅವುಗಳಿಗೆ ಪರಿಹಾರವಾಗಿ 500 ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆ ಇದೆ. ಅದು ಯಾವ ದ್ವಾಪರ ಯುಗದಲ್ಲಿ ಮಾಡಿದ ಕಾನೂನೋ ಗೊತ್ತಿಲ್ಲ. ಆದ್ದರಿಂದ ಕನಿಷ್ಟಪಕ್ಷ ಇಂತಹ ಸಂದರ್ಭದಲ್ಲಿ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ಹಾಗೆ ಸರ್ಕಾರ ಕೊಡಬೇಕೆಂಬ ವಿಚಾರ ಹೇಳುತ್ತಾ ಇನ್ನು ಜಲಾಯನ ಪ್ರದೇಶಗಳನ್ನು ಹೆಚ್ಚು ಮಾಡಿ ನೀರು ಸಂಗ್ರಹಣೆ ಮಾಡಬೇಕು, ಕೆರೆ ಕಾಲುವೆಗಳನ್ನು ತೋಡತಕ್ಕಂಥ ಕೆಲಸ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಣ್ಣ ನೀರಾವರಿ ಮಂತ್ರಿಗಳು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದಕ್ಕೆ ಬೇರೆ ದೇಶಗಳು ಸಾಲ ಕೊಡುತ್ತಿವೆ. ಇವತ್ತು ನಾನು ಪತ್ರಿಕೆಯಲ್ಲಿ ಓದಿದ ಪ್ರಕಾರ ಸುಮಾರು ಎಂಟು ಜಿಲ್ಲೆಗಳಿಗೆ ಸರ್ಕಾರ ಈ ಜಲಾನಯನ ಅಭಿವೃದ್ಧಿಗಾಗಿ ಹಣ ಕೊಡುತ್ತಿದೆ. ನಮ್ಮದು ಮತ್ತು ನಿಮ್ಮದೂ ಕೂಡ ಆರುನೂರು-ಏಳುನೂರು ಕೆರೆಗಳು ಇರತಕ್ಕಂಥ ತಾಲ್ಲೂಕುಗಳಾಗಿವೆ. ಬೇರೆ ಬೇರೆ ಕಡೆಗಳಿಗೆ ಹೀಗೆ ಚೆಕ್‌ಡ್ಯಾಮ್ ಹಾಕಿ, ಕಲ್ಲು ಮಣ್ಣು ಹಾಕಿ ದೊಡ್ಡ ಮಳೆ ಬಂದರೆ ಅದು ಕೊಚ್ಚಿಕೊಂಡು ಹೋಗಿ ಅದರ ಬಗ್ಗೆ ಸರ್ಕಾರಕ್ಕೆ ಲೆಕ್ಕ ಕೊಡತಕ್ಕಂಥ ವಿಚಾರ ಇವತ್ತು ನಡೆದಿದೆ. ಇದರ ಬಗ್ಗೆ ನಮ್ಮ ಸಮಗ್ರ ವರದಿಯನ್ನು ಕೃಷಿ ಸಮಿತಿಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈ ದೃಷ್ಟಿಯಿಂದ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸುವ ಯೋಜನೆಯಡಿಯಲ್ಲಿ ಕೆರೆಗಳ ಹೂಳು ಎತ್ತುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈ ಕಾರ್ಯಕ್ರಮದಲ್ಲಿ ಅದು ಸರಣಿಯಾಗಿ ಒಂದು ಕಡೆ ಮಳೆ ನೀರು ಬಂತು ಎಂದರೆ, ಒಂದು ಕೋಡಿ ಬಿತ್ತು ಎಂದರೆ ಅದು 15-20 ಕೆರೆಗಳನ್ನು ತುಂಬುವಂಥ ನಮ್ಮಲ್ಲಿ ಸರಣಿ ಕೆರೆಗಳಿವೆ. ಆದ್ದರಿಂದ ಕೆರೆಗಳನ್ನು ದುರಸ್ತಿ ಮಾಡಿ ಅವುಗಳಿಗೆ ಕೋಡಿಗಳನ್ನು ಕಟ್ಟಿ, ಅವುಗಳಲ್ಲಿ ನೀರು ನಿಲ್ಲಿಸುತ್ತಾ ಬಂದುಬಿಟ್ಟರೆ

ಅನುಕೂಲವಾಗುತ್ತದೆ. ಅವತ್ತು ಮುನ್ನೂರು-ನಾಲ್ಕುನೂರು ಕೆರೆಗಳನ್ನು ನಾವು ಜಲಾನಯನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಹೊಸ ಯೋಜನೆಯನ್ನು ಹಾಕಿಕೊಂಡು ಕೆಲಸ ಪ್ರಾರಂಭ ಮಾಡಿದರೆ ಎಲ್ಲಾ ಜಲಾನಯನ ಪ್ರದೇಶಗಳೂ ಅಭಿವೃದ್ಧಿಯತ್ತ ಸಾಗುತ್ತವೆ ಮತ್ತು ಹಾಗೆ ಖರ್ಚು ಮಾಡುವಂಥ ಸಾಕಷ್ಟು ಹಣ ಸದುಪಯೋಗವಾಗುತ್ತದೆ ಎನ್ನುವ ಒಂದು ಮಾತನ್ನು ಸಲಹೆ ರೂಪದಲ್ಲಿ ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ.ಬಿ. ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ) :— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ತೆಂಗು ಬೆಳೆಗಾರರು ಹೆಚ್ಚಿಗೆ ಇದ್ದು ಇವತ್ತು ಅವರೆಲ್ಲೂ ಕೂಡ ನುಸಿರೋಗದಿಂದ ತತ್ತರಿಸಿ ಹೋಗುತ್ತಿದ್ದಾರೆ. ಮಾನ್ಯ ಕೃಷಿ ಸಚಿವರೂ ಕೂಡ ಇಲ್ಲಿ ಇದ್ದಾರೆ. ನಾನು ಕಳೆದ ಅಧಿವೇಶನದಲ್ಲೂ ಕೂಡ ಮನವಿ ಮಾಡಿಕೊಂಡಿದ್ದೆ. ಈ ರಾಜ್ಯದಲ್ಲಿ ಎಷ್ಟು ತೆಂಗಿನ ಮರಗಳಿವೆ, ಅವೆಲ್ಲಕ್ಕೂ ಕೂಡ ಏನು ಮಕ್ಕಳಿಗೆ ಪಲ್ಸ್ ಪೋಲಿಯೊ ಹಾಕತಕ್ಕಂಥ ಕಾರ್ಯಕ್ರಮ ಮಾಡಿದ್ದೀರೋ, ಅದೇರೀತಿಯಲ್ಲಿ ರಾಜ್ಯದಲ್ಲಿರತಕ್ಕಂಥ ಎಲ್ಲಾ ತೆಂಗಿನ ಮರಗಳಿಗೆ ಕೂಡ ಎಲ್ಲಾ ಇಲಾಖೆಗಳನ್ನು ಅದರಲ್ಲಿ ತೊಡಗಿಸಿಕೊಂಡು ಅವುಗಳಿಗೆ ಔಷಧಿಯನ್ನು ಸಿಂಪಡಣೆ ಮಾಡುವ ವ್ಯವಸ್ಥೆ ಮಾಡಿದರೆ ಖಂಡಿತವಾಗಿಯೂ ಕೂಡ ಈ ರೋಗವನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ರೈತರನ್ನು ಆರ್ಥಿಕವಾಗಿ ಉಳಿಸುವುದಕ್ಕೆ ಸಾಧ್ಯವೆಂದು ನಾನು ಕಳೆದ ಅಧಿವೇಶನದಲ್ಲಿ ಸನ್ಮಾನ್ಯ ಕೃಷಿ ಸಚಿವರಿಗೆ ಮನವಿ ಮಾಡಿಕೊಂಡಿದ್ದೆ. ಅದೇ ರೀತಿ ಈಗಲೂ ಕೂಡ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಸಹ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಒಗ್ಗೂಡಿಸಿಕೊಂಡು ಈ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಖಂಡಿತವಾಗಿಯೂ ಈ ನುಸಿರೋಗ ಮತ್ತು ಕಪ್ಪುತಲೆ ಹುಳ ರೋಗ ಏನಿದೆ, ಇವೆರಡನ್ನೂ ಕೂಡ ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಅನೇಕ ಸಾರಿ ಈ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಚಿಕ್ಕಮಗಳೂರು ಜಿಲ್ಲಾಪಂಚಾಯತ್‌ನವರು ವಿಶೇಷ ರೀತಿಯಲ್ಲಿ ಈ ನುಸಿರೋಗವನ್ನು ಸಂಪೂರ್ಣವಾಗಿ ಪರಿಹಾರ ಮಾಡಬೇಕೆಂಬ ದೃಷ್ಟಿಯಿಂದ ಈಗಾಗಲೇ ಪ್ರಾಯೋಗಿಕವಾಗಿ ತರೀಕೆರೆ ಮತ್ತು ಕಡೂರು ತಾಲ್ಲೂಕಿನಲ್ಲಿ ಇದನ್ನು ಮಾಡಿದ್ದಾರೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಹೇಳಿದ ಪ್ರಕಾರ ರೈತರಿಗೆ ಒಂದು ಕಡೆ ಬರಗಾಲ ಇದೆ, ಮತ್ತೊಂದು ಕಡೆ ಈ ನುಸಿರೋಗದ ತೊಂದರೆ ಇದೆ. ರೈತರಿಗೆ ತೊಂದರೆ ಉಂಟುಮಾಡುವ ಈ ನುಸಿರೋಗವನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು ಎನ್ನುವುದಾದರೆ ಎಲ್ಲಾ ಮರಗಳಿಗೆ ನುಸಿರೋಗದ ಔಷಧಿಯನ್ನು ಹೊಡೆಸುವುದಕ್ಕೆ ತಾವು ವಿಶೇಷ ರೀತಿಯಲ್ಲಿ ಹಣ ಬಿಡುಗಡೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಅದು ಸಾಧ್ಯ. ಇಲ್ಲದಿದ್ದರೆ ಬರಗಾಲದಿಂದ ನೀರು ಕಡಿಮೆಯಾಗುತ್ತಿದೆ

ಮತ್ತು ಮುಂದೆ ಬೇಸಿಗೆ ಬರುತ್ತಿದೆ. ಆ ದೃಷ್ಟಿಯಿಂದ ತಾವು 30ನೇ ತಾರೀಖು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಿದ್ದೀರಿ. ಅಂದು ವಿಶೇಷ ರೀತಿಯಲ್ಲಿ ಈ ನುಸಿರೋಗಕ್ಕೆ ಹಣ ಬಿಡುಗಡೆ ಮಾಡುವ ಘೋಷಣೆಯನ್ನು ತಾವು ಮಾಡಬೇಕು. ಇಲ್ಲದಿದ್ದರೆ ತೆಂಗಿನಮರಗಳು ಸಂಪೂರ್ಣವಾಗಿ ನಾಶವಾಗುತ್ತವೆ. ಸುಮಾರು ಇಪ್ಪತ್ತು ವರ್ಷದ ತೆಂಗಿನಮರಗಳನ್ನು ಮತ್ತೆ ಬೆಳೆಯುವುದಕ್ಕಾಗುವುದಿಲ್ಲ.

ಈ ವರ್ಷ ನುಸಿರೋಗವನ್ನು ತಡೆಗಟ್ಟದೇ ಹೋದರೆ 25 ವರ್ಷಗಳಿಂದ ಮರಗಳನ್ನು ಬೆಳೆಸಿದ ರೈತರು ಹಾಳಾಗಿ ಹೋಗುತ್ತಾರೆ. ಆದಕ್ಕಾಗಿ 30ನೇ ತಾರೀಖು ವಿಶೇಷ ಹಣವನ್ನು ಬಜೆಟ್‌ನಲ್ಲಿ ಬಿಡುಗಡೆ ಮಾಡತಕ್ಕಂಥ ಔಚಿತ್ಯವನ್ನು ಮನಗಂಡು ಮಾನ್ಯ ಕೃಷಿ ಸಚಿವರು ಮುಖ್ಯಮಂತ್ರಿಗಳ ಮೂಲಕ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಬಿ. ಸುರೇಶ್ ಬಾಬು :— ಇವತ್ತು ರೈತರು ಕಂಗಾಲಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆರ್ಥಿಕವಾಗಿ ಜೀವನ ನಡೆಸುವುದು ಅವರಿಗೆ ತುಂಬಾ ಕಷ್ಟವಾಗಿದೆ. ಈ ಸಂದರ್ಭದಲ್ಲಿ ಅವರು ತಾವು ಬೆಳೆಸಿದಂಥ ತೆಂಗಿನ ಮರಗಳಲ್ಲಿ ನೀರಾ ಇಳಿಸುವ ವ್ಯವಸ್ಥೆಯನ್ನು ಸ್ವಂತವಾಗಿ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಭಾಗದಲ್ಲಿ ಕಿತ್ತನಹಳ್ಳಿ ಇರಬಹುದು, ಬೇರೆ ಎಲ್ಲಾ ಕಡೆಗಳಲ್ಲಿ ಕೂಡ ಎಲ್ಲೆಲ್ಲಿ ನೀರಾ ಕಟ್ಟುವವರು ಸಿಗುತ್ತಾರೆ ಅವರನ್ನು ಹುಡುಕಿಕೊಂಡು ಬಂದು ನೀರಾ ಕಟ್ಟುವ ವ್ಯವಸ್ಥೆಯನ್ನು ರೈತರು ವೈಯಕ್ತಿಕವಾಗಿ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಇದರ ಕಡೆಗೆ ಗಮನ ಹರಿಸಿ ರೈತರಿಗೆ ಯಾವುದಾದರೂ ರೀತಿಯಿಂದ ಪರಿಹಾರವನ್ನು ಕಂಡುಹಿಡಿಯಬೇಕು. ನೀರಾ ಇಳಿಸುವದಕ್ಕೆ ಕೂಡ ತಾವು ವ್ಯವಸ್ತೆ ಮಾಡಿಕೊಡಬೇಕು. ಏಕೆಂದರೆ ನೀರಾವನ್ನು ಬೆಳಗಿನ ಜಾವದಲ್ಲಿ ಕುಡಿದರೆ ಅದು ಆರೋಗ್ಯಕ್ಕೆ ಒಳ್ಳೆಯದು, ಆಮೇಲೆ ಕುಡಿದರೆ ಅದು ಸೇಂದಿಯಾಗಿ ಪರಿವರ್ತನೆಯಾಗುತ್ತದೆಯೆಂದು ಸರ್ಕಾರಕ್ಕೆ ಆಲೋಚನೆ ಇದೆ. ಆದರೆ ಇವತ್ತು ನಾವು ಫ್ರೂಟಿ ತರಹ ಪೇಯಗಳನ್ನು ಮಾರಾಟ ಮಾಡುವುದನ್ನು ನೋಡುತ್ತೇವೆ. ಆದೇ ತರಹ ಸುಮಾರು ಆರು ತಿಂಗಳು ಪ್ರಿಸರ್ವ್ ಮಾಡುವ ರೀತಿಯಲ್ಲಿ ಅದನ್ನು ಇಟ್ಟು ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ಆದರಿಂದ ಬೆಲ್ಲ, ವಿನಿಗರ್ ತಯಾರು ಮಾಡಬಹುದು ಎಂದು ರೈತರು ನಮಗೆ ಸಲಹೆ ಮಾಡುತ್ತಿದ್ದಾರೆ. ಈ ರೀತಿ ಇವತ್ತು ರೈತರು ಟ್ರೈನ್‌ಅಪ್ ಆಗಿದ್ದಾರೆ. ಈ ನಿಟ್ಟಿನಲ್ಲಿ ವಿಜ್ಞಾನಿಗಳನ್ನು ಅಳವಡಿಸಿಕೊಂಡು ಹೆಚ್ಚಿನ ರೀತಿಯಲ್ಲಿ ಅವರನ್ನು ಉಪಯೋಗ ಮಾಡಿಕೊಂಡು ರೈತರಿಗೆ ಸ್ವಲ್ಪ ಉಸಿರಾಡುವುದಕ್ಕೆ ಆದರೂ ಅವಕಾಶ ಮಾಡಿಕೊಡಬೇಕಂದು ಕೃಷಿ ಸಚಿವರಲ್ಲಿ ಹಾಗೂ ಸರ್ಕಾರದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಇನ್ನೂ ಇದರ ಬಗ್ಗೆ ಸರ್ಕಾರ ಕಾನೂನು ತಂದಿಲ್ಲ. ಹೀಗೆ ಮಾಡಿದರೆ ಅದು ಕಾನೂನು ಬಾಹಿರವಾಗುತ್ತದೆ ಎಂದು ರೈತರಿಗೆ ಹೇಳುವುದಕ್ಕೆ ಹೋದರೆ ಅವರು

ಹೇಳುತ್ತಾರೆ, ಏನೆಂದರೆ ಈ ಗಿಡಗಳನ್ನು ನಾವೇ ಹಾಕಿ ಬೆಳೆಸಿರುವಂಥಾದ್ದು ಎಂದು ಅವಾಗ ಸರ್ಕಾರ ಗಿಡ ಬೆಳೆಯುವುದಕ್ಕೆ ಯಾವುದೇ ನಿಯಮವನ್ನು ಮಾಡಿರಲಿಲ್ಲ. ಆದ್ದರಿಂದ ನಾವು ಬೆಳೆಸಿದ ಮರಗಳಿಗೆ ಬೆಳೆ ಸಿಗದೇ ಇರುವಾಗ, ಬೇರೆ ಏನಾದರೂ ಪರಿಹಾರ ಕಂಡುಹಿಡಿಯುವುದಕ್ಕೆ ಹೋದರೆ ಇದಕ್ಕೆ ಸರ್ಕಾರ ಏಕೆ ಅಡ್ಡಿ ಮಾಡಬೇಕು ಎಂದು ಅವರು ಕೇಳುತ್ತಾರೆ. ಅಂದರೆ ರೈತರು ಇಷ್ಟೊಂದು ತಯಾರಾಗಿ ಮಾತನಾಡುವಂಥ ಸ್ಥಿತಿ ಬಂದಿದೆ ದಯವಿಟ್ಟು ಈ ರೋಗ ಎಲ್ಲಾ ಕಡೆ ವ್ಯಾಪಕವಾಗಿ ಹಬ್ಬುವದಕ್ಕೆ ಮುಂಚೆ ಸರ್ಕಾರ ಈ ನಿಟ್ಟಿನಲ್ಲಿ ಯೋಚನೆ ಮಾಡಿ ನೀರಾ ಇಳಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇವತ್ತು ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಒಂದು ಕಡೆ ನುಸಿರೋಗ, ಇನ್ನೊಂದು ಕಡೆ ಕಪ್ಪುತಲೆ ಹುಳ ರೋಗದ ಸಮಸ್ಯೆ ಇದೆ. ಹಿಂದೆ ಒಂದು ಗಾದೆ ಮಾತು ಹೇಳುತ್ತಿದ್ದರು.'ರೋಗ ಮನುಷ್ಯರಿಗೆ ಬರದೆ ಮರಕ್ಕೆ ಬರುತ್ತದೆಯೇ' ಎಂದು. ಆದರೆ ಇವತ್ತು ಇಬ್ಬರಿಗೂ ರೋಗ ಬರುತ್ತಿದೆ. ಅವತ್ತು ಭಾರತದ ಭೂಪಟದಲ್ಲಿ ಮಲೇರಿಯಾ ವ್ಯಾಪಕವಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಎರಡು ವರ್ಷಗಳಿಂದ ಹಬ್ಬಿದೆ ಎನ್ನತಕ್ಕಂಥಾದ್ದು ಇದೆ. ಇವತ್ತು ಮರದ ಜೊತೆಗೆ ಮನುಷ್ಯನಿಗೂ ಕೂಡ ಮಲೇರಿಯಾ ರೋಗ ಹೆಚ್ಚು ಕಾಡುತ್ತಾ ಬಂದಿದೆ. ಇವೆರಡನ್ನೂ ಕೂಡ ನಿಯಂತ್ರಣ ಮಾಡಬೇಕು. ಇಲ್ಲದಿದ್ದರೆ ಜನರು ಯಾವ ರೀತಿಯಿಂದ ಬದುಕಬೇಕು ಎಂದು ಸರ್ಕಾರ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಲೇರಿಯಾ ಜೊತೆಗೆ ನೀರಿನ ಕಲ್ಮಶದಿಂದಾಗಿ ಅದು ಜಾಂಡೀಸ್ ಆಗಿ ಪರಿವರ್ತನೆಯಾಗುತ್ತಿದೆ. ಇದರ ಬಗ್ಗೆ ಸನ್ಮಾನ್ಯ ಆರೋಗ್ಯ ಸಚಿವರು ಹೆಚ್ಚಿನ ಗಮನಹರಿಸಬೇಕೆಂದು ಹೇಳುತ್ತೇನೆ. ಕಳೆದ ಜಿಲ್ಲಾಪಂಚಾಯತ್ ಮೀಟಿಂಗ್‌ನಲ್ಲಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೃಷಿ ಸಚಿವರು ಹೇಳಿದರು ಏನೆಂದರೆ ನಾಲ್ಕು ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಎಂದು. ಈ ಹಣ ಇನ್ನೂ ಕೂಡ ಬಂದಿಲ್ಲ. ಆದಷ್ಟು ಬೇಗ ಇದರ ಕಡೆಗೆ ಗಮನಹರಿಸಿ ಜನರ ಆರೋಗ್ಯವನ್ನು ಕಾಪಾಡಬೇಕೆಂದು ಈ ಸದನದರ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಮಳೆ ನೀರನ್ನು ಅವಲಂಬಿಸಿಕೊಳ್ಳದೆ ರೈತರಿಗೆ ಬೇರೆ ಯಾವುದೇ ತರಹ ನೀರಾವರಿ ವ್ಯವಸ್ಥೆ ಇರುವುದಿಲ್ಲ. ಈ ನಿಟ್ಟಿನಲ್ಲಿ ಈಗಾಗಲೇ ಸರ್ವೆ ಮಾಡುವುದಕ್ಕೆ ಐದು ಕೋಟಿ ರೂಪಾಯಿಗಳನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದಷ್ಟು ಬೇಗ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ನಮ್ಮ ಭಾಗಕ್ಕೂ ಕೂಡ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಕುಡಿಯುವ ನೀರಿಗೆ 8 ಕೋಟಿ 18 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಈ ಕಾರ್ಯ ನಡೆಯುತ್ತಿದೆ. ಆದರೆ ಅದು

ತ್ವರಿತವಾಗಿ ಆದಷ್ಟು ಬೇಗ ಆಗಬೇಕಾಗಿದೆ. ಈಗಾಗಲೇ ಒಂದು ವರ್ಷ ಆಗಿಹೋಯಿತು. ಇನ್ನೂ ಕೂಡ ಅರ್ಧ ಕೆಲಸ ಆಗಿಲ್ಲ. ಮಾರ್ಚ್‌ಗೆ ಅದರ ವೇಳೆ ಮುಗಿಯುತ್ತದೆ. ದಯಮಾಡಿ ಇದನ್ನು ಕೂಡ ಆದಷ್ಟು ಶೀಘ್ರವಾಗಿ ಮಾಡಿಸಿಕೊಡಬೇಕೆಂದು ನಾನು

5.40 ಪಿ.ಎಂ.

ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತೇನು ಮುಂದುವರೆದ ಕಲಿಕಾ ಕೇಂದ್ರ ಎಂಬ ಯೋಜನೆಯನ್ನು ಕೇಂದ್ರ ಸರ್ಕಾರ ಮಾಡಿದೆ, ಅದರ ಮುಖಾಂತರ ಏನಾಗುತ್ತದೆಂದರೆ ಊರಿನಲ್ಲಿ ಇಬ್ಬರಿಗೆ ಕೆಲಸ ಸಿಗುತ್ತದೆ. ಅದರಿಂದ ಅವರು ಜೀವನ ಮಾಡಬಹುದೆಂಬ ದೃಷ್ಟಿಯಿಂದ, ಊರಲ್ಲಿ ಸಾಕಷ್ಟು ಪಾರ್ಟಿಗಳಾಗಿ ನನಗೆ ಬೇಕು, ನನಗೆ ಬೇಕು ಎನ್ನತಕ್ಕಂತಾದ್ದು ಕೂಡ ಹಳ್ಳಿಗಳಲ್ಲಿ ಗೊಂದಲವಾಗಿ, ಎಷ್ಟು ವರ್ಷದವರೆಗೆ ಈ ಮುಂದುವರೆದ ಕಲಿಕಾ ಕೇಂದ್ರವೆಂಬ ಸ್ಕೀಮ್ ಮಾಡಿದ್ದಾರೆ ಎಂಬುದನ್ನೂ ಕೂಡ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಕಂದಾಯ ಇಲಾಖಾ ಸಚಿವರಲ್ಲಿ ನಾನು ಮನವಿ ಮಾಡುವುದೇನೆಂದರೆ, ನಮ್ಮ ಕ್ಷೇತ್ರದಲ್ಲಿ ಇವತ್ತು ಸೇಂದಿವನ ವ್ಯಾಪಕವಾಗಿದೆ. ಅಲ್ಲಿ ಯಾವುದಕ್ಕೂ ಕೂಡ ಅದು ಬಳಕೆಯಾಗುತ್ತಾ ಇಲ್ಲ. ಅದರಲ್ಲಿ ಸುಮಾರು ಇಪ್ಪತ್ತು ವರ್ಷದಿಂದ ತೆಂಗಿನ ಗಿಡಗಳನ್ನು ಹಾಕಿಕೊಂಡು ಸಾಕಷ್ಟು ಜನ ರೈತರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೆ, ಅವರಿಗೆ ರಿಲೀಸ್ ಮಾಡಿ, ಮಂಜೂರ್ಮಾಡಿಕೊಡುವ ವ್ಯವಸ್ಥೆಯಾಗಬೇಕು. ಇವತ್ತೇನು ಈಚಲುವನ ಇದೆ, ಇದು ಎಲ್ಲಾ ಕಡೆಯೂ ನಶಿಸಿ ಹೋಗಿದೆ, ಆದ್ದರಿಂದ, ಇವತ್ತು ಏನು ಸೇಂದಿವನ ಇದೆ ಅದನ್ನು ರಿಲೀಸ್ ಮಾಡಿ ಕಂದಾಯ ಇಲಾಖೆಯವರುಮಂಜೂರ್ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ನಮ್ಮ ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ವ್ಯಾಪಕವಾಗಿ ಖನಿಜಸಂಪತ್ತು ಇದೆ. ಅದೆಲ್ಲವನ್ನೂ ಸರ್ವೆ ಮಾಡಿಸಬೇಕು. ಅದು ರಾಜ್ಯಕ್ಕೆ ಒಳ್ಳೆಯ ಆಸ್ತಿ. ಅದರ ಮುಖಾಂತರ ಒಳ್ಳೆಯ ಆದಾಯವು ಕೂಡ ಆಗುತ್ತದೆ. ಆದ್ದರಿಂದ ಏನೇನು ಖನಿಜ ಸಂಪತ್ತು ಸಿಗುತ್ತದೆಂಬ ಬಗ್ಗೆ ಸರ್ವೆ ಮಾಡಿಸಿ, ಅದನ್ನು ಉಪಯೋಗಿಸಿಕೊಳ್ಳಬೇಕು. ಇಲ್ಲದೇ ಹೋದರೆ, ಅದು ಹಾಗೆಯೇ ಹಾಳಾಗಿ ಹೋಗುತ್ತದೆ ಎಂಬುದನ್ನೂ ಕೂಡ ಹೇಳುತ್ತೇನೆ. ಇನ್ನು ಅಂತರ್ ಜಲದ ಬಗ್ಗೆ ಹೇಳಬೇಕೆಂದರೆ, ಕೃಷಿ ಇಲಾಖೆಯವರು ಇವತ್ತು ಅಂತರ್ ಜಲದ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದಾರೆ. ತಿಪಟೂರಿನಲ್ಲಿ ಬಯೋಫ್ಸ್ ಸಂಸ್ಥೆಯೆಂದು ಇದೆ. ಅವರು ಕೃಷಿ ಹೊಂಡಗಳನ್ನು ಮಾಡಿ, ಅಲ್ಲೇ ನೀರನ್ನು ಇಂಗಿಸುವಂಥ ಕಾರ್ಯಕ್ರಮ ಕೂಡ ಮಾಡುತ್ತಿದ್ದಾರೆ. ಇದೇ ರೀತಿ ಸರ್ಕಾರ ಎಲ್ಲಾ ಕಡೆ ನೀರನ್ನು ಇಂಗಿಸುವಂಥ ಕಾರ್ಯಕ್ರಮವನ್ನು ಮಾಡಿದರೆ ಒಳ್ಳೆಯದು. ಮಾನ್ಯ ಕೃಷಿ ಸಚಿವರು ಕೂಡ ಒಮ್ಮೆ ಬಯೋಫ್ಸ್ ಸಂಸ್ಥೆಗೆ ಭೇಟಿ ನೀಡಿದ್ದರು. ಇದೇ ರೀತಿ ರಾಜ್ಯದಲ್ಲಿ ಎಲ್ಲಾ ಕಡೆಯೂ ಅಳವಡಿಸಿಕೊಂಡರೆ ನಮಗೆ ಅಂತರ ಜಲದ ನೀರಿನ ಮಟ್ಟ ಹೆಚ್ಚಾಗುತ್ತದೆ. ಇದರ ಬಗ್ಗೆ ಗಮನಹರಿಸಿ, ಸರ್ಕಾರ ನೀರನ್ನು ಇಂಗಿಸುವ

ಕಾರ್ಯಕ್ರಮವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತೇನು ಒಂದಂಕಿ ಲಾಟರಿ ರಾಜ್ಯದಲ್ಲಿ ಮತ್ತು ಹಲವಾರು ಕಡೆಗಳಲ್ಲಿ ಇದೆ, ಆದರಿಂದ ಸಾಕಷ್ಟು ಸಂಸಾರಗಳು ಹಾಳಾಗುತ್ತವೆ. ಒಂದೊಂದೇ ನಂಬರಿಗೆ ಇಷ್ಟಿಷ್ಟು ದುಡ್ಡು ಎಂದು ಕಟ್ಟಿಕೊಂಡು ಲಾಟರಿ ಟಿಕೆಟ್‌ಗಳನ್ನು ತೆಗೆದುಕೊಳ್ಳುವುದರ ಮುಖಾಂತರ, ಆದನ್ನೇ ನೋಡಿಕೊಂಡು ಕಾಲ ಕಳೆಯುವದರ ಜೊತೆಗೆ ಮಾನವ ಶಕ್ತಿಯನ್ನೂ ಹಾಳು ಮಾಡಿಕೊಳ್ಳುತ್ತಾರೆ. ಇದು ಅದೃಷ್ಟ ಇದ್ದವರಿಗೆ ಬರುತ್ತದೆ, ಹತ್ತರಲ್ಲಿ ಒಬ್ಬರಿಗೆ ಬರಬಹುದು, ಇನ್ನೂ ಒಂಭತ್ತು ಜನರ ಬದುಕು ಹಾಳಾಗುತ್ತದೆ. ಆದ್ದರಿಂದ, ಅದನ್ನೂ ಕೂಡ ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮುಜರಾಯಿ ಇಲಾಖೆಯಿಂದ ಆರಾಧನಾ ಸಮಿತಿ ಎಂದು ಮಾಡಿ ಸುಮಾರು 60-70 ಸಾವಿರ ರೂಪಾಯಿಗಳನ್ನು ವರ್ಷಕ್ಕೆ ಈ ಸಮಿತಿಗೆ ಕೊಡುವುದರ ಮುಖಾಂತರ ಹಳ್ಳಿಗಳ ಕಡೆ ಇರತಕ್ಕಂಥ ದೇವಸ್ಥಾನಗಳ ಅಭಿವೃದ್ಧಿಗೆ ಸರ್ಕಾರ ದುಡ್ಡನ್ನು ಕೊಡುತ್ತಾ ಇದೆ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ನೀಡಬೇಕು. ಸುಮಾರು 5 ಲಕ್ಷದಿಂದ 10 ಲಕ್ಷದವರೆಗೆ ಕೊಟ್ಟರೂ ಕೂಡ ಒಳ್ಳೆಯದು. ಇದರಿಂದ ಎಲ್ಲಾ ಹಳ್ಳಿಗಳಲ್ಲಿರತಕ್ಕ ದೇವಸ್ಥಾನಗಳ ಅಭಿವೃದ್ಧಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಹೇಳುತ್ತೇನೆ. ನಮ್ಮ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಾಕಷ್ಟು ಸಾರಿಗೆ ವ್ಯವಸ್ಥೆ ಇಲ್ಲ. ದಯಮಾಡಿ ಸಾರಿಗೆ ಸಚಿವರು ನಮ್ಮ ತಾಲ್ಲೂಕಿನ ಕಡೆ ಗಮನಹರಿಸಿ, ಎಲ್ಲಾ ಹಳ್ಳಿಗಳಿಗೂ ಕೂಡ ಬಸ್ಸಿನ ವ್ಯವಸ್ಥೆ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಚಿಕ್ಕನಾಯಕನಹಳ್ಳಿಯಲ್ಲಿ ಸಾಕಷ್ಟು ದೇವಸ್ಥಾನಗಳು ಇವೆ. ಅದರಲ್ಲಿ ಗೋಡೆಕೆರೆ ಸಿದ್ದರಾಮೇಶ್ವರ ಇರಬಹುದು, ವಜ್ರ ಇರಬಹುದು ಹಾಗೂ ಯಳನಡು ಸಿದ್ದರಾಮೇಶ್ವರ ದೇವಸ್ಥಾನ ಇರಬಹುದು ಹೀಗೆ ಸಾಕಷ್ಟು ದೇವಾಲಯಗಳು ಇವೆ. ಅದನ್ನು ಪ್ರವಾಸಿ ತಾಣವೆಂದು ಘೋಷಿಸಬೇಕೆಂದು ಈ ಸದನದ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಚಿಕ್ಕನಾಯಕನ-ಹಳ್ಳಿಯಲ್ಲಿದ್ದಂತಹ ಕೃಷಿ ಮಾರುಕಟ್ಟೆಯನ್ನು ಇವತ್ತು ಹುಲಿಯೂರಿಗೆ ವರ್ಗಾವಣೆ ಮಾಡಲಾಗಿದೆ. 1992ರಲ್ಲಿ ಅಂದಿನ ಸರ್ಕಾರದಲ್ಲಿದ್ದಂತಹ ಕೃಷಿ ಮಾರುಕಟ್ಟೆ ಸಚಿವರು ಇದರ ಬಗ್ಗೆ ಆರ್ಡರನ್ನು ತಂದಿದ್ದರು, ಅದನ್ನು ದಯಮಾಡಿ ಹಿಂತೆಗೆದುಕೊಂಡು ತಾಲ್ಲೂಕು ಕೇಂದ್ರವಾದಂಥ ಚಿಕ್ಕನಾಯಕನಹಳ್ಳಿಯಲ್ಲಿಯೇ ಕೃಷಿ ಮಾರುಕಟ್ಟೆಯನ್ನು ಉಳಿಸಲಿಕ್ಕೆ ವ್ಯವಸ್ಥೆ ಮಾಡಿ ನಮಗೆ ಅನುಕೂಲ ಮಾಡಿಕೊಡಬೇಕು. ಏಕೆಂದರೆ, ಇವತ್ತು ಎಲ್ಲಾ ಕಛೇರಿಗಳೂ ಕೂಡ ತಾಲ್ಲೂಕು ಕೇಂದ್ರ ಸ್ಥಾನದಲ್ಲಿರುವುದರಿಂದ, ಮಾರುಕಟ್ಟೆಯೂ ಕೂಡ ಇಲ್ಲಿಯೇ ಇರಬೇಕು. ಇದರಿಂದ ರೈತರು ಬೆಳೆದಂಥ ಎಲ್ಲಾ ಬೆಳೆಗಳನ್ನೂ ತಂದು ಮಾರುವುದಕ್ಕೆ ಒಂದು ಅವಕಾಶವಾಗುತ್ತದೆ. ಆದ್ದರಿಂದ, ದಯಮಾಡಿ ಆ ಚಿಕ್ಕನಾಯಕನಹಳ್ಳಿ ಮಾರುಕಟ್ಟೆಯನ್ನು ಅಲ್ಲಿಯೇ ಉಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಸದನದಲ್ಲಿ ಯಾವತ್ತು ಮಾರುಕಟ್ಟೆ ಸಚಿವರನ್ನು ನೋಡಿಲ್ಲ. ಆದ್ದರಿಂದ ಮಾನ್ಯ

ಕೃಷಿ ಸಚಿವರು ನಮ್ಮ ಮೇಲೆ ಅಭಿಮಾನವಿಟ್ಟು ಕೃಷಿ ಮಾರುಕಟ್ಟೆಯನ್ನು ನಮ್ಮಲ್ಲಿಯೇ ಉಳಿಸಿಕೊಡಬೇಕು. ಬೇಕಾದರೆ, ಹುಲಿಯೂರಿನಲ್ಲೂ ಮಾರುಕಟ್ಟೆ ಇರಲಿ. ಇದರ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳಬೇಕೆಂದು ಈ ಸದನದ ಮುಖಾಂತರ ಕೇಳುತ್ತೇನೆ. ಹಾಗೆಯೇ ಶ್ರೀರಂಗಪಟ್ಟಣ - ಹುಮ್ನಾಬಾದ್ ರಸ್ತೆ ಏನಿದೆ, ಅದು ಸಾಕಷ್ಟು ತಾಲ್ಲೂಕಗಳನ್ನು ಹಾದು ಹೋಗುವಂಥ ರಸ್ತೆ. ಆ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಮಾಡುವುದರ ಮುಖಾಂತರ 9-10 ತಾಲ್ಲೂಕಿಗಳಿಗೆ ಅನುಕೂಲ ಮಾಡಬೇಕು. ಮಾನ್ಯ ಲೋಕೋಪಯೋಗಿ ಸಚಿವರಾದ ಧರ್ಮಸಿಂಗ್‌ರವರು ದಯಮಾಡಿ ಶ್ರೀರಂಗಪಟ್ಟಣ ಹುಮ್ನಾಬಾದ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದರ ಮುಖಾಂತರ, ಮಧ್ಯೆ ಬರತಕ್ಕ ಎಲ್ಲಾ ತಾಲ್ಲೂಕಿನವರಿಗೂ ಅನುಕೂಲ ಮಾಡಿಕೊಡಬೇಕು. ಇದರಿಂದ ಸಾಕಷ್ಟು ವೇಳೆಯೂ ಉಳಿಯುತ್ತದೆ ಮತ್ತು ಬೇಗ ಹೋಗುವಂಥ ರಸ್ತೆಯಾಗುತ್ತದೆ. ದಯಮಾಡಿ, ಅದನ್ನು ರಾಷ್ಟ್ರೀಯ ಹೆದ್ದಾರಿಯೆಂದು ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಕೆ.ಪಿ.ಟಿ.ಸಿ.ಎಲ್. ಬಗ್ಗೆ ಹೇಳುವುದಾದರೆ, ಇವತ್ತು ಸಕಾಲಕ್ಕೆ ಸರಿಯಾಗಿ ಮಳೆ ಬರದೇ ಎಲ್ಲಾ ರೈತರು ಕಂಗಾಲಾಗಿದ್ದಾರೆ. ಜೊತೆಗೆ ಕೆ.ಇ.ಬಿನವರು ಮೀಟರ್ ಹಾಕಲಿ, ಅದರ ಬಗ್ಗೆ ಯಾರಿಗೂ ಕೂಡ ಎರಡನೇ ಅಭಿಪ್ರಾಯ ಇಲ್ಲ. ಏನು ಬಾಕಿ ಇದೆ ಅದನ್ನು ಮನ್ನಾ ಮಾಡಿ, ಇವತ್ತಿನಿಂದ ನಿಗದಿತ ಬೆಲೆಯನ್ನು ಬೇಕಾದರೆ ನಿಗದಿ ಮಾಡಿ. ಹಿಂದಿನ ಸರ್ಕಾರದವರು ಮನ್ನಾ ಮಾಡದೇ ಇದ್ದರೆ, ಎಲ್ಲಾ ರೈತರೂ ಕಟ್ಟಿಕೊಂಡು ಬರುತ್ತಿದ್ದರು. ಜೊತೆಗೆ ನೀವು ಎಷ್ಟು ಕರೆಂಟ್ ಕೊಡುತ್ತೀರಿ, ಯಾವ ವೋಲ್ಟೇಜ್‌ನಲ್ಲಿ ಕರೆಂಟ್ ಕೊಡುತ್ತೀರಿ ಎನ್ನುವುದನ್ನೂ ಕೂಡ ಘೋಷಣೆ ಮಾಡಬೇಕು. ಮತ್ತು ನಿಮಗೆ ಇಷ್ಟು ಹಣವನ್ನು ವಿಧಿಸುತ್ತೇವೆಂಬುದನ್ನೂ ಕೂಡ ಸರ್ಕಾರ ಘೋಷಣೆ ಮಾಡಬೇಕು. ಇದನ್ನು ರೈತರು ಯಾರೂ ಕೂಡ ಕಟ್ಟುವುದಕ್ಕೆ ಹಿಂಜರಿಯುವುದಿಲ್ಲ. ಆದ್ದರಿಂದ, ಇವತ್ತು ಎಷ್ಟು ಗಂಟೆಗಳ ಕಾಲ ಕರೆಂಟ್ ಕೊಡುತ್ತೇವೆಂಬುದನ್ನು ಘೋಷಣೆ ಮಾಡಬೇಕು. ಇನ್ನು ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ವ್ಯಾಪಕವಾಗಿ ಕಂಬಳಿ ಮಾಡುತ್ತಿದ್ದೇವೆ. ಮೊದಲು ಮಲೆನಾಡಿನವರು ಈ ಕಂಬಳಿಗಳನ್ನು ಉಪಯೋಗಿಸುತ್ತಿದ್ದರು. ಆದರೆ, ಈಗ ರಗ್ಗುಗಳೇ 100-150 ರೂಪಾಯಿಗಳಿಗೆ ಸಿಗುವ ಸಂಭವ ಬಂದಿರುವುದರಿಂದ ಈ ಕಂಬಳಿ ವ್ಯಾಪಾರ ತುಂಬಾ ನಿಂತು ಹೋಗಿದೆ. ಇದಕ್ಕೆ ಸರ್ಕಾರ ಏನಾದರೊಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ರೇಷ್ಮೆ ಬಟ್ಟೆಯನ್ನೂ ಕೂಡ ನಮ್ಮ ಕಡೆ ಸಾಕಷ್ಟು ನೇಯುತ್ತಾರೆ. ಸೀರೆಗಳು ಮತ್ತು ಬೇರೆ ಬೇರೆ ಬಟ್ಟೆಗಳನ್ನು ಮಾಡುತ್ತಾರೆ. ಅದಕ್ಕೂ ಕೂಡ ಒಳ್ಳೆಯ ಬೆಲೆ ಇಲ್ಲ. ಹೊರಗಡೆಯಿಂದ ಬರತಕ್ಕ ಬಟ್ಟೆಯನ್ನೇ ಜನ ಉಪಯೋಗಿಸುವುದರಿಂದ ಇವತ್ತು ಅವರಿಗೂ ಕೂಡ ಸಾಕಷ್ಟು ಬೇಡಿಕೆ ಇಲ್ಲ. ಅದಕ್ಕೂ ಸರ್ಕಾರ ಏನಾದರೊಂದು ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಸಾಯಂಕಾಲ 6 ಗಂಟೆಗೆ ಕಾವೇರಿ ಜಲಾನಯನಕ್ಕೆ ಸಂಬಂಧಿಸಿದ ಮೀಟಿಂಗ್ ಇದೆ. ಆದಕ್ಕೋಸ್ಕರ, ಸಭೆಯನ್ನು ಮುಗಿಸಬೇಕಾಗಿದೆ. ಇವತ್ತೇ ಚರ್ಚೆಯನ್ನು ಮುಗಿಸಬೇಕು. ಬಹುಶ: ಸೋಮವಾರ ಸರ್ಕಾರದವರು ಉತ್ತರ ಕೊಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಆ ಮೀಟಿಂಗ್‌ಗೆ ಸಂಬಂಧಪಟ್ಟಂತೆ ನಮ್ಮ ಪಾರ್ಟಿಯವರೆಲ್ಲೂ ಹೋಗಿದ್ದಾರೆ. ತಾವು ಬೇಕಾದರೆ ವೆರಿಫೈ ಮಾಡಬಹುದು. ಆದಕಾರಣ 10-10 ನಿಮಿಷಗಳ ಕಾಲ ಎರಡು ಜನರಿಗೆ ಕೊಟ್ಟು, 6.30ಕ್ಕೆ ನಾವು ಕ್ಲೋಸ್ ಮಾಡೋಣ.

ಉಪಾಧ್ಯಕ್ಷರು :— 6 ಗಂಟೆಗೆ ಆ ಸಭೆಗೆ ಕೆಲವು ಮಂತ್ರಿಗಳು ಹೋಗುವವರಿದ್ದಾರೆ. ಆದಕ್ಕೋಸ್ಕರ ನಾವು 6 ಗಂಟೆಗೆ ಮುಗಿಸಬೇಕು ಎನ್ನುವ ವಿಚಾರವನ್ನು ಹೇಳಿದೆ.

ಶ್ರೀ ಡಿ.ವಿ. ಸದಾನಂದಗೌಡ :— ಹಾಗದರೆ ಸೋಮವಾರ ಬೆಳಗ್ಗೆ ನಮ್ಮ ಕಡೆಯ ಎರಡು ಜನರಿಗೆ ಮಾತನಾಡಲು ಅವಕಾಶ ಕೊಡಿ

ಉಪಾಧ್ಯಕ್ಷರು :— ಇಲ್ಲಾ, ಇವತ್ತೇ ಮುಗಿಸಬೇಕೆಂದು ಇದೆ. ಬೇಕಾದರೆ ಇನ್ನೊಂದು ಹತ್ತು ನಿಮಿಷ ನಾನು ಕುಳಿತುಕೊಳ್ಳುತ್ತೇನೆ. ಇವತ್ತೇ ಮುಗಿಸಬೇಕು, ಸೋಮವಾರ ಸರ್ಕಾರದ ಕಡೆಯಿಂದ ಉತ್ತರ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೇ, ನನ್ನದೊಂದು ಸಲಹೆ ಇದೆ. ಸೋಮವಾರ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ. ತದನಂತರ ಉಳಿದ ವಿಷಯಗಳನ್ನು ಪಾಸ್ ಮಾಡಿಕೊಡುವ ಭರವಸೆಯನ್ನು ನಾವು ಮತ್ತು ವಿರೋಧ ಪಕ್ಷದ ನಾಯಕರು ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ನನ್ನ ಮನವಿ ತಮ್ಮಲ್ಲಿ ಏನೆಂದರೆ ಕೆಲವರು ಹೊಸ ಸದಸ್ಯರು ಮಾತನಾಡುವವರಿದ್ದಾರೆ. ನಾವು ಮುಂದಿನ ಸಾಲಿನಲ್ಲಿ ಕುಳಿತವರು ಬಜೆಟ್ ಬಗ್ಗೆ ಮಾತನಾಡತಕ್ಕಂಥಾದ್ದು ಇದ್ದರೂ ಸಹ ನಾನು ಮತ್ತು ಸೋಮಶೇಖರ್‌ರವರು ಬಿಟ್ಟರೆ ಯಾರೂ ಮಾತನಾಡಲಿಲ್ಲ ಎಂಬುದು ತಮಗೆ ಗೊತ್ತಿದೆ. ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಂತಹ ಶಾಸಕರು ಎಲ್ಲರೂ ಸಭೆಗೆ ಹೋಗಿದ್ದಾರೆ. ಹೋಗದೇ ಇರುವವರು ನಾನು ಮತ್ತು ಕೃಷಿ ಇಲಾಖೆ ಮಂತ್ರಿಗಳು ಇಬ್ಬರೇ. ಇನ್ನುಳಿದ 4-5 ಜನ ಮಾತ್ರ. ಅವರು 10 ನಿಮಿಷ ಮಾತನಾಡುತ್ತಾರೆ. ನಾವು ಅರ್ಧ ಗಂಟೆ ಕುಳಿತುಕೊಳ್ಳೋಣ. ನಮ್ಮ ಪತ್ರಿಕಾ ಮಿತ್ರರಿಗೆ ತೊಂದರೆಯಾಗುತ್ತದೆ. ಇವತ್ತು ಒಂದು ದಿನ ಸಹಕಾರ ಕೊಡುವುದಕ್ಕೆ ತಾವು ಮನವಿ ಮಾಡಿಕೊಳ್ಳಿ.

ಉಪಾಧ್ಯಕ್ಷರು :— ನನ್ನದೇನೂ ತಕರಾರು ಇಲ್ಲ. 8-00 ಗಂಟೆಯವರೆಗೂ ನಾನು ಕುಳಿತುಕೊಳ್ಳುವುದಕ್ಕೆ ರೆಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಈಗ ಮಾನ್ಯ ಗುರುಸ್ವಾಮಿಯವರು ಚಾಮರಾಜನಗರದಿಂದ ಚುನಾಯಿತರಾಗಿ ಬಂದಿದ್ದಾರೆ. ಕಳೆದ ಅಧಿವೇಶನದಲ್ಲಿ ಚಾಮರಾಜನಗರದ ಮಾಜಿ ಶಾಸಕರ ಹೆಸರು ಪ್ರತಿದಿನ ಪತ್ರಿಕೆಗಳಲ್ಲಿ ಬರುತ್ತಿತ್ತು. ಈಗ ಅವರ ಹೆಸರು ಪತ್ರಿಕೆಗಳಲ್ಲಿ ಬರದಿದ್ದರೆ ಅವರ ಕ್ಷೇತ್ರದಲ್ಲಿ ಅವರ ಪರಿಸ್ಥಿತಿ ಏನಾಗುವುದಿಲ್ಲ? ಏನಪ್ಪ ನಮ್ಮ ಶಾಸಕರು ಮಾತನಾಡುವುದೇ ಇಲ್ಲವಲ್ಲಾ ಎಂದು ಜನ ಹೇಳುತ್ತಾರೆ. ಅದಕ್ಕೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಬೇಕಾಗಿದೆ. ಈಗ ಈ ಸದನದಲ್ಲಿ ಶೇಕಡ 90 ಭಾಗದಷ್ಟು ಸದಸ್ಯರು ಇಲ್ಲ. ಮಾನ್ಯ ಸದಸ್ಯರು ಸಲಹೆ ಕೊಟ್ಟು ಆಗಿದೆ. ಆದ್ದರಿಂದ ಸದನವನ್ನು 6-00 ಗಂಟೆಗೆ ಮುಗಿಸುವುದು ಸೂಕ್ತ. ಮತ್ತು ಬಜೆಟ್ ಬಗ್ಗೆ ಸದಸ್ಯರು ವಿಷಯ ಸಮಿತಿ ಸಭೆಯಲ್ಲಿ ಅಧಿಕಾರಿಗಳ ಜೊತೆ ಸಾಕಷ್ಟು ಚರ್ಚೆ ಮಾಡಿ ವರದಿ ಕೊಟ್ಟಿದ್ದಾರೆ.

+ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :— ಮಾನ್ಯ ಅಧ್ಯಕ್ಷರೇ, ನಾನು ಕೆಲವು ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಬಯಸುತ್ತೇನೆ. ಪ್ರಮುಖವಾಗಿ ಕೃಷಿ ಮತ್ತು ತೋಟಗಾರಿಕೆ ಹಾಗೂ ನೀರಾವರಿ ಬಗ್ಗೆ ಮಾತನಾಡುತ್ತೇನೆ. ಇವತ್ತು ಕೃಷಿ ಬಗ್ಗೆ ಈ ಸದನದಲ್ಲಿ ಹಲವಾರು ಹಿರಿಯ ಸದಸ್ಯರು ಮಾತನಾಡಿದ್ದಾರೆ. ಇವತ್ತಿನ ಅಂತರರಾಷ್ಟ್ರೀಯ ಮಾರುಕಟ್ಟೆಯ ಒಂದು ಒಪ್ಪಂದದ ಹಿನ್ನಲೆಯಲ್ಲಿ ನಾವು ನಮ್ಮ ರಾಜ್ಯವನ್ನು ಹೇಗೆ ತೆಗೆದುಕೊಂಡು ಹೋಗಬೇಕು ಎನ್ನುವ ವಿಚಾರದಲ್ಲಿ ಬಹಳಷ್ಟು ವಿಚಾರಗಳನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಮಾನ್ಯ ಕೃಷಿ ಇಲಾಖೆ ಸಚಿವರೂ ಸಹ ಸದನದಲ್ಲಿ ಇದ್ದಾರೆ. ಅದಕ್ಕೆ ನಾನು ಸಂತೋಷವನ್ನು ವ್ಯಕ್ತಪಡಿಸಿ, ಈ ವರ್ಷ ಮುಂಗಾರು ವಿಫಲವಾಗಿರುವುದರಿಂದ ರೈತ ಅತ್ಯಂತ ಸಂಕಷ್ಟದಲ್ಲಿದ್ದಾನೆ. ಕೃಷಿ ಉತ್ಪಾದನೆ ಕುಂಠಿತಗೊಂಡಿದೆ. 1999-2000 ವರದಿಯನ್ನು ನಾವು ನೋಡಿದರೆ 99.42 ಲಕ್ಷ ಟನ್ ಆಹಾರ ಉತ್ಪಾದನೆಯಾಗಿದೆ. ಆದರೆ 2001-2002ರಲ್ಲಿ 96.32 ಲಕ್ಷ ಟನ್ ಉತ್ಪಾದನೆಯಾಗಿದೆ. ಅಂದರೆ 3 ಲಕ್ಷ ಟನ್ ಆಹಾರ ಉತ್ಪಾದನೆ ಕುಂಠಿತಗೊಂಡಿದೆ ಎಂದು ಹೇಳಿ ಈ ವರದಿ ಮೂಲಕ ನಮಗೆ ಕಂಡು ಬರುತ್ತದೆ. ಇದರ ಆರ್ಥಿಕ ನಷ್ಟ ಅಂದಾಜು ಎಷ್ಟು ಆಗಿದೆ ಅಂದರೆ ನಾನು ಈ ಮಾಹಿತಿಯನ್ನು ಪ್ರಜಾವಾಣಿಯಲ್ಲಿ ಬಂದಿರುವ ವರದಿ ಆಧಾರದ ಮೇಲೆ ಮಾತನಾಡುವುದಾದರೆ 2500 ಕೋಟಿ ರೂ. ನಮ್ಮ ರಾಜ್ಯಕ್ಕೆ ಕೃಷಿ ಉತ್ಪಾದನೆ ಕುಂಠಿತದಿಂದ ನಷ್ಟವಾಗಿದೆ ಎನ್ನುವ ವರದಿಯನ್ನು ನೋಡುತ್ತಿದ್ದೇವೆ. ಈ ಹಿನ್ನಲೆಯಲ್ಲಿ ನಾವು ಕೃಷಿಯನ್ನು ಹೇಗೆ ಬದುಕಿಸಬೇಕು? ನಾವು ಬಹುಪಾಲ ಜನ ಕೃಷಿಗೆ ಒಳಪಟ್ಟವರು. ಮತ್ತು ಬಲುಪಾಲು ಪ್ರದೇಶ ಮಳೆಯನ್ನು ಅವಲಂಬಿತ ಪ್ರದೇಶವಾಗಿರುವುದರಿಂದ ಕೃಷಿಯನ್ನು ಹೇಗೆ ತೆಗೆದುಕೊಂಡು ಹೋಗಬೇಕು ಎನ್ನುವ

ಬಗ್ಗೆ ಯೋಚನೆ ಮಾಡಬೇಕಾಗಿದೆ ನಿನ್ನೆ ಶರದ್‌ಜೋಷಿಯವರು ಬಂದಾಗ ಹಿರಿಯ ಸದಸ್ಯರು ಮತ್ತು ಮಂತ್ರಿಗಳು ಹೋಗಿ ನಾವು ಹೇಗೆ ಒಕ್ಕಲುತನ ಮಾಡಬೇಕು? ಈ ಕೃಷಿಯಲ್ಲಿ ಯಾವ ತರಹ ಆಮದು ಮತ್ತು ರಫ್ತು ಮಾಡಬೇಕೆನ್ನುವ ಬಗ್ಗೆ ವಿಚಾರಗಳೂ ಸಹ ನಡೆದವು. ನಮ್ಮಲ್ಲಿ ಏನಾಗಿದೆ ಅಂದರೆ ಶೇಕಡ 70 ರಷ್ಟು ಸಣ್ಣ ಹಿಡುವಳಿದಾರರು ಇದ್ದಾರೆ. ಮುಂದುವರೆದ ರಾಷ್ಟ್ರದಲ್ಲಿ ಶೇಕಡ 2 ಪರ್ಸೆಂಟ್ 5 ಪರ್ಸೆಂಟ್ 7 ಪರ್ಸೆಂಟ್ ಕೃಷಿಯನ್ನು ಮಾಡುತ್ತಾರೆ. ಹೀಗಾಗಿ ಅವರು ಅಲ್ಲಿ ಆರ್ಥಿಕ ಒತ್ತು ಕೊಡುವುದಕ್ಕೆ ಸಾಧ್ಯತೆ ಇದೆ. ನಾವು ಇವತ್ತಿನ ವಾತಾವರಣವನ್ನು ಆಲೋಚನೆ ಮಾಡಿದರೆ ಕೃಷಿಯನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಲು ಆಲೋಚನೆ ಮಾಡಿದ್ದಾರೆಂದು ನಾನು ಕೇಳಬಯಸುತ್ತೇನೆ. ಏಕೆಂದರೆ ಇವತ್ತು ನಮ್ಮಲ್ಲಿ ಮುಂಗಾರು ವಿಫಲವಾಗಿದೆ. ನಮ್ಮಲ್ಲಿ ಮೊದಲು ವಾಯುಮಾನ ವರದಿ ಹೇಳಿತ್ತು ಈ ಸಾರಿ ನಮ್ಮಲ್ಲಿ ಮಾನ್‌ಸೂನ್ ಬಹಳ ಚೆನ್ನಾಗಿ ಆಗುತ್ತದೆಂದು. ಮತ್ತು ರೈತರು ಒಳ್ಳೆಯ ಕೃಷಿ ಉತ್ಪನ್ನ ತೆಗೆಯುತ್ತಾರೆಂದು ವರದಿ ಆಗಿತ್ತು. ಆದರೆ ಏನಾಯಿತು? ಮುಂದೆ ಸಹ ಮಳೆ ಅವಲಂಬಿತ ಪ್ರದೇಶದಲ್ಲಿ ಆ ರೈತ ಮುಂದೆ ಯಾವ ಗುರಿಯನ್ನಿಟ್ಟುಕೊಳ್ಳಬೇಕೆನ್ನುವುದು ಕೂಡ ಕೃಷಿ ಲಾಖೆ ಮಂತ್ರಿಗಳು ಆಲೋಚನೆ ಮಾಡಬೇಕಾಗಿದೆ. ನಮ್ಮ ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಇಸ್ರೇಲ್ ಬಗ್ಗೆ ಮಾತನಾಡುವುದನ್ನು ನಾನು ಕೇಳಿದ್ದೇನೆ. ನಾನು ಇಸ್ರೇಲ್‌ಗೇ ಭೇಟಿ ಕೊಟ್ಟಿಲ್ಲ. ಆದರೆ ಅಲ್ಲಿ ಎಷ್ಟು ಪ್ರಮಾಣದ ವಾಟರ್ ಸೋರ್ಸ್ ಇದೆ. ಮತ್ತು ಅಲ್ಲಿನ ಭೂಮಿಯ ಗುಣಧರ್ಮ ಏನು ಇದೆ. ಅಲ್ಲಿ ಯಾವ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿದೆ, ಅವರು ರಫ್ತು ಮಾಡಬೇಕಾದರೆ ಗುಣಮಟ್ಟದ ಬೆಳೆಯನ್ನು ಬೆಳೆಯದಿದ್ದರೆ ನಮ್ಮ ಬೆಳೆಯ ಫಸಲು ರಿಜೆಕ್ಟ್ ಆಗುತ್ತದೆ. ಆಗ ಆ ರೈತ ಕೂಡ ಸಂಕಷ್ಟದಲ್ಲಿ ಬರುತ್ತಾನೆ. ಅದಕ್ಕೆ ಅವರ ಮಾದರಿಯ ಒಂದ ಚಿತ್ರಣವನ್ನು ಮುಂದಿನ ದಿನಗಳಲ್ಲಿ ಇಲ್ಲಿ ಹಾಕಿಸಿಕೊಂಡಿದ್ದೀರಾ ಹೇಗೆ? ಏಕೆಂದರೆ ನಾವು ಅದರಿಂದ ಹಿಂದೆ ಬರುವುದಕ್ಕೆ ಆಗುತ್ತಿಲ್ಲ. ಕಾರಣ ಗ್ಯಾಟ್ ಒಪ್ಪಂದದಿಂದ ಇರಬಹುದು ಅಥವಾ ಅಂತರರಾಷ್ಟ್ರೀಯ ಮಾರುಕಟ್ಟೆಯ ವ್ಯಾಪ್ತಿಯಿಂದ ಹಿಂದೆ ಸರಿಯುವುದಕ್ಕೆ ಆಗುತ್ತಿಲ್ಲ. ಅದಕೋಸ್ಕರವಾಗಿ ಪೂರಕವಾಗಿ ರೈತರಿಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಕೃಷಿಯನ್ನು ನಾವು ಉದ್ದಿಮೆಯನ್ನಾಗಿ ಪರಿಗಣಿಸಿಲ್ಲ. ಆದರೆ ಇವತ್ತು ಸುಮಾರು 70 ಉದ್ದಿಮೆಗಳು ನಷ್ಟದಲ್ಲಿವೆ. ಅದಕ್ಕೆ ನಾವು ಎಷ್ಟು ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದೇವೆ? ಆದರಿಂದ ನಮಗೆ ಇವತ್ತು ಏನು ಹಾನಿಯಾಗಿದೆ. ಆ ರೀತಿ ನಮ್ಮ ಕೃಷಿಗೆ ಒತ್ತು ಕೊಡುವಂತಹ ಕೆಲಸ ಆಗಿಲ್ಲ. ಆ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇನ್ನು ಗುಣ ಮಟ್ಟದ ಬಿತ್ತನೆ ಬೀಜಗಳು ದೊರೆಯದೆ ಕಳಪೆ ಗುಣಮಟ್ಟದ ಬೀಜಗಳಿಂದ ರೈತನಿಗೆ ಹಾನಿಯಾಗುತ್ತದೆ. ಈ ಬೀಜಗಳನ್ನು ಸರಬರಾಜು ಮಾಡಿದಂತಹ ಬೀಜ ನಿಗಮದವರು ಇರಬಹುದು, ಖಾಸಗಿಯವರು ಇರಬಹುದು ಅವರ ಮೇಲೆ ನಿಮ್ಮ

ಹತೋಟಿ ಏನು ಇದೆ. ಅವರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವಂತಹ ಕೆಲಸ ಸರ್ಕಾರದಿಂದ ಆಗಬೇಕು. ಆ ರೀತಿ ಆದರೆ ಮಾತ್ರ ರೈತ ತನ್ನ ಬದುಕನ್ನು ಹಸನು ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಆ ದಿಕ್ಕಿನಲ್ಲಿ ತಾವು ಚಿಂತನೆ ಮಾಡುತ್ತೀರೆಂದು ನಾನು ಆಶಿಸುತ್ತೇನೆ. ಇನ್ನು ಬೆಳೆಯ ಬೆಲೆ ಕುಸಿತವಾದಾಗ, ಪ್ರಕೃತಿಯ ವಿಕೋಪ, ಬೆಳೆಗೆ ಬೆಂಕಿ ಬಿದ್ದಾಗ ಇದಕ್ಕೆ ಸರ್ಕಾರ ಏನು ನೆರವು ಕೊಡುತ್ತದೆ? ಈಗ ನಮ್ಮ ಮಾನ್ಯ ಲಮಾಣಿಯವರು ಒಂದು ಮಾತನ್ನು ಹೇಳಿದರು. ಇವತ್ತು ಬಣವಿ ಸುಟ್ಟರೆ ಅಥವ ರೈತನ ಫಸಲು ಸುಟ್ಟರೆ ಅದಕ್ಕೆ 500 ರೂಪಾಯಿಗಳನ್ನು ಕೊಡತಕ್ಕಂಥ ಒಂದು ಕಾನೂನು ವ್ಯವಸ್ಥೆ ಇದೆ. ಈ ಕಾನೂನನ್ನು ಮಾರ್ಪಾಡು ಮಾಡಬೇಕಾಗುತ್ತದೆ. ರೈತ ಜಾನುವಾರುಗಳಿಗೆ ಒಂದು ವರ್ಷದ ಬಣವೆ ಏನು ಇಟ್ಟುಕೊಂಡಿರುತ್ತಾನೆ ಅದು ಸುಟ್ಟು ಹೋದರೆ ಅದಕ್ಕೆ ತಾವು 500 ರೂಪಾಯಿ ಕೊಡುತ್ತೀರಿ. ಅದು ಏನೇನೂ ಸಾಲದು ಅದನ್ನು ಎರಡು ಸಾವಿರ ರೂಪಾಯಿಗಳಿಗೆ ಏರಿಸತಕ್ಕಂಥ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಆ ಕೆಲಸ ಸರ್ಕಾರ ಮಾಡಬೇಕೆಂದು ನಾನೂ ಸಹ ಇಚ್ಛೆಪಡುತ್ತೇನೆ. ಇದೂ ಅಲ್ಲದೆ ರೈತರಿಗೆ ಇರತಕ್ಕಂಥ ವಾಣಿಜ್ಯ ಬೆಳೆಗಳು ಹತ್ತಿ, ಶೇಂಗಾ, ಸೂರ್ಯಕಾಂತಿ ಈ ಎಲ್ಲಾ ಬೆಳೆ ವಿಫಲವಾಗಿದೆ. ಹತ್ತಿಯ ಬಗ್ಗೆ ನಾವು ಯೋಚನೆ ಮಾಡಿದರೆ ಈ ಬೆಳೆಗೆ ಬರುವ ರೋಗಕ್ಕೆ ನಾವು ಉಪಯೋಗ ಮಾಡುವ ಕೀಟನಾಶಕಗಳ ಔಷಧಿ ಶೇಕಡ 50ಕ್ಕಿಂತ ಹೆಚ್ಚು ಉಪಯೋಗ ಮಾಡುತ್ತೇವೆ. ಇದರಿಂದ ಪರಿಸರಕ್ಕೂ ಕೂಡ ತೊಂದರೆಯಾಗುತ್ತದೆ. ಪರಿಸರ ಮಾಲಿನ್ಯ ಕೂಡ ಆಗುತ್ತದೆ. ಇಷ್ಟು ಹಣ ರೈತ ಕೀಟನಾಶಕಗಳಿಗೆ ಖರ್ಚು ಮಾಡಿದರೆ ರೈತ ಎಲ್ಲಿ ಉಳಿಯಲು ಸಾಧ್ಯವಾಗುತ್ತದೆ? ಅದು ಬಿಟ್ಟು ಇನ್ನು ಯಾವ ಬೆಳೆ ಮಾಡಬೇಕು. ಆರ್ಥಿಕ ಬೆಳೆ ಅಂದರೆ ಹತ್ತಿ, ಶೇಂಗಾ, ಸೂರ್ಯಕಾಂತಿ, ಅದನ್ನು ಮಾಡುವುದಕ್ಕೆ ಆಗುತ್ತಿಲ್ಲ, ಈ ಕಡೆ ತೆಂಗು ಬೆಳೆಯುತ್ತಾರೆ, ತೆಂಗುಬೆಳೆಗೆ ಯಾವ ಯಾವ ರೋಗ ಬರುತ್ತದೆಂದು ನಮ್ಮ ಮಾನ್ಯ ಸುರೇಶ್ ಬಾಬುರವರು ಮಾತನಾಡುತ್ತಾ ಹೇಳಿದರು, ಅದು ಕಪ್ಪುತಲೆ ಹುಳ ಇರಬಹುದು, ನುಸಿರೋಗ ಇರಬಹುದು, ಹೀಗೆ ಮುಖ್ಯವಾದ ಎಲ್ಲಾ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಅದಕ್ಕೆ ರೀಸರ್ಚ್ ಏನು ಇದೆ? ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಮತ್ತು ಕೃಷಿ ಪದವಿಯನ್ನು ಪಡೆದುಕೊಂಡಂತಹವರನ್ನು ಎಲ್ಲಿಗೆ ಕಳುಹಿಸುತ್ತಿದ್ದೀರಿ? ಮತ್ತು ಅದಕ್ಕೆ ಹಣಕಾಸಿನ ನೆರವು ಕೊಡಲಿಕ್ಕೆ ತಾವೇನು ಇಚ್ಛೆಪಟ್ಟಿದ್ದೀರಿ? ಈ ಕೆಲಸ ಇವತ್ತು ಸರ್ಕಾರದಿಂದ ಆಗಬೇಕಾಗಿದೆ. ಇರತಕ್ಕಂಥ ಅಲ್ಪಸ್ವಲ್ಪ ನೀರಿನಲ್ಲಿ ಮುಖ್ಯವಾದ ಬೆಳೆಗಳನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಇವತ್ತು ಯಾವ ಆಧಾರದ ಮೇಲೆ ಹಳ್ಳಿಗಾಡಿನ ಜನಜೀವನ ನಡೆಯುತ್ತಿದೆ. ಇವತ್ತು ಬೇರೆ ಉದ್ದಿಮೆಗಳಲ್ಲಿ ಕೆಲಸ ಮಾಡೋಣವೆಂದರೂ ಆ ಉದ್ದಿಮೆಗಳೂ ಸಹ ಕುಂಠಿತಗೊಂಡಿವೆ. ಆದ್ದರಿಂದ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚಿನ ಹಣಕಾಸಿನ ನೆರವು ಕೊಡುವಂತಹ ಕೆಲಸ ಆಗಬೇಕು.

ನಾನು ಕೊಪ್ಪಳದ್ದು ಒಂದು ಉದಾಹರಣೆ ಹೇಳಬೇಕೆಂದರೆ ಮೊನ್ನೆ ಮಾನ್ಯ ಖರ್ಗೆಯವರು ಹೇಳಿದರು. ಉತ್ತರ ಕರ್ನಾಟಕದಲ್ಲಿ ಕ್ಲಾಸ್‌ಗಳನ್ನು ಮಾಡಿದರು. ಹುಬ್ಬಳ್ಳಿ ಧಾರವಾಡ ಭಾಗ 'ಎ' ಕ್ಲಾಸ್. ಬಿಜಾಪುರ, ಬಾಗಲಕೋಟೆ 'ಬಿ' ಕ್ಲಾಸ್. ಗುಲ್ಬರ್ಗ 'ಸಿ' ಬೀದರ್ 'ಡಿ' ಕ್ಲಾಸ್; ಹೀಗೆ ಕೊಪ್ಪಳ ಮತ್ತು ಮುಂಡರಗಿ ನಾವು 'ಇ' ಕ್ಲಾಸ್‌ನಲ್ಲಿದ್ದೇವೆ. ಅದಕ್ಕೆ ತಾವು ಪ್ರಾದೇಶಿಕ ಅಸಮತೋಲನೆಯನ್ನು ಕಾಪಾಡಬೇಕಾಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ಕಳೆದ ತಿಂಗಳು 7ನೇ ತಾರೀಖು. ನಮಗೆ ಜಿಲ್ಲಾ ಕೇಂದ್ರ ಮಾಡಿಕೊಟ್ಟಿದ್ದೀರಿ ನಮಗೆ ಡಿಗ್ರಿ ಕಾಲೇಜು ಬೇಕು ಎಂದು ಅಲ್ಲಿ ವಿದ್ಯಾರ್ಥಿಗಳು ಹೋರಾಟ ಮತ್ತು ಧರಣಿ ಮಾಡಿದರು. 300 ಜನ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಸಿಕ್ಕಿಲ್ಲ ಎಂಬುದನ್ನು ಅವತ್ತು ಮಾನ್ಯ ಕಂದಾಯ ಮಂತ್ರಿಗಳು ಒಪ್ಪಿಕೊಂಡಿದ್ದರು. ನಮ್ಮ ಜಿಲ್ಲಾ ಮಂತ್ರಿಗಳು ಮತ್ತು ಎಲ್ಲಾ ಶಾಸಕರನ್ನು ಕರೆದುಕೊಂಡು ಹೋಗಿ ವಿಷಯ ಹೇಳಿ ಕಾಲೇಜನ್ನು ಮಂಜೂರು ಮಾಡಿಸುತ್ತೇನೆಂದು ಹೇಳಿದರು. ಇದುವರೆಗೂ ಆಗಲಿಲ್ಲ. ಎಲ್ಲಿ ನೀವು ಪ್ರಾದೇಶಿಕ ಅಸಮತೋಲನೆಯನ್ನು ಕಡಿಮೆ ಮಾಡುತ್ತೀರಿ? ಈ ವರ್ಷದಲ್ಲಿ ಮಂಡ್ಯ ಜಿಲ್ಲೆಗೆ ಒಂದು ಡಿಗ್ರಿ ಕಾಲೇಜನ್ನು ಕೊಟ್ಟಿದ್ದೀರಿ. ಹುಬ್ಬಳ್ಳಿಯಲ್ಲಿ ಒಂದು ಸರ್ಕಾರಿ ಡಿಗ್ರಿ ಕಾಲೇಜು ಕೊಟ್ಟಿದ್ದೀರಿ. ಎಲ್ಲಿ ಮುಂದುವರಿದಿದೆ ಅಲ್ಲಿಯೇ ಹೆಚ್ಚು ಹೆಚ್ಚು ಅಭಿವೃದ್ಧಿ ಮಾಡುವಂತಹ ಪರಿಸ್ಥಿತಿಯಾಗಿದೆ. ನಾವು ಇಂಬ್ಯಾಲೆನ್ಸ್ ಎಂದು ಬರೀ ಬಾಯಿಂದ ಮಾತ್ರ ಹೇಳುತ್ತೇವೆ. ಆದರೆ ಅದು ನಿಜವಾಗಿಯೂ ಕಾರ್ಯಗತವಾಗುತ್ತಿಲ್ಲ. ಕೊಪ್ಪಳಕ್ಕೆ ಸರ್ಕಾರಿ ಡಿಗ್ರಿ ಕಾಲೇಜು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ವಿದ್ಯಾಮಂತ್ರಿಗಳಾದ ಎಚ್. ವಿಶ್ವನಾಥ್‌ರವರೂ ಸಹ ಆ ಭಾಗದಲ್ಲಿ ಒಂದು ಕಾಂತ್ರಿಕಾರಕವಾದ ಹೆಜ್ಜೆಯನ್ನು ಇಟ್ಟಿದ್ದಾರೆ. ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ನಮಗೆ ಈಗ ಶೈಕ್ಷಣಿಕವಾಗಿ ಸ್ವಾತಂತ್ರ ಬಂದಿದೆ ಎಂದು ಅನ್ನಿಸುತ್ತದೆ. ಡ್ರಾಪ್ ಔಟ್ ಆದ ಮಕ್ಕಳು ಇರಬಹುದು, ಮತ್ತು ಅಲ್ಲಿನ ವಿದ್ಯಾಭ್ಯಾಸದ ಮಟ್ಟ ಇರಬಹುದು, ಎಷ್ಟು ಜನ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎನ್ನುವ ಒಂದು ಸರ್ವೆ ಮಾಡಿಸಿ ಆ ಭಾಗಕ್ಕೆ ವಿಶೇಷವಾಗಿ ಹೈಸ್ಕೂಲ್‌ಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಮತ್ತು ಅಲ್ಲಿಗೆ ಕಾಲೇಜುಗಳನ್ನು ಕೊಡತಕ್ಕಂಥ ಕಾರ್ಯಕ್ರಮ, ಶಿಕ್ಷಕರನ್ನು ತುಂಬತಕ್ಕಂಥ ಕಾರ್ಯಕ್ರಮ, ಮತ್ತು ನಬಾರ್ಡ್ ಯೋಜನೆಯಲ್ಲಿ ಶಾಲೆಗೆ ಮೂಲಭೂತ ಸೌಲಭ್ಯಗಳನ್ನು ಕೊಡತಕ್ಕಂಥ ಕಾರ್ಯಕ್ರಮ, ಇವು ಬಹಳ ಚೆನ್ನಾಗಿ ಮಾಡಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಇಂತಹ ಕೆಲಸ ಮಾಡುವುದಕ್ಕೆ ಶಕ್ತಿ ಕೊಡಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅದರಲ್ಲೂ ಕೊಪ್ಪಳಕ್ಕೆ ವಿಶೇಷವಾಗಿ ಒಂದು ಹೈಸ್ಕೂಲ್ ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ತಾವು ಕ್ಷೇತ್ರವಾರು ಹೈಸ್ಕೂಲ್ ಕೊಟ್ಟಿದ್ದೀರಿ. ವಿರೋಧಪಕ್ಷದ ಶಾಸಕರು ಇದ್ದಾರೆಂದು ತಾವು ಈ ರೀತಿ ಮಾಡುತ್ತಿದ್ದೀರೋ ಏನೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಮ್ಮನ್ನು ಜನ ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ಜನರ ಬದುಕಿನ ಹಿನ್ನಲೆಯಲ್ಲಿ

ನಾವು ಕೆಲಸ ಮಾಡಬೇಕಾಗಿದೆ. ಶೈಕ್ಷಣಿಕವಾಗಿ ನಾವು ನಮ್ಮ ಮಕ್ಕಳನ್ನು ಓದಿಸಬೇಕಾಗಿದೆ. ನಮಗೆ ಒಂದು ಹೈಸ್ಕೂಲ್ ಕೊಟ್ಟಿದ್ದಾರೆ. ಮಂತ್ರಿಗಳು ಇರುವ ಕ್ಷೇತ್ರದಲ್ಲಿ 3-4 ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ಕುಷ್ಟಗಿಯಲ್ಲಿ ಎರಡು ಕೊಟ್ಟಿದ್ದಾರೆ. ಈ ರೀತಿ ತಾರತಮ್ಯವಾದರೆ ನಾವು ಯಾವ ರೀತಿ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯ? ತಾವು ಬೇರೆ ತಾಲ್ಲೂಕುಗಳಿಗೆ ಕೊಟ್ಟ ಹಾಗೆ ನಮಗೂ ಹೈಸ್ಕೂಲ್ ಕೊಡಬೇಕಾಗುತ್ತದೆ. ಇದೇ ರೀತಿ ಮುಂದುವರೆದರೆ ಅಲ್ಲಿನ ಜನ ಗಲಾಟೆ ಶುರು ಮಾಡಿದ್ದಾರೆ. ಈ ಶಾಸಕರು ಏನೂ ಕೆಲಸ ಮಾಡುತ್ತಿಲ್ಲ. ಬೇರೆ ಕ್ಷೇತ್ರದಲ್ಲಿ ಇಷ್ಟೊಂದು ಹೈಸ್ಕೂಲ್ ಸಿಕ್ಕಿವೆ ನೀವು ಏನು ಕೆಲಸ ಮಾಡುತ್ತೀರಿ ಎಂದು ಪ್ರಶ್ನೆ ಮಾಡುತ್ತಾರೆ. ಅಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ತೋಟಗಾರಿಕೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಇವತ್ತು ತೆಂಗು ನಾಶವಾಗತಕ್ಕಂಥ ಸಂದರ್ಭ. ವೀಳೆದೆಲೆ ಬಹಳಷ್ಟು ಉತ್ತಮವಾದ ಆರ್ಥಿಕ ಬೆಳೆ ಆಗಿತ್ತು. ಪ್ರಜಾವಾಣಿ ಪತ್ರಿಕೆಯವರು ಕೊಪ್ಪಳದಿಂದ ಒಂದು ವರದಿ ಮಾಡಿದ್ದಾರೆ. ಈ ಬೆಳೆಗೆ ಇವತ್ತು ಜಂತು ಮತ್ತು ವೈರಸ್ ರೋಗ ಬಂದಿದೆ. ಆ ಬಗ್ಗೆ ವಿಶ್ವವಿದ್ಯಾಲಯದವರು ಒಂದು ವರದಿ ಕೊಟ್ಟಿದ್ದಾರೆ ಆ ಬಳ್ಳಿ ಕಿತ್ತುಹಾಕಬೇಕೆಂದು. ಆದರೆ ಬೆಂಗಳೂರು ವಿಜ್ಞಾನಿಗಳು ಒಬ್ಬರು ಹೇಳಿದ್ದಾರೆ. ಆ ವೀಳೆದೆಲೆ ಬಳ್ಳಿಯನ್ನು ಕಿತ್ತು ಹಾಕುವಂತಹ ಪ್ರಶ್ನೆ ಇಲ್ಲ. ಅದನ್ನು ಕಂಟ್ರೋಲ್ ಮಾಡಬಹುದು ಎಂದು. ನಾನು ಆಮೇಲೆ ಆ ವರದಿಯನ್ನು ಕಳುಹಿಸಿಕೊಡುತ್ತೇನೆ. ನಮ್ಮ ಕೊಪ್ಪಳ ಕ್ಷೇತ್ರದ ದೊಂಬರಳ್ಳಿ ಎನ್ನುವ ಕಡೆ ಸುಮಾರು 80-90 ತೋಟಗಳು ಇವೆ. ಆ ಎಲ್ಲಾ ತೋಟಗಳು ಸರ್ವ ನಾಶವಾಗಿವೆ. ಇದರಿಂದ ಜಾನುವಾರುಗಳಿಗೆ ಅನುಕೂಲವಾಗುತ್ತದೆ. ಆ ಬಳ್ಳಿ ನೆರಳಿನಲ್ಲಿ ಜಾನುವಾರುಗಳಿಗೆ ಮೇವು ಬೆಳೆಸುತ್ತಿದ್ದರು. ಅದು ಇಲ್ಲದಂತೆ ಆಗಿದೆ. ಇದರಿಂದ ಹೈನುಗಾರಿಕೆ ಬಹಳ ಉತ್ತಮ ಸ್ಥಿತಿಯಲ್ಲಿತ್ತು. ಇದರಿಂದ ಈಗ ಹೈನುಗಾರಿಕೆ ಹೊರಟುಹೋಗಿದೆ. ಆ ಗ್ರಾಮದಲ್ಲಿ ಸಾವಿರಾರು ಕೃಷಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅವರೂ ಸಹ ಈಗ ಗುಳೆ ಹೋಗಿದ್ದಾರೆ. ಆದ್ದರಿಂದ ಇವತ್ತು ನಾವು ವಿಶ್ವವಿದ್ಯಾನಿಲಯದ ಒಂದು ತಂಡವನ್ನು ಕಳುಹಿಸಿ ಅದನ್ನು ಎನ್‌ಕರೇಜ್ ಮಾಡುವಂತಹ ಕೆಲಸ ಸರ್ಕಾರದಿಂದ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಮೆಕ್ಕೆಜೋಳವನ್ನು ಖರೀದಿ ಮಾಡುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ ನಮಗೆ ಬೆಂಬಲ ಬೆಲೆ ಬೇಕೆಂದು ರೈತರು ಹೋರಾಟ ಮಾಡಿದರು. ಆ ಸಂದರ್ಭದಲ್ಲಿ ರೈತರು ರೊಚ್ಚಿಗೆದ್ದು ನಮಗೆ ಒಂದು ವಾರದಿಂದ ಪೇಟೆಗೆ ತಂದ ಮಾಲನ್ನು ಕೊಳ್ಳುವವರು ಯಾರೂ ಇಲ್ಲ ಎಂದು ಗಲಾಟೆ ಮಾಡಿದರು. ಇದು ಸ್ವಾಭಾವಿಕ. ಆ ಸಂದರ್ಭದಲ್ಲಿ ರೈತರ ಮೇಲೆ ಕೇಸ್ ಹಾಕಿದ್ದಾರೆ. ನಾನು ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಸಹ ಒತ್ತಾಯ ಮಾಡಿದೆ. ಅಲ್ಲಿ ಯಾರಿಗೂ ಗಾಯವಾಗಿಲ್ಲ. ಯಾರ ಜೀವಹಾನಿ ಆಗಿಲ್ಲ ಇಂತಹ ಕೇಸ್‌ಗಳನ್ನು ವಾಪಸ್ಸು

ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ ಜಲ ಸಂವರ್ಧಿನಿ ಯೋಜನೆ ಮತ್ತು ಕೆರೆಗಳ ಹೂಳು ಎತ್ತುವ ಯೋಜನೆ ಹಾಕಿಕೊಂಡಿದ್ದಾರೆ. ಅದು ಬಹಳ ಸಂತೋಷದ ವಿಚಾರ. ಆದರೆ ಸಣ್ಣ ನೀರಾವರಿ ಇಲಾಖೆಯಿಂದ ಹಾಕಿಕೊಂಡಂತಹ ಕೆಲಸಗಳು ಯಾವುವೂ ಪ್ರಾರಂಭವಾಗಿಲ್ಲ. ಈ ಕಾರ್ಯಕ್ರಮ ಅಡಿಯಲ್ಲಿ ಹಿಂದೆ ಕೆಲಸ ಮಾಡಿದಂತಹ ಗುತ್ತಿಗೆದಾರರಿಗೆ ಒಂದು ಪೈಸೆ ಹಣ ಸಹ ಬಿಡುಗಡೆಯಾಗಿಲ್ಲ. ಅವರು ಮೂರು ವರ್ಷಗಳಿಂದ ಬಡ್ಡಿ ಕಟ್ಟುತ್ತಿದ್ದಾರೆ. ಈ ಇಲಾಖೆಯಲ್ಲಿ ಹಣ ಇದೆಯೋ ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ನಮ್ಮ ಕುಷ್ಟಗಿ ಡಿವಿಜನ್‌ನಲ್ಲಿ ಯಾವ ಕೆಲಸ ಸಹ ಪ್ರಾರಂಭವಾಗಿಲ್ಲ. ನಮ್ಮ ಸರ್ಕಾರವಿದ್ದಾಗ ಏತ ನೀರಾವರಿಗೆ ಮಂಜೂರಾತಿ ಕೊಟ್ಟು ಮೂರನೇ ಒಂದು ಭಾಗದಷ್ಟು ಹಣ ಕೊಟ್ಟ ಕಾರ್ಯಕ್ರಮಗಳೂ ಸಹ ಕೆಲಸ ಪ್ರಾರಂಭವಾಗಿಲ್ಲ. ಈ ರೀತಿ ಆದರೆ ನಾವು ಯಾವ ದಿಕ್ಕಿನಲ್ಲಿ ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಿದೆ ಹೇಳಿ? ಇವತ್ತು ಮೂರನೇ ಒಂದು ಭಾಗದ ಹಣ ಇರುವ ಕಡೆಯೂ ಸಹ ಕೆಲಸ ಪ್ರಾರಂಭವಾಗಿಲ್ಲ, ಕೆಲಸ ಮಾಡಿದ ಕಡೆ ಹಣ ಪಾವತಿ ಮಾಡಿಲ್ಲ. ಎಷ್ಟರಮಟ್ಟಿಗೆ ನಾವು ರೈತರ ನೆರವಿಗೆ ಬರುವುದಕ್ಕೆ ಸಾಧ್ಯವಿದೆ? ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವುದು ಸಣ್ಣ ನೀರಾವರಿ ಇಲಾಖೆಯಿಂದ ತೆಗೆದುಕೊಂಡಂತಹ ಕಾರ್ಯಕ್ರಮಗಳಿಗೆ ಚಾಲನೆ ಕೊಡಬೇಕು, ಆ ಕೆಲಸಗಳನ್ನು ಶುರು ಮಾಡಬೇಕೆಂದು ಹೇಳಿ, ಇನ್ನು ಸಿಂಗಟಾಲೂರು ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ, ಇವತ್ತು ಏನು ತುಂಗಭದ್ರಾ ಪ್ರಾಜೆಕ್ಟ್ ನಿರ್ಮಾಣವಾಗಿದೆ ಆ ಕಾಲಕ್ಕೆ ಕೊಪ್ಪಳ ಮತ್ತು ಹಡಗಲಿ ಕ್ಷೇತ್ರದ ಈ ಕಡೆ 33 ಹಳ್ಳಿ ಆ ಕಡೆ 33 ಹಳ್ಳಿಗಳನ್ನು ಸ್ಥಳಾಂತರಗೊಳಿಸಿದರು. ಆವತ್ತು ಅವರು ತಮ್ಮ ಜಮೀನುಗಳನ್ನು ತ್ಯಾಗ ಮಾಡಿದರು. ಆದರೆ ಅವರಿಗೆ ನೀರಾವರಿ ಸೌಲಭ್ಯ ಏನೂ ಇಲ್ಲ. ಮಾನ್ಯ ಹೆಚ್.ಕೆ. ಪಾಟೀಲರನ್ನು ನಾನು ಮತ್ತು ಮಾನ್ಯ ಹಂಪನಗೌಡರು ಹೋಗಿ ಕೇಳಿದಾಗ ನಿಮಗೆ 8 ಸಾವಿರ ಹೆಕ್ಟೇರ್‌ಗೆ ಪ್ರಾವಿಷನ್ ಮಾಡುತ್ತೇವೆಂದು ಹೇಳಿದರು. ಆ ಉತ್ತರ ನಮಗೆ ಸಮಾಧಾನ ತಂದಿಲ್ಲ. ಆ ಪ್ರಾಜೆಕ್ಟ್ ಕಟ್ಟುವಾಗ ಆ ಕ್ಷೇತ್ರದ ಜನರು ಏನು ತ್ಯಾಗ ಮಾಡಿದ್ದಾರೆ ಅದರಿಂದ ನಮ್ಮ ಕ್ಷೇತ್ರಕ್ಕೆ ಸುಮಾರು 40 ಸಾವಿರ ಹೆಕ್ಟೇರ್ ನೀರಾವರಿ ಸಿಗಬೇಕೆನ್ನುವ ಒತ್ತಾಯ ಇದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಆಶಿಸಿ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಎಸ್. ಪೂಜಾರ್ (ಬಾಗಲಕೋಟೆ) :— ಮಾನ್ಯ ಅಧ್ಯಕ್ಷರೇ, ನಾನೊಬ್ಬ ಹಿಂದುಳಿದ ಜಿಲ್ಲೆಗೆ ಸೇರಿದ ವ್ಯಕ್ತಿಯಾಗಿದ್ದೇನೆ. ನಮ್ಮ ಉತ್ತರ ಕರ್ನಾಟಕ ಭಾಗದ ಸಾಮಾಜಿಕ ವ್ಯವಸ್ಥೆ ಎಲ್ಲಾ ವಿಭಾಗಗಳಲ್ಲಿ ಹಿಂದುಳಿದಿದೆ. ಇದಕ್ಕೆ ಕಾರಣ ಅನೇಕ ವರ್ಷಗಳಿಂದ ಇಲ್ಲಿ ದೊರೆಯಬೇಕಾದ ಮೂಲ ಭೂತ ಸೌಲಭ್ಯಗಳು

ದೊರೆಯದೆ ಇರುವುದೇ ಮೂಲ ಕಾರಣವೆಂದು ನಾನು ಹೇಳಬಯಸುತ್ತೇನೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ, ಗ್ರಾಮೀಣ ಸಂಪರ್ಕ ರಸ್ತೆ ಸೇತುವೆಗಳಿಂದ ಹಿಡಿದು ರೈಲು ಸಂಪರ್ಕ ದೊರೆಯುವವರೆಗೆ ಕೊರತೆ, ಅತಿ ಸಣ್ಣ ಕೈಗಾರಿಕೆಗಳಿಂದ ಹಿಡಿದು ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಕೊರತೆ ನೀರಾವರಿಗೆ ಸಹಾಯಕವಾಗುವ ಸಣ್ಣ ಸಣ್ಣ ಕೆರೆಗಳಿಂದ ಹಿಡಿದು ಭಾರಿ ಮತ್ತು ಮಧ್ಯಮ ನೀರಾವರಿ ಕಾರ್ಯಾರಂಭದಲ್ಲಿ ಆದಂತಹ ಕೊರತೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಹಿಡಿದು

6.10 ಪಿ.ಎಂ.

ದೊಡ್ಡ ಆಸ್ಪತ್ರೆಗಳ ಕೊರತೆ, ಇವು ಹಿಂದುಳಿದಿರುವಿಕೆಗೆ ಮೂಲ ಕಾರಣವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಷ್ಟೇ ಏಕೆ ಸ್ವಾಮಿ, ಉತ್ತರ ಕರ್ನಾಟಕದ ವ್ಯವಸ್ಥೆ ಪ್ರದೇಶಗಳನ್ನು ಮುಂದುವರೆಸಬೇಕೆಂದು ಮಾಡಬೇಕೆಂಬ ಹಿನ್ನಲೆಯಲ್ಲಿ ಸಣ್ಣಪುಟ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಯೋಜನೆಗಳನ್ನು ಕಾರ್ಯಗತಗೊಳಿಸಬೇಕೆಂಬ ನಿಟ್ಟಿನಲ್ಲಿ ಅವಶ್ಯವಿರುವಷ್ಟು ಸ್ಥಳೀಯ ಸಂಸ್ಥೆಗಳನ್ನೂ ಸಹ ಕಡಿತಮಾಡಲಾಗಿದೆ. ಅದಕ್ಕೆ ಸ್ಪಷ್ಟ ದಾಖಲೆಗಳೇ ನಮ್ಮ ಕಣ್ಮುಂದಿವೆ. ವಿಸ್ತೀರ್ಣವನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ. ದಕ್ಷಿಣ ಕರ್ನಾಟಕದ ಭೌಗೋಳಿಕ ವಿಸ್ತೀರ್ಣವು 93,170 ಚದರ ಕಿಮೀಗಳಿದ್ದರೆ ಅಲ್ಲಿರುವ ಗ್ರಾಮಪಂಚಾಯ್ತಿಗಳ ಸಂಖ್ಯೆ 3181, ಉತ್ತರ ಕರ್ನಾಟಕದ ಭೌಗೋಳಿಕ ವಿಸ್ತೀರ್ಣ 98, 621 ಚದರ ಕಿಮೀ ಇದ್ದರೆ ಗ್ರಾಮಪಂಚಾಯ್ತಿಗಳ ಸಂಖ್ಯೆ 2511 ಮಾತ್ರ. ಒಟ್ಟು 5451 ಚದರ ಕಿಮೀ ಹೆಚ್ಚಿನ ಪ್ರದೇಶವಿದ್ದರೂ ಕೂಡ ಇನ್ನೂ ಸಾವಿರದಷ್ಟು ಗ್ರಾಮಪಂಚಾಯ್ತಿಗಳು ಅಲ್ಲಿ ಆಗಬೇಕಾಗಿತ್ತು. ಈ ನಿಟ್ಟಿನಲ್ಲಿ ಅನೇಕ ಅವ್ಯವಸ್ಥೆಗಳು ಅನೇಕ ವರ್ಷಗಳಿಂದ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಇಂದಿನ ಸರ್ಕಾರ ಈ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಿ, ಹಿಂದುಳಿದ ಪ್ರದೇಶಗಳಿಗೆ ಅಭಿವೃದ್ಧಿಗೆ ಅವಕಾಶ ಕೊಡಬೇಕೆಂಬ ನಿಟ್ಟಿನಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣ ಸಮಿತಿ ಸ್ಥಾಪನೆ ಮಾಡಿರುವುದನ್ನು ನಾನು ಶ್ಲಾಘನೆ ಮಾಡುತ್ತಿದ್ದೇನೆ, ಸ್ವಾಗತ ಮಾಡುತ್ತಿದ್ದೇನೆ ಸ್ವಾಮಿ. ನಮ್ಮ ಭಾಗ ವಿಶೇಷವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಹಿಂದುಳಿದಿದ್ದು ಇತ್ತೀಚೆಗೆ ಗುಲ್ಬರ್ಗ ವಿಭಾಗದಲ್ಲಿ ಈಶಾನ್ಯ ಶಿಕ್ಷಣ ನಿರ್ದೇಶನಾಲಯ ಕಛೇರಿಯನ್ನು ಪ್ರಾರಂಭ ಮಾಡಿದ್ದಾರೆ. ಜೊತೆಗೆ 100 ಹೊಸ ಹೈಸ್ಕೂಲುಗಳನ್ನು ಕೊಟ್ಟಿದನ್ನು ಸ್ವಾಗತ ಮಾಡುತ್ತಾ ಇದೇ ರೀತಿಯ ವ್ಯವಸ್ಥೆ ಹಿಂದುಳಿದ ವಿಭಾಗಗಳಿಗೂ ಮುಂದುವರೆಯಬೇಕು, ಎಂದು ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ವಿಶೇಷವಾಗಿ ನಮ್ಮ ಭಾಗದಲ್ಲಿ ನೀರಾವರಿ ಎಂದರೆ ಕೃಷ್ಣಾ ಜಲಾನಯನ ನೀರಾವರಿ ಯೋಜನೆಗಳು. ಈ ಭಾಗದಲ್ಲಿ ಯಾವ ರೀತಿ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆ ಹಮ್ಮಿಕ್ಕೊಂಡಿದ್ದಾರೆ ದುರ್ದೈವದ ಸಂಗತಿ, ಕಾವೇರಿ ಜಲಾನಯನದ ಯೋಜನೆಗಳ

ಕಾರ್ಯಪ್ರಗತಿ ಶೇಕಡ 60, 70 ರಷ್ಟಾಗಿದ್ದರೂ ಕೃಷ್ಣಾ ಜಲಾನಯನ ಯೋಜನೆಗಳ ಪ್ರಗತಿ ಇನ್ನೂ ಕುಂಠಿತಗೊಳ್ಳುತ್ತಾ ಬಂದಿದೆ. ಶೇಕಡ 50ರಷ್ಟೂ ಪ್ರಗತಿ ಇಲ್ಲಿಯವರೆಗೇ ಮಾಡಲು ಆಗಲಿಲ್ಲ. ಈಚೆಗೆ ನಮ್ಮ ಹಿರಿಯ ಶಾಸಕರಾದ ಮಾನ್ಯ ಹನುಮೇಗೌಡರು ಉತ್ತರ ಕರ್ನಾಟಕದ ಕೃಷ್ಣಾ ಯೋಜನೆಗಳಿಗೆ ಹೆಚ್ಚುವರಿ ಅನುದಾನವನ್ನು ಈ ಸರ್ಕಾರ ಕೊಡುತ್ತಿದೆ, ಸ್ವಾಗತ ಎಂದು ಹೇಳಿದರು. ಸ್ವಾಮಿ ನಾನು ಇವರೆಲ್ಲರನ್ನೂ ಕೇಳುತ್ತೇನೆ: ಇದುವರೆಗೂ ಅಸಮತೋಲನವನ್ನು ಲೆಕ್ಕಿಸದೆ ಕಾವೇರಿ ಯೋಜನೆಗಳಿಗೆ ಹಣವನ್ನು ನೀಡುತ್ತಾ ಬಂದಿದ್ದರು ಇವತ್ತು ಅದನ್ನು ಕೃಷ್ಣಾ ಯೋಜನೆಗಳಿಗೆ ನೀಡಿದರೆ ತಪ್ಪಾ? ಅಲ್ಲಿಯ ರೈತರು ಉದ್ಧಾರವಾಗುವುದು ತಪ್ಪಾ? ಇವತ್ತು ನೀರಾವರಿಗೊಳಿಸುವ ಭರಾಟೆಯಲ್ಲಿ ಪುನರ್ವಸತಿ ಅತ್ಯಂತ ಹದಗೆಡುತ್ತಾ ಬಂದಿದೆ. ಒಂದು ಮಾತು ಈ ಸರ್ಕಾರಕ್ಕೆ ನಾನು ಹೇಳಲು ಇಚ್ಛಿಪಡುತ್ತೇನೆ: ಕೆಲವೊಂದು ಕಾರ್ಯಕ್ರಮಗಳಲ್ಲಿ ತಾವು ಒಳ್ಳೆಯದನ್ನು ಮಾಡುತ್ತಾ ಬಂದಿದ್ದೀರಿ. ಬಡ ರೈತರ ಭೂಮಿ ಪರಿಹಾರವನ್ನು ಶೇಕಡ 30ರಷ್ಟು ಹೆಚ್ಚು ಮಾಡಿದ್ದೀರಿ, ಎಕರೆಗೆ ಎರಡೆರಡು ಲಕ್ಷದವರೆಗೆ ಅಲ್ಲಿ ಕಿಮ್ಮತ್ತಿದ್ದರೂ ತಾವು ಹೆಚ್ಚುವರಿ ಮಾಡಿ 30 ಪರ್ಸೆಂಟ್ ಹಣ ಸಾಕಾಗದಿದ್ದರೂ ಕನಿಷ್ಟ ಆ ರೈತನಿಗೆ ಸಮಾಧಾನವಾಗುವಂತಹ ಕೆಲಸ ಮಾಡಿದ್ದೀರಿ. ಈ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, ಭಾರಿ ನೀರಾವರಿ ಸಚಿವರು ಹಾಗೂ ಕಂದಾಯ ಸಚಿವರಿಗೆ ನಾನು ಅಭಿನಂದನೆ ಸಲ್ಲಿಸದಿದ್ದರೆ ತಪ್ಪಾಗುವುದೆಂದು ಹೇಳುತ್ತಾ ಇವತ್ತಿಗೂ ಪುನರ್ವಸತಿ ವ್ಯವಸ್ಥೆ ಬಾರಿ ಹಿಂದುಳಿದಿದೆ. ಪುನರ್ವಸತಿ ಅನ್ನುವುದನ್ನು ಇವತ್ತಿನ ಸರ್ಕಾರವೂ ತಪ್ಪಾಗಿ ಅರ್ಥೈಸಿದೆ ಎಂದು ಅನುವಾರ್ಯವಾಗಿ ಹೇಳಬೇಕಾಗಿದೆ. ಪರಿಹಾರ ಧನ ವಿತರಿಸಿ ಅವರಿಗೊಂದೊಂದು ಮನೆ ಕೊಟ್ಟರೆ ಪುನರ್ವಸತಿ ಸಾಲದು, ಅವರ ಮೂಲ ಬದುಕಿಗೆ ಆಧಾರ ಎನಿತ್ತು, ಅವರ ಜಮೀನುಗಳು ಏನು ಮುಳುಗಡೆ ಆಗಿದೆ ಅವರಿಗೆ ಮತ್ತೆ ಜೀವನ ಕೊಡಬೇಕಾಗಿದೆ ಅವರಲ್ಲಿ ಬದುಕುವ ವಿಶ್ವಾಸ ನೀಡಬೇಕಾಗಿದೆ. ಈ ಹಿನ್ನಲೆಯಲ್ಲಿ ಸರ್ಕಾರಕ್ಕೆ ಕೊಡಲು ಸಾಧ್ಯವಿಲ್ಲ. ಅಲ್ಲಿನ ಜನರಿಗೆ ಸಣ್ಣ ಸಣ್ಣ ಉದ್ಯೋಗ ಮಾಡಲು ಅನುಕೂಲವಾಗುವ ವ್ಯವಸ್ಥೆ ಮಾಡಬೇಕು. ಅಲ್ಲಿ ಉದ್ಯಮ ತೆರೆಯಲು ಏನೇನು ತೆರಿಗೆ ವಿನಾಯ್ತಿ ಇದೆ ಅವನ್ನೆಲ್ಲಾ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ. ಇದಕ್ಕಾಗಿ ವಿಶೇಷವಾದ ಹಣಕಾಸಿನ ನೆರವನ್ನು ತೆಗೆದಿಡಬೇಕೆಂಬ ಒತ್ತಾಯವನ್ನು ಮಾಡುತ್ತಿದ್ದೇನೆ. ಕೈಗಾರಿಕೀಕರಣದಲ್ಲೂ ನಮ್ಮ ಜಿಲ್ಲೆ ಅತ್ಯಂತ ಹಿಂದುಳಿದಿದೆ. ನಮ್ಮ ಜಿಲ್ಲೆಯಲ್ಲಿ ವಿಪುಲ ಖನಿಜ ಸಂಪತ್ತಿದೆ, ಡೋಲೋಮೈಟ್ ಇದೆ, ಲ್ಯಾಂಡ್‌ಸ್ಟೋನಿದೆ, ವಿಶ್ವಪ್ರಸಿದ್ಧವಾದ ಗ್ರಾನೈಟ್ ಇಳಕಲ್ಲಿನಲ್ಲಿ ಸಿಗುತ್ತಿದೆ. ಅದರ ಜೊತೆಗೆ ವಿಫುಲ ಹಣ್ಣು ಹಂಪಲು ಸಂಪತ್ತು, ವಿದೇಶಗಳಲ್ಲಿ ಅತ್ಯಂತ ಬೇಡಿಕೆಯಿರುವ ನಮ್ಮ ಬಾಗಲಕೋಟೆ ಬಿಜಾಪುರ ದ್ರಾಕ್ಷಿ, ದಾಳಿಂಬೆಗಳಿದ್ದರೂ ಅದಕ್ಕೆ ಮಾರಾಟದ ವ್ಯವಸ್ಥೆ ಇವತ್ತಿನವರೆಗೆ ಮಾಡಲು ಆಗಲಿಲ್ಲ. ಇಲ್ಲಿನ ಸರ್ಕಾರ ಅದಕ್ಕೆ ಅನುಕೂಲ ಮಾಡಿಕೊಡಲಿಲ್ಲ. ಕೇಂದ್ರ ಸರ್ಕಾರ ಕೂಡ ಈ ದಿಸೆಯಲ್ಲಿ ಹಿಂದೆ ಬಿದ್ದಿದೆ

ಎಂದರೆ ತಪ್ಪಾಗಲಿಕ್ಕಿಲ್ಲ. ರೈಲ್ವೇ ಯೋಜನೆಗಳ ಬಗ್ಗೆ ನಮ್ಮ ಸರ್ಕಾರ ಇತ್ತೀಚೆಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದೆ. ಗದಗ-ಬಿಜಾಪುರ, ಹುಬ್ಬಳ್ಳಿ-ಅಂಕೋಲಾ, ಹಾಸನ-ಮಂಗಳೂರು ಯೋಜನೆಗಳ ಕುರಿತು ರೈಲ್ವೆ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡು ಬರುವ ಮೂರ್ನಾಲ್ಕು ವರ್ಷಗಳಲ್ಲಿ ಅದನ್ನು ಕಾರ್ಯಗತ ಮಾಡಬೇಕು. ಅದನ್ನು ಶ್ಲಾಘನೀ ಮಾಡುತ್ತೇನೆ. ಆದರೆ ಒಂದು ಚಿಂತನೆ ಬೇಕಾಗಿದೆ. ಮೂಲಭೂತ ಸೌಕರ್ಯ ನೀಡಲು ರೈಲ್ವೆ ಒಪ್ಪಂದ ಮಾಡಿಕೊಂಡಿದ್ದರೂ ಮುಂಗಡ ಪತ್ರದಲ್ಲಿ ಅದಕ್ಕಾಗಿ ಕೇವಲ ಮೂರು ಕೋಟಿ ರೂ. ಈಕ್ವಿಟಿಶೇರ್ ಎಂದು ಇಟ್ಟಿದೆ. ಇದು ಸಾಲದು, ಏಕೆಂದರೆ ಗದಗ-ಬಿಜಾಪುರ ಮಾರ್ಗಕ್ಕೆ ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ 10 ಕೋಟಿ ರೂ ತೆಗೆದಿಟ್ಟಿದೆ. ಒಡಂಬಡಿಕೆಯಂತೆ ಕೇಂದ್ರ ಸರ್ಕಾರ ಶೇಕಡ 26, ರಾಜ್ಯ ಸರ್ಕಾರ ಶೇಕಡ 26 ಕೊಟ್ಟು ಆಮೇಲೆ ಈಕ್ವಿಟಿ ಶೇರು ಬಂಡವಾಳವನ್ನು ವಿವಿಧ ಬ್ಯಾಂಕ್‌ಗಳಿಂದ ಸಂಗ್ರಹಿಸಬೇಕು, ಆದ್ದರಿಂದ ಕೇಂದ್ರ 10 ಕೋಟಿ ರೂ. ಕೊಟ್ಟಿರುವಾಗ ರಾಜ್ಯವೂ ಸಹ 10 ಕೋಟಿ ರೂ. ತೆಗೆದಿಡಬೇಕು, ಇನ್ನೂ 25 ಕೋಟಿ ರೂ. ಬೇಕಾಗಬಹುದು, ಅದನ್ನು ಅನೇಕ ಸಹಕಾರ ಬ್ಯಾಂಕುಗಳು ಕೊಡಲು ಸಿದ್ಧವಿವೆ. ಬಿಜಾಪುರದ ಸಿದ್ದೇಶ್ವರ ಬ್ಯಾಂಕಿನ ಚೇರ್ಮನರು ಹೇಳುತ್ತಾರೆ, ನಾವು 5 ಕೋಟಿ ರೂ. ಶೇರ್ ತೆಗೆದುಕೊಳ್ಳಲು ತಯಾರಿದ್ದೇವೆ, ನಮ್ಮನ್ನು ಸಂಪರ್ಕಿಸಲಿ; ಬಾಗಲಕೋಟೆಯ ಬಸವೇಶ್ವರ ಬ್ಯಾಂಕ್‌ನವರೂ ಮುಂದೆ ಬರುತ್ತಿದ್ದಾರೆ. ಆ ಭಾಗದಲ್ಲಿರುವ ಅನೇಕ ಸಹಕಾರಿ ಬ್ಯಾಂಕ್‌ಗಳು ತಮ್ಮ ಬ್ಯಾಂಕಿನ ಶೇರನ್ನು ಈ ಯೋಜನೆಯಲ್ಲಿ ತೊಡಗಿಸಲು ತಯಾರಿವೆ, ಇದಕ್ಕಾಗಿ ಸರ್ಕಾರ ಇದುವರೆಗೂ ಏನು ಕಾರ್ಯಕ್ರಮ ಹಾಕಿಕೊಂಡಿಲ್ಲ. ಕೇವಲ ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದು ಬಿಟ್ಟರೆ ಈ ಸರ್ಕಾರ ಇದರಲ್ಲಿ ವಿಫಲವಾಗಿದೆಯೆಂದು ಟೀಕಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ; ರಾಜ್ಯ ಸರ್ಕಾರ ತೀವ್ರವಾಗಿ ಇದರ ಬಗ್ಗೆ ನಿಗಾವಹಿಸಬೇಕು ತನ್ನ ಪಾಲಿನ 10 ಕೋಟಿ ರೂ.ಯನ್ನು ಈ ಬಜೆಟ್‌ನಲ್ಲಿ ಇಡುವುದರ ಜೊತೆಗೆ ಇನ್ನೂ 42 ಪರ್ಸೆಂಟ್ ಏನು ವ್ಯವಸ್ಥೆ ಮಾಡಬೇಕಾಗಿದೆ ಅದಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಂಡು ಆ ಭಾಗದ ಜನತೆಯ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಬೇಕು.

ಅಧ್ಯಕ್ಷರೇ, ಇನ್ನೊಂದು ವಿಚಾರ, ನಮ್ಮ ಸಾರಿಗೆ ಸಚಿವರು ಇದ್ದಾರೆ, ಸಾರಿಗೆ ಇಲಾಖೆಯಿಂದ ನಮ್ಮ ಭಾಗಕ್ಕೆ ಅತ್ಯಂತ ಅಸಡ್ಡೆಯಾಗಿದೆ. ಒಂದು ಹೇಳಬೇಕೆಂದರೆ ನಮ್ಮ ಭಾಗದ ರಸ್ತೆಗಳು ಸರಿಯಾಗಿದ್ದರೂ ಬಸ್‌ಗಳು ವಿಪುಲವಾಗಿಲ್ಲ, ಡ್ರೈವರ್ ಕಂಡಕ್ಟರ್‌ಗಳ ನೇಮಕಾತಿ ಮಾಡಿಲ್ಲವೆಂಬ ಆಪಾದನೆ ಮೇಲಿಂದ ಮೇಲೆ ಬರುತ್ತಾ ಇದೆ. ಯಾವುದಾದರೂ ಬಸ್ ಬೇಕು ಅಂದರೆ ಡ್ರೈವರಿಲ್ರೀ ಕಂಡಕ್ಟರಿಲ್ರೀ, ನೇಮಕ ಮಾಡಿಕೊಳ್ಳಿ ಎನ್ನುತ್ತಾರೆ. ದಯವಿಟ್ಟು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ; ಡ್ರೈವರ್ ಕಂಡಕ್ಟರ್‌ಗಳ ನೇಮಕಾತಿಗೆ ತಕ್ಷಣ ತಾವು ಆದೇಶ ಕೊಡಬೇಕು. ಇದರ ಜೊತೆಗೆ ಬಾಗಲಕೋಟೆಯಿಂದ

ಬೆಂಗಳೂರಿಗೆ 190, 230 ಮತ್ತು 270 ಎಂದು ಮೂರು ವರ್ಗದ ಬಸ್‌ಟಿಕೆಟ್ ದರ ಇಟ್ಟಿದ್ದಾರೆ. ಯಾರೂ ಬರುತ್ತಿಲ್ಲ. ಕೇವಲ ಶಾಸಕರಿಗೆ ಮಾತ್ರ ಒಂದು ಬಸ್ ಎಂಬ ದುರ್ದೈವ ಕಾಣುತ್ತಿದೆ. ಕೇವಲ ನಾವು ಮೂರ್ನಾಲ್ಕು ಶಾಸಕರು ಬಸ್‌ನಲ್ಲಿ ಕುಳಿತಾಗ ಇನ್ನುಳಿದ ಪ್ರಯಾಣಿಕರು ಯಾರೂ ಇಲ್ಲವಲ್ಲಪ್ಪಾ ಎಂಬ ದು:ಖ ನಮಗೆ ಆಗುತ್ತಿದೆ. ಆದಕ್ಕೆ ಒಂದೇ ರೇಟನ್ನು ಮಾಡಬೇಕು. ಬಾಗಲಕೋಟೆಯಿಂದ ಎಂಟು ಹತ್ತು ಬಸ್‌ಗಳನ್ನು ಬೇರೆ ಬೇರೆ ಕಂಪನಿಯವರು ಓಡಿಸುತ್ತಿದ್ದಾರೆ. ಕೇವಲ 190 ರೂ. ಮತ್ತು 170 ರೂ.ಗಳಲ್ಲಿ ಬೆಂಗಳೂರಿಗೆ ತಂದುಬಿಡುತ್ತಾರೆ. ಕೆ.ಎಸ್.ಆರ್.ಟಿ.ಸಿ.ಯವರು 200-270 ರೂ. ಮಾಡಿದರೆ ಯಾರೂ ಬರುತ್ತಿಲ್ಲ. ಅಲ್ಲಿ ಭರವಸೆ ಕೂಡ ಹೊರಟು ಹೋಗುತ್ತದೆ. ಅಲ್ಲಿ ಇವತ್ತು ಅಪನಂಬಿಕೆ ಬರುತ್ತದೆ. ದಯವಿಟ್ಟು ತಾವು ಒಂದೇ ಸ್ಲ್ಯಾಬ್ ರೇಟನ್ನು ಮಾಡಬೇಕು. ಅಲ್ಲಿದ ಬರುವ ಪ್ರಯಾಣಿಕರನ್ನು ಆಕರ್ಷಿಸಲು ಒಂದು ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಇನ್ನು ಅನೇಕ ವಿಚಾರಗಳನ್ನು ಹೇಳಬೇಕಾಗಿತ್ತು. ತಾವು ಇಷ್ಟೊತ್ತಾದರೂ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕರಡಿ ಸಂಗಣ್ಣ ಅಮರಪ್ಪ :— ಮಾನ್ಯ ಉಪಾಧ್ಯಕ್ಷರೇ, ಹಿಂದೆ ಮೈಜ್ ಅನ್ನು ಖರೀದಿ ಮಾಡುವ ಸಂದರ್ಭದಲ್ಲಿ ಅಲ್ಲಿ ರೈತರ ಮೇಲೆ ಕೇಸ್ ಆಗಿತ್ತು. ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ಆ ಸಂದರ್ಭದಲ್ಲಿ ಒತ್ತಾಯವನ್ನು ಮಾಡಿದ್ದೆವು. ಮಾನ್ಯ ಖರ್ಗೆ ಸಾಹೇಬರು ಅದನ್ನು ವಾಪಸ್ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಪರಿಶೀಲನೆ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅಲ್ಲಿಂದ ರಿಪೋರ್ಟ್ ಬಂದು ಆಮೇಲೆ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್‌ನವರಿಂದ ಒಪೀನಿಯನನ್ನು ತೆಗೆದುಕೊಂಡು ತದನಂತರ ಅದನ್ನು ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು :— ಮಾನ್ಯ ಗುರುಸ್ವಾಮಿಯವರೇ, ತಾವು ಆರೂವರೆಗೆ ಮುಗಿಸಬೇಕಾಗುತ್ತದೆ.

+ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಉಪಾಧ್ಯಕ್ಷರೇ, ನನಗಂತೂ ಒಂದು ವಿಚಾರದಲ್ಲಿ ಬಹಳ ನೋವಾಗಿದೆ. ನಮ್ಮ ಹಳ್ಳಿಯಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. "ಅತ್ತು ಕರೆದು ಔತಣ ಮಾಡಿಸಿಕೊಂಡರು" ಎಂದು ಹೇಳಿ ಮಾನ್ಯ ಸಿಂಧ್ಯಾರವರೂ ಕೂಡ ನನ್ನ ವಿಚಾರವನ್ನು ಮಂಡಿಸುವುದಕ್ಕೂ ಮೊದಲು ಸನ್ಮಾನ್ಯ ಅಧ್ಯಕ್ಷರು ಏನು ಹೊಸದಾಗಿ ಈ ಒಂದು ಸದನಕ್ಕೆ ಆಯ್ಕೆಯಾಗಿ ಬಂದಿದ್ದಾರೆ, ಅವರಲ್ಲೂ ಕೂಡ ಪ್ರತಿಭೆ ಇದೆ. ಸಾಮರ್ಥ್ಯ ಇದೆ. ಆ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಈ ಸಮಾಜಕ್ಕೆ ಕೊಡುಗೆಯಾಗಿ ಕೊಡಿಸಬೇಕಾದರೆ ಗುರುತಿಸಬೇಕಾದ

ಜವಾಬ್ದಾರಿ ತಮ್ಮ ಪೀಠಕ್ಕೆ ಇದೆ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ನೆನಪಿಸುತ್ತಾ ಬಹುಶ: ಹಿಂದೆ ಇದ್ದಂಥ ಶಾಸಕರು ಪ್ರತಿದಿನ ನಮ್ಮ ಸಿಂಧ್ಯಾರವರು ಹೇಳಿದ ರೀತಿಯಲ್ಲಿ ಪ್ರತಿದಿನ ಸುದ್ದಿ. ಆರು ತಿಂಗಳಿಗೋ ಮೂರು ತಿಂಗಳಿಗೋ ಒಂದು ಸುದ್ದಿ ಬರಲಿಲ್ಲವೆಂದರೆ ನಾವು ಇಲ್ಲಿ ಬಂದು ಸಾರ್ಥಕವಾದರೂ ಏನು? ಅಥವಾ ನಮ್ಮ ಜನರು ನಮಗೆ ಮನ್ನಣೆಯನ್ನು ಕೊಟ್ಟು ಮಾಡಿದ ಸಾರ್ಥಕವೇನು ಎಂಬುದನ್ನು ಚಿಂತನೆ ಮಾಡಬೇಕಾದ ವಿಚಾರ. ಈ ವಿಚಾರವನ್ನು ತಮಗೆ ಬಿಡುತ್ತೇನೆ. ಈಗ ನಾನು ಒಂದು ಗಂಟೆಗಳ ಕಾಲ ಮಾತನಾಡುವಷ್ಟು ಮೆಟೀರಿಯಲ್ಸ್ ವಿಷಯ ಸಮಿತಿಗಳು ಒದಗಿಸಿರತಕ್ಕ ವಿಚಾರಗಳನ್ನೂ ಕೂಡ ಅಧ್ಯಯನ ಮಾಡಿದ್ದೇನೆ ಮತ್ತು ಮಾತನಾಡತಕ್ಕ ಶಕ್ತಿಯೂ ಕೂಡ ಇದೆ. ಆದರೆ ತಾವು ನಮಗೆ ಟೈಮ್ ರಿಸ್ಟ್ರಿಕ್ಷನನ್ನು ಹಾಕಿದ್ದೀರಿ.

ಉಪಾಧ್ಯಕ್ಷರು :— ಹೊಸಬರಿಗೆ ಹೆಚ್ಚು ಅವಕಾಶ ಸಿಗಬೇಕಾದರೆ ಹಿರಿಯ ಸದಸ್ಯರುಗಳು ಮಾಜಿ ಸಚಿವರು ನಿಮಗೆ ಸಹಕಾರವನ್ನು ಕೊಡಬೇಕಾಗುತ್ತದೆ. ಅವರು ಗಂಟೆಗಟ್ಟಲೆ ಮಾತನಾಡಿದರೆ ನಿಮಗೆಲ್ಲಿ ಅವಕಾಶ ಸಿಗುತ್ತದೆ? ಅನಿವಾರ್ಯವಾಗಿ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ ಅವರು ಈಗ ನಿರ್ಬಂಧನೆಯನ್ನು ತಮ್ಮಷ್ಟಕ್ಕೇ ತಾವೇ ಹಾಕಿಕೊಳ್ಳಬೇಕಾಗುತ್ತದೆ. ಅರ್ಧ ಗಂಟೆಗಿಂತ ಹೆಚ್ಚು ನಾವು ಮಾತನಾಡುವುದಿಲ್ಲವೆಂದು. ಗಂಟೆಗಟ್ಟಲೆ ಮಾತನಾಡಿದರೆ ಹೊಸಬರಿಗೆ ಅವಕಾಶ ಸಿಗುವುದಿಲ್ಲ. ಇರುವ ಸಮಯದಲ್ಲಿ ನಾವು ಅವಕಾಶ ಕೊಡಬೇಕಾಗುತ್ತದೆ. ನಾವಂತೂ ಸಾಕಷ್ಟು ಕೊಟ್ಟಿದ್ದೇವೆ.

ಶ್ರೀ ಸಿ. ಗುರುಸ್ವಾಮಿ :— ನನ್ನ ಮನಸ್ಸಿನಲ್ಲಿರುವುದನ್ನು ಸಭೆಯ ಮುಂದೆ ಮಂಡಿಸಿದ್ದೇನೆ. ಈಗ ತಾವು ಸಮಯವನ್ನು ಕೂಡ ನಿಗದಿ ಮಾಡಿರುವುದರಿಂದ ನಾನು ಒಂದೆರಡು ಇಲಾಖೆಗಳ ಬಗ್ಗೆ ಮಾತ್ರ ಈ ಒಂದು ಸದನದಲ್ಲಿ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತು ಇಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮಾನ್ಯ ಎಸ್.ಎಂ. ಕೃಷ್ಣಾರವರ ನೇತೃತ್ವದಲ್ಲಿ ಸುಮಾರು 150 ಸದಸ್ಯರುಗಳ ಬೆಂಬಲವನ್ನು ಹೊಂದಿ ಆಡಳಿತವನ್ನು ನಡೆಸುತ್ತಿದೆ. ನಾನು ಏಕೆ ಈ ವಿಚಾರವನ್ನು ಇಲ್ಲಿ ಮಾತನಾಡುತ್ತಿದ್ದೇನೆ ಎಂದರೆ ಇಲ್ಲಿ ವಿಷಯ ಸಮಿತಿಗಳನ್ನೂ ಕೂಡ ರಚನೆ ಮಾಡಿ ಇಲ್ಲಿ ಇಲಾಖಾ ಬೇಡಿಕೆಗಳ ಬಗ್ಗೆಯೂ ಕೂಡ ವರದಿಯನ್ನು ಕೊಟ್ಟಿದ್ದಾರೆ, ಏನೇನು ಮಾಡಬೇಕು, ಏನೇನು ಮಾಡಬಾರದು ಎಂದು. ಮತ್ತೆ ಇಲ್ಲಿ ವಿರೋಧ ಪಕ್ಷದ ಸದಸ್ಯರುಗಳೂ ಕೂಡ, ಅವರವರ ಅಭಿಪ್ರಾಯಗಳನ್ನು ಕೊಡತಕ್ಕದ್ದನ್ನು ಕೂಡ ಮಾಡುತ್ತಿದ್ದಾರೆ. ಇಲ್ಲಿ ಎರಡು ರೀತಿಯ ದಾರಿಗಳು ಈ ಸರ್ಕಾರಕ್ಕೆ ಇರುವುದನ್ನು ನಾವು ಕಾಣುತ್ತೇವೆ. ಒಂದು, ಯಾವ ಒಂದು ವಿಷಯಸಮಿತಿಯನ್ನೂ ಗಣನೆಗೆ ತೆಗೆದುಕೊಳ್ಳದೆ, ವರದಿಯನ್ನೂ ಗಣನೆಗೆ ತೆಗೆದುಕೊಳ್ಳದೇ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ವಿರೋಧಪಕ್ಷದ ಒಂದು ಏನು ಮಾಹಿತಿಗಳನ್ನು ತಮ್ಮ ನಿರ್ಧಾರಗಳನ್ನು ಹೇಳುವುದನ್ನು

ಕೇಳತಕ್ಕದ್ದು ಆದೂ ಮಾಡಬಹುದು. ಆದಿಲ್ಲದಿದ್ದರೆ ಬಹುಶ: ನಾವು 150 ಜನರಿದ್ದೇವೆ, ಇವರನ್ನೇನು ಕೇಳಬೇಕು, ಎನ್ನುವ ಧೋರಣೆಯನ್ನು ಇಟ್ಟುಕೊಂಡು ಕೆಲಸ ಮಾಡುವ ರೀತಿಯಲ್ಲೂ ಕೂಡ ಮಾಡಬಹುದು. ಅದು ಅವರಿಗೆ ಬಿಟ್ಟಂಥ ವಿಚಾರ. ಇದರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದು ಮಾನ್ಯ ಎಸ್.ಎಂ. ಕೃಷ್ಣಾರವರ ಒಂದು ಸರ್ಕಾರಕ್ಕೆ ಬಿಟ್ಟಂಥ ವಿಚಾರ. ನಾವು ಈ ಸದನದಲ್ಲಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ. ಮೊದಲನೆಯದಾಗಿ ನಾನು ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ಈ ಕಂದಾಯ ಇಲಾಖೆಗೆ ಸಂಬಂಧಪಟ್ಟ ಒಂದು ವಿಚಾರ. ನನಗನ್ನಿಸುತ್ತದೆ, ಈ ಏಳು ಹೊಸ ಜಿಲ್ಲೆಗಳನ್ನು ಮಾನ್ಯ ಜೆ.ಹೆಚ್ ಪಟೇಲ್‌ರವರ ಸರ್ಕಾರ ಇದ್ದಂಥ ಕಾಲದಲ್ಲಿ ರಚನೆ ಮಾಡಿದರು. ನನಗಾದರೂ ಅನಿಸುತ್ತಿದೆ, ಈ ಒಂದು ಚಾಮರಾಜನಗರ ಜಿಲ್ಲೆ ಹೊಸ ಜಿಲ್ಲೆಯಾಗಿ ಏಕಾದರೂ ರೂಪುಗೊಂಡಿತೋ, ಅದು ಮೈಸೂರಿನಲ್ಲಿಯೇ ಇದ್ದರೆ ಬಹಳ ಚೆನ್ನಾಗಿತ್ತೇನೋ ಎನ್ನುವ ಭಾವನೆ ನನಗಾದರೂ ಬರುತ್ತಿದೆ. ಕಾರಣವಿಷ್ಟೆ. ಸುಮಾರು ನಾಲ್ಕು ವರ್ಷಗಳು ಕಳೆದರೂ ಸಹ ಹೊಸ ಜಿಲ್ಲೆಗಳಾಗಿ ಆದರಲ್ಲೂ ಕೂಡ ನಮ್ಮ ಚಾಮರಾಜನಗರ ಜಿಲ್ಲೆಗೆ ಯಾವುದೇ ಒಂದು ಇನ್‌ಫ್ರಾಸ್ಟ್ರಕ್ಚರ್‌ನ್ನು ಕೊಡಲಿಲ್ಲ. ಬಹಳ ನೋವಾಗುತ್ತದೆ. ಯಾವುದೇ ಒಂದು ಕಛೇರಿಗಳನ್ನು ಪ್ರಾರಂಭ ಮಾಡುವುದಕ್ಕೆ ಜಿಲ್ಲಾ ಸಂಕೀರ್ಣವನ್ನು ಮಾಡತಕ್ಕದ್ದಕ್ಕೆ ಹಣ ಬಿಡುಗಡೆಯಾಗಲಿಲ್ಲ. ಕಟ್ಟಡಗಳು ಬರತಕ್ಕದು ಆಗಲಿಲ್ಲ. ಬರೀ ಅಧಿಕಾರಿಗಳು ಬಂದಿದ್ದಾರೆ. ಹಿಂದೆ ತಾಲ್ಲೂಕು ಯಾವ ಮಟ್ಟದಲ್ಲಿತ್ತೋ ಅದೇ ಮಟ್ಟದಲ್ಲಿ ಇವತ್ತಿಗೂ ಕೂಡ ಜಿಲ್ಲೆಯಾಗಿ ನಾಲ್ಕು ವರ್ಷವಾದರೂ ಹಾಗೇಯೇ ಮುಂದುವರಿಯುತ್ತಿದೆ. ಆದಕ್ಕಾಗಿ ನಾನು ಮಾನ್ಯ ಕೃಷ್ಣಾರವರ ಸರ್ಕಾರಕ್ಕೆ ಈ ಸಂದರ್ಭದಲ್ಲಿ ನಾನು ಮನವಿ ಮಾಡತಕ್ಕದ್ದು ಏನೆಂದರೆ ತಾವು ಈ ಬಜೆಟ್‌ನಲ್ಲಿ ಹೊಸ ಜಿಲ್ಲೆಗಳಿಗೆ ಒತ್ತನ್ನು ಕೊಡತಕ್ಕ ಪ್ರಯತ್ನವನ್ನು ತಾವು ಮಾಡಬೇಕು. ತಮಗೆ ಒಳ್ಳೆಯ ಹೆಸರು ಬರುತ್ತದೆ. ಬಹುಶ: ನಾನು ಇಲ್ಲಿ ಹೇಳತಕ್ಕದ್ದು ಎಸ್.ಎಂ. ಕೃಷ್ಣಾ ಅವರು, ಅವರ ಮಂತ್ರಿ ಮಂಡಲ ಎಷ್ಟು ವರ್ಷಗಳ ಕಾಲ ಈ ಕರ್ನಾಟಕ ರಾಜ್ಯವನ್ನು ಆಳಿತೋ ಎನ್ನುವುದು ಬಹಳ ಮುಖ್ಯವಲ್ಲ. ಎಷ್ಟು ವರ್ಷಗಳ ಕಾಲ ಆಳಿತೋ ಆಳುವಂಥ ಕಾಲದಲ್ಲಿ ಯಾವ ರೀತಿ ಜನರಿಗೆ ಕೆಲಸವನ್ನು ಮಾಡಿತು, ಜನರಿಗೆ ಹೇಗೆ ಸ್ಪಂದಿಸಿತು, ಅದು ಮುಖ್ಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಆದಕ್ಕಾಗಿ ನಿಮ್ಮ ಜಿಲ್ಲೆಗೆ ಹೊಸದಾಗಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ನಮ್ಮ ಪೋಲೀಸ್ ಇಲಾಖೆಯಿಂದ ಕೊಡುತ್ತಿದ್ದೇವೆ. ಎಸ್‌ಪಿ ಆಫೀಸ್ ಕಟ್ಟಿಸುವುದಕ್ಕೆ ಡಿವೈಎಸ್‌ಪಿ ಆಫೀಸ್ ಕಟ್ಟಿಸುವುದಕ್ಕೆ. ಲೀಡರ್‌ಗಳು, ಮಂತ್ರಿಗಳು ಬರುವುದಿಲ್ಲವೆನ್ನುತ್ತೀರಿ. ಏಕೋ ನಿಮ್ಮೂರಿಗೆ ಮತ್ತು ನಮ್ಮ ಮುಂಡರಗಿಗೆ ಹೋಗುವುದಿಲ್ಲ. ಸಿಂಧ್ಯಾರವರ ಕಾಲದಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಜೆ.ಹೆಚ್. ಪಟೇಲರು ಕೂಡ

ಹೋಗಲು ಹಿಂಜರಿದು ಎಂ.ಎಂ. ಹಿಲ್‌ನಿಂದಲೇ ವಾಪಸ್ ಬಂದರು. ಅದಕ್ಕೆ ಏನಾದರೂ ಮಾಡಿಸಿ ನಿಮ್ಮೂರಿಗೆ ಬರುವ ಹಾಗಿ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೇ, ನೀವು ಎರಡೂ ಕಡೆಗೂ ಬನ್ನಿ. ನೀವು ಮುಖ್ಯಮಂತ್ರಿಯಾಗುತ್ತೀರಿ. ಗೃಹಮಂತ್ರಿಗಳು ನೀವು ಚಾಮರಾಜನಗರ ಮತ್ತು ಮುಂಡರಗಿಗೆ ಬನ್ನಿ. ಬೇಕಾದರೆ ಇವತ್ತು ಗಾಂಧಿಫೋಟೋ ಮುಂದೆ ಹೇಳುತ್ತೇನೆ, ನೀವು ಮುಂದೆ ಮಖ್ಯಮಂತ್ರಿಯಾಗುತ್ತೀರಿ.

ಶ್ರೀ ಸಿ. ಗುರುಸ್ವಾಮಿ :— ಧನ್ಯವಾದಗಳು. ಮಾನ್ಯ ಖರ್ಗೆಯವರು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಇನ್ನೂ ಕೂಡ ಅದು ನಮಗೆ ಬಂದು ತಲುಪಿಲ್ಲ. ಬರುತ್ತದೆ ಎನ್ನುವ ನಂಬಿಕೆ ನನಗಿದೆ. ಅಲ್ಲಿ ಯಾವುದೇ ಹಣವನ್ನು ಕೊಟ್ಟಿಲ್ಲ. ಯಾವುದೇ ಬಿಲ್ಡಿಂಗ್ ಕೂಡ ಬಂದಿಲ್ಲ. ಇದುವರೆಗೂ ಪ್ರಾರಂಭವಾಗಿಲ್ಲ. ಇನ್ನು ಒಂದು ಹೊಸ ಜಿಲ್ಲೆಯಲ್ಲಿ ತಮಗೆ ಗೊತ್ತಿರುವ ರೀತಿಯಲ್ಲಿ ಜಿಲ್ಲೆಯನ್ನು ಮಾಡುವುದು ದೊಡ್ಡದಲ್ಲ. ಅದಕ್ಕೇನು ಸವಲತ್ತುಗಳು ಬೇಕೋ ಅವುಗಳನ್ನು ಇಮ್ಮೀಡಿಯೇಟ್ ಆಗಿ ಒದಗಿಸಬೇಕಾಗುತ್ತದೆ. ಯಾವಾಗಲೊ 10 ವರ್ಷಕ್ಕೋ 15 ವರ್ಷಕ್ಕೋ ಒದಗಿಸತಕ್ಕದ್ದಲ್ಲ. ಇಮ್ಮೀಡಿಯೇಟ್ ಆಗಿ ಒದಗಿಸುವ ಕೆಲಸವಾಗಬೇಕು. ನಮ್ಮಲ್ಲಿ ಕೋರ್ಟ್ ಕೂಡ ಓಪನ್ ಆಗಿಲ್ಲ. ಅಸಿಸ್ಟೆಂಟ್ ಕಮೀಷನರ್ ಆಫೀಸ್ ಜಿಲ್ಲಾ ಕೇಂದ್ರ ಚಾಮರಾಜನಗರುವಾಗಿದ್ದರೂ ಸಹ ನಾವು ಇವತ್ತು ಕೊಳ್ಳೇಗಾಲಕ್ಕೆ ಹೋಗಬೇಕಾಗಿದೆ. ಇನ್ನೂ ಕೂಡ ತಾಲ್ಲೂಕು ಲೆವೆಲ್ ಇದ್ದಂಥ ಜ್ಯೂನಿಯರ್ ಡಿವಿಜನ್ ಕೋರ್ಟ್ ಮಾತ್ರ ಇರತಕ್ಕಂಥದ್ದು ಸೀನಿಯರ್ ಡಿವಿಜನ್ ಕೋರ್ಟ್ ಆಗಲಿಲ್ಲ. ಡಿಸ್ಟ್ರಿಕ್ಟ್ ಕೋರ್ಟ್ ಆಗಲಿಲ್ಲ. ಸೆಷನ್ಸ್ ಕೋರ್ಟ್ ಆಗಲಿಲ್ಲ. ಇದೇ ರೀತಿ ಯಾವುದೇ ವಿಧವಾದ ಡೆವಲಪ್‌ಮೆಂಟ್ಸ್ ಕಿಂಚಿತ್ತೂ ಆಗಲಿಲ್ಲ. ಅದರಿಂದ ನಾನು ಬಹಳ ನೊಂದು ಹೇಳುತ್ತಿರುವುದು. ಮಾನ್ಯ ಮುಖ್ಯಮಂತ್ರಿಗಳವರು ಈ ಒಂದು ಬಜೆಟ್‌ನಲ್ಲಿ ಹೊಸ ಜಿಲ್ಲೆಗಳಿಗೆ ಅದರಲ್ಲೂ ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚು ಒತ್ತನ್ನು, ಹೆಚ್ಚು ಬಜೆಟನ್ನು ಕೊಡತಕ್ಕ ಕೆಲಸವನ್ನು ತಾವು ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲೆಗಳಿಗೂ ಪ್ರಗತಿಪರಿಶೀಲನಾ ಸಭೆಗಳನ್ನು ನಡೆಸುತ್ತಾ ಬರುತ್ತಿದ್ದಾರೆ. ಹೆಚ್ಚುಕಡಿಮೆ ರಾಜ್ಯದ ಬಹುತೇಕ ಜಿಲ್ಲೆಗಳು ಮುಗಿದಿವೆ. ಚಾಮರಾಜನಗರ ಜಿಲ್ಲೆಗೂ ಬಂದು ಅಲ್ಲಿ ಪ್ರಗತಿ ಪರಿಶೀಲನೆಯನ್ನು ಮಾಡಬೇಕು.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಉಪಾಧ್ಯಕ್ಷರೇ, ಇನ್ನೊಂದು ನಾನು ಹೇಳುವುದೇನೆಂದರೆ ಬಹುಶ: ಮಂತ್ರಿಮಂಡಲ ಎಂದರೆ ಒಬ್ಬರು ಇಬ್ಬರು ಕೆಟ್ಟವರು

ಇದ್ದೇ ಇರುತ್ತಾರೆ. ಅಥವಾ ಅಧಿಕಾರಿಗಳಾದರೂ ಒಬ್ಬರು ಇಬ್ಬರೂ ಕೆಟ್ಟವರು ಇದ್ದೇ ಇರುತ್ತಾರೆ. ಎಲ್ಲರೂ ಶುದ್ಧವಾಗಿರಲಿಕ್ಕೆ ಸಾಧ್ಯವಾಗುವುದಿಲ್ಲ. ಹೊಸ ಜಿಲ್ಲೆಗಳಿಗೆ ಡೈರೆಕ್ಟ್ ಐಪಿಎಸ್ ಆಗಿರುವ ಯಂಗ್ ಅಂಡ್ ಎನರ್ಜಿಟಿಕ್ ಐಎಎಸ್ ಆಫೀಸರ್‌ಗಳನ್ನು ಡಿಸಿ ಯಾಗೋ ಅಥವಾ ಎಸ್‌ಪಿಯಾಗಿ ಹಾಕಬೇಕು. ನಮ್ಮ ಚಾಮರಾಜನಗರದಲ್ಲಿ ಚರಣ್ ರೆಡ್ಡಿ ಎನ್ನುವ ಎಸ್‌ಪಿ ಇದ್ದರು. ಅವರ ಹೆಸರನ್ನು ಮತ್ತು ಅಣ್ಣೇಗೌಡರು ಹೇಳಲೇಬೇಕಾಗುತ್ತದೆ. ಒಳ್ಳೆಯ ದಕ್ಷ ಅಧಿಕಾರಿ. ಅವರ ಕಾಲದಲ್ಲಿ ಪೋಲೀಸ್ ಇಲಾಖೆಗೆ ನೇಮಕಾತಿಯನ್ನು ಮಾಡಿದರು ಇವತ್ತಿಗೂ ಕೂಡ ಆ ಹುಡುಗರನ್ನು ನೋಡುತ್ತಿದ್ದರೆ ನಿಜವಾಗಿಯೂ ಪೋಲೀಸ್ ಇಲಾಖೆಗೆ ಹೇಳಿ ಮಾಡಿಸಿದಂತೆ ಇದ್ದಾರೆ. ಅಂಥ ಸಿಬ್ಬಂದಿಯನ್ನು ಅವರು ನೇಮಕ ಮಾಡಿದರು. ನಾನು ಬಹಳ ಖುಷಿಪಡುತ್ತೇನೆ. ಆ ತರಹದ ದಕ್ಷ ಅಧಿಕಾರಿಗಳನ್ನು ತಾವು ಹಾಕಿದಾಗ ಹೊಸ ಜಿಲ್ಲೆಯ ಅಭಿವೃದ್ಧಿ ಆಗುವಂತಹ ದೃಷ್ಟಿಯಿಂದ ಬಹಳ ಅನುಕೂಲ ಆಗುತ್ತದೆ. ಇದನ್ನೂ ಕೂಡ ತಾವು ಮಾಡಬೇಕಾಗುತ್ತದೆ. ಮತ್ತು ಯೋಜನೆಗಳನ್ನು ರೂಪಿಸತಕ್ಕದ್ದು. ನಿಮ್ಮ ಬಜೆಟ್ ಆಗಲೀ ಅಥವಾ ಇಲಾಖೆಯ ಬೇಡಿಕೆ ಮೇಲೆ ಕೊಟ್ಟಿರತಕ್ಕಂಥ ಕಾರ್ಯಕ್ರಮವೇ ಆಗಲಿ ಅದನ್ನು ರೂಪಿಸಿಕೊಂಡ ಮೇಲೆ ಆ ಒಂದು ವರ್ಷದಲ್ಲಿ ಆ ಕಾರ್ಯಕ್ರಮಕ್ಕೆ ಏನೊಂದು ಸಂಪನ್ಮೂಲ ಬೇಕು, ಹಣ ಬೇಕು, ಅದನ್ನು ಒದಗಿಸಿಕೊಡತಕ್ಕದ್ದು ಆಗಬೇಕು. ಕಳೆದ ಸಾರಿ 15 ರಿಂದ 20 ಪರ್ಸೆಂಟ್ ಹಣ ಕಟ್ ಮಾಡಿದ್ದಾರೆ. ಅದು ನಮ್ಮ ಚಾಮರಾಜನಗರ ಜಿಲ್ಲೆಗೆ 15 ರಿಂದ 20 ಪರ್ಸೆಂಟ್ ಹಣ ಬರಲೇ ಇಲ್ಲ. ಇದು ಆಗಬಾರದು ಎಂದು ನನ್ನ ಒಂದು ಅನಿಸಿಕೆ.

ಇನ್ನು ತೋಟಗಾರಿಕೆ ವಿಚಾರ ಬಂದಾಗ ಈಗಾಗಲೇ ಸುಮಾರು ಜನ ಸದಸ್ಯರುಗಳು ಮಾತನಾಡಿದ್ದಾರೆ. ಈ ನುಸಿರೋಗದ ವಿಚಾರ ಮಾತನಾಡಿದ್ದಾರೆ. ಕಳೆದ ಸಾರಿ ನಾವು ಈ ನುಸಿರೋಗದ ಬಗ್ಗೆ ಸುಮಾರು 2-3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಬಜೆಟ್‌ನಲ್ಲಿ ಕೂಡ ತೋರಿಸಿದ್ದಾರೆ. ಆದರೆ ಫಲ ಏನು? ಸಾರ್ಥಕ ಏನು? ಇದರ ರಿಸಲ್ಟ್ ಏನು? ಜೀರೋ. ಏಕೆ ಇದು ಹೀಗಾಯಿತು? ವೈಜ್ಞಾನಿವಾಗಿ ಏನು ಔಷಧಿ ಕೊಡಬೇಕು ಎನ್ನತಕ್ಕ ಸಂಶೋಧನೆಯನ್ನೂ ಮಾಡದೇ ಸುಮ್ಮನೆ ಯಾವುದೋ ಒಂದು ಏಜೆನ್ಸಿಗೆ ಕೊಟ್ಟು ಔಷಧಿ ಸಿಂಪಡಿಸಿದ ಹಾಗೆ ಮಾಡಿದಾಗ ಸುಮ್ಮನೆ ಸರ್ಕಾರದ ಹಣ, ಸಾರ್ವಜನಿಕರ ಹಣ ಪೋಲಾಗಿರತಕ್ಕದ್ದನ್ನು ನಾವು ಗಮನಿಸುತ್ತೇವೆ. ಈ ವರ್ಷವೂ ಕೂಡ ಸುಮಾರು ಹಣವನ್ನು ಅದಕ್ಕೆ ಇಟ್ಟುಕೊಂಡಿದ್ದೀರಿ. ಸುಮ್ಮನೆ ಇಟ್ಟುಕೊಂಡು ವೇಸ್ಟ್ ಆಗುವುದು ಏಕೆ? ಅದರಿಂದ ರೈತರ ಸಂಕಟ ಇವತ್ತು ಬಹಳ ಇದೆ. ಇವತ್ತು ಎಲ್ಲಾ 17-18 ಜಿಲ್ಲೆಗಳಲ್ಲಿ ಕೂಡ ತೆಂಗು ಬೆಳೆಗಾರರು ಬಹಳ ಕಷ್ಟದಲ್ಲಿದ್ದಾರೆ. ಸುಮಾರು ಜನರು ಇದರ ಬಗ್ಗೆ ಕಾಳಜಿಯನ್ನು ವ್ಯಕ್ತಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಸದಸ್ಯರೂ ಕೂಡ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಎಲ್ಲಾ ಕಡೆಯೂ ಧರಣಿ ನಡೆಯುತ್ತಿದೆ. ಎಲ್ಲಾ ಕಡೆಯು ಎಕ್ಸೈಜ್‌ನವರು

ಗೂಂಡಾಗಳನ್ನು ಕರೆದುಕೊಂಡು ರೈತರನ್ನು ಹಿಂಸೆ ಮಾಡುತ್ತಿರತಕ್ಕದನ್ನು ನಾವು ನೋಡುತ್ತಿದ್ದೇವೆ. ನುಸಿರೋಗ ಕಂಟ್ರೋಲ್ ಆಗಲಿಲ್ಲ. ರೈತರು ಮತ್ತಿನ್ನೇನು ಮಾಡಬೇಕು? ಎಳನೀರನ್ನು ಕಿತ್ತು ಎಳನೀರನ್ನು ಮಾರಿ ಕಾಸು ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ. ತೆಂಗಿನಕಾಯಿ ಕಿತ್ತು, ತೆಂಗಿನಕಾಯಿ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ. ಇನ್ನು ತೆಂಗಿನ ಮರ ಇಟ್ಟುಕೊಂಡು ಫಲ ಇದ್ದೇನು ಪ್ರಯೋಜನ? ಅವರು ಬದುಕುವುದು ಹೇಗೆ? ಇನ್ನುಳಿದಿರತಕ್ಕದ್ದು ಏನು ಎಂದರೆ ನೀರಾ ಇಳಿಸುವುದಕ್ಕೆ ಒಂದು ಪರ್ಮಿಷನ್ ಕೊಡಿ ಎಂದು ಕೇಳುವುದು. ಇವತ್ತೂ ಕೂಡ ನನ್ನ ಜಿಲ್ಲೆಯಲ್ಲಿ ನನ್ನ ಆದಿಯಾಗಿ ಹಲವಾರು ಜನ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟಿದ್ದೇವೆ. ನೀವು ನೀರಾ ಇಳಿಸುವುದಕ್ಕೆ ರೈತರಿಗೆ ಪರ್ಮಿಷನ್ ಕೊಡಿ ಎಂದು ಕೇಳಿದ್ದೇವೆ. ಬಹಳ ಸಂಕಟ ಇದೆ, ಬಹಳ ಕಷ್ಟ ಇದೆ ಎಂದು ಹೇಳಿ ಅರ್ಜಿ ಕೊಟ್ಟು ಸುಮಾರು ನಾಲ್ಕು ತಿಂಗಳ ಮೇಲೆ ಆಯಿತು. ಇದಕ್ಕೆ ಉತ್ತರ ಬರಲಿಲ್ಲ. ಇದಕ್ಕೆ ಕಾನೂನು ಬದ್ಧವಾಗಿ ಕೂಡುವುದಕ್ಕೆ ಬರುವುದಿಲ್ಲ ಎಂತಲೂ ಹೇಳುವುದಿಲ್ಲ. ಇದಕ್ಕೆ ಕೊಡಬಹುದೂ ಎಂತಲೂ ಹೇಳುವುದಿಲ್ಲ. ಯಾವುದೇ ವಿಧವಾದ ಪ್ರತಿಕ್ರಿಯೆ ರೂಪದಲ್ಲಿ ಒಂದು ಎಂಡಾರ್ಸ್‌ಮೆಂಟನ್ನು ಕೂಡ ಇದುವರೆಗೆ ನಮಗೆ ಬರಲಿಲ್ಲ. ನೀರಾ ಇಳಿಸುವ ವಿಚಾರದಲ್ಲಿ ನಮಗೆ ಎಂಡಾರ್ಸ್‌ಮೆಂಟ್ ಬರಲಿಲ್ಲ. ಏನು ಇದರ ಅರ್ಥ? ನೀರಾ ಇಳಿಸತಕ್ಕದ್ದು ಅಪರಾಧವೇ? ಅದು ಯಾವ ಕಾಯಿದೆಯಲ್ಲಿ ಅಪರಾಧ ಎಂದು ಇದೆ? ಇದನ್ನು ಏಕೆ ಕೊಡಬಾರದು ಎಂದು ಹೇಳಿ ಅಟ್‌ಲೀಸ್ಟ್ ಒಂದು ಎಂಡಾರ್ಸ್‌ಮೆಂಟ್‌ನ್ನಾದರೂ ಕೊಡಬಹುದಾಗಿತ್ತು. ಅದನ್ನು ಕೊಡತಕ್ಕ ಪ್ರಯತ್ನ ಅವರು ಮಾಡಲಿಲ್ಲ. ಇವತ್ತು ರೈತರು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ನನ್ನ ಒತ್ತಾಯ ಎಂದರೆ ನಿಜವಾಗಲೂ ಇವತ್ತು ಎಕ್ಸೈಜ್ ಇಲಾಖೆಯವರು ಎಲ್ಲೆಲ್ಲಿಂದಲೋ ಗೂಂಡಾಗಳನ್ನು ಕರೆದುಕೊಂಡು ಬಂದು ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ, ರೈತರಿಗೆ ಹಿಂಸೆ ಕೊಡುತ್ತಿದ್ದಾರೆ. ಇದನ್ನೆಲ್ಲಾ ತಡೆಹಾಕಬೇಕು. ಸದನದಲ್ಲಿ ಮುಂದಿನ ವಿಚಾರ ತಾವು ಈ ವಿಚಾರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ನೀರಾ ಇಳಿಸುವ ಬಗ್ಗೆ ಈ ಒಂದು ಸದನದಲ್ಲಿ ಗಂಭೀರವಾದಂತಹ ಚರ್ಚೆ ಆಗಬೇಕು. ಸಾಧಕ ಬಾಧಕವನ್ನು ನೋಡಿ ಸರ್ಕಾರವನ್ನು ಒತ್ತಾಯ ಮಾಡುವಂತಹ ಕಾರ್ಯಕ್ರಮ ಇದೆ. ಈ ಮಧ್ಯೆ ಇರುವಾಗ ಯಾವುದೇ ವಿಧವಾದ ಸರ್ಕಾರದ ಆದೇಶ ಇಲ್ಲದೆ ಈ ಎಕ್ಸೈಜ್ ಅಧಿಕಾರಿಗಳು ರೈತರ ಮೇಲೆ ದಬ್ಬಾಳಿಕೆ ನಡೆಸುತ್ತಿರತಕ್ಕದ್ದನ್ನು ನಿಲ್ಲಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ನೀರಾ ಇಳಿಸುವುದರ ಬಗ್ಗೆ ಸಹ ಪರ್ಮಿಷನ್ ಕೊಡಬೇಕು ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೇಷ್ಮೆ ಇಲಾಖೆ ವಿಚಾರ. ಬಹುಶ: ಈ ಭಾಗದಲ್ಲಿ ತೆಂಗು ಹೋಗಿ ಬಿಟ್ಟರೆ, ನಮ್ಮಲ್ಲಿ ರೇಷ್ಮೆಯಿಂದ ನಿಜವಾಗಿಯೂ ಬಹಳ ಉಪಯೋಗ ಆಗತಕ್ಕದ್ದು. ಸುಮಾರು 70ರಿಂದ 80 ಪರ್ಸೆಂಟ್ ಜನ ಅದರಲ್ಲೂ ಚಾಮರಾಜನಗರ ಜಿಲ್ಲೆಯಲ್ಲಿ

ರೇಷ್ಮೆ ಬೇಸಾಯದಿಂದ ಜೀವನ ಸಾಗಿಸುತ್ತಿರತಕ್ಕ ಜನರನ್ನು ನಾವು ಕಾಣುತ್ತಿದ್ದೇವೆ. ಈಗ ಇದಕ್ಕೆ ಜಾಸ್ತಿ ಒತ್ತು ಕೊಡಬೇಕಾದಂತಹ ಪರಿಸ್ಥಿತಿ ಬಂದಿದೆ. ಆದರಿಂದ ಈ ಒಂದು ವಿಚಾರದಲ್ಲಿ ನಾನು ಅಧ್ಯಯನ ಮಾಡಿದ ರೀತಿಯಲ್ಲಿ ಒಟ್ಟಾರೆ ನಮ್ಮ ರಾಜ್ಯದಲ್ಲಿ 1994-95 ರಲ್ಲಿ 1,67,778 ಹೆಕ್ಟಾರ್ ರೇಷ್ಮೆ ಮಾಡತಕ್ಕಂಥ ಇದ್ದದ್ದು 2000-2001ರಲ್ಲಿ 1,12,557 ಹೆಕ್ಟೇರ್‌ವರೆಗೆ ಬೇಸಾಯ ಆಗತಕ್ಕದ್ದು. ಅಂದರೆ ಈ ಅವಧಿಯಲ್ಲಿ ಬೇಸಾಯ ಮಾಡತಕ್ಕಂಥಹ ಎಕ್ಸೆಂಟ್ ಇಳಿದಿರತಕ್ಕದ್ದು 55,221 ಹೆಕ್ಟೇರ್ ಇವತ್ತು ರೇಷ್ಮೆ ಕಡಿಮೆ ಆಗಿರತಕ್ಕದ್ದನ್ನು ನಾವು ಈ ಅಂಕಿ ಅಂಶದಲ್ಲಿ ಗಮನಿಸುತ್ತೇವೆ. ಏಕೆ ಹೀಗಾಯಿತು? ಏಕೆ ರೇಷ್ಮೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಅವಕಾಶ ಕೊಡುತ್ತಿಲ್ಲವೇ? ಇದರ ಬಗ್ಗೆ ನಾವು ಚಿಂತನೆ ಮಾಡಬೇಕಾದಂತಹ ಪರಿಸ್ಥಿತಿ ಇವತ್ತು ಇದೆ. ಒಂದು ಹೆಕ್ಟೇರ್‌ಗೆ ಬೇಸಾಯ ಕಡಿಮೆ ಆದ್ದರಿಂದ 55 ಸಾವಿರ ಹೆಕ್ಟೇರ್ ರೇಷ್ಮೆ ಬೇಸಾಯ ಕಡಿಮೆ ಆಯಿತು, ಆದರಿಂದ ಬಹುಶ: ಇವತ್ತು 6 ಲಕ್ಷ ಚಿಲ್ಲರೆ ಜನ ಈ ರೇಷ್ಮೆ ವ್ಯವಸಾಯ ಕಸುಬು ಇಲ್ಲದೇ ನಿರ್ಗತಿಕರಾಗಿರತಕ್ಕಂಥಹ ಒಂದು ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆದರಿಂದ ಆದರ ಬಗ್ಗೆಯೂ ಸಹ ಇವತ್ತು ಹೆಚ್ಚಿನ ಹಣವನ್ನು ಈ ಬಜೆಟ್‌ನಲ್ಲಿ ಕೊಡತಕ್ಕಂಥಹ ಪ್ರಯತ್ನವನ್ನೂ ಕೂಡ ಮಾಡಬೇಕಾಗಿದೆ. ಆಮೇಲೆ ಸಕಾಲದಲ್ಲಿ ರೇಷ್ಮೆ ಮೊಟ್ಟೆಗಳನ್ನು ಇವತ್ತು ಕೊಡುತ್ತಿಲ್ಲ. ಇವತ್ತು ಚಾಕಿ ಕೇಂದ್ರಗಳು ಇವೆ, ಸಿಲ್ಕ್ ಫಾರ್ಮ್ಸ್ ಇದೆ. ಇವತ್ತು ರಾಜ್ಯದಲ್ಲಿ ಹಲವಾರು ಸಿಲ್ಕ್ ಫಾರ್ಮ್ಸ್‌ಗಳಿವೆ. ಆದರೆ ಪ್ರಯೋಜನ ಆಗುತ್ತಿಲ್ಲ. ಏಕೆ ಪ್ರಯೋಜನ ಆಗುತ್ತಿಲ್ಲ ಎಂದರೆ ಎಲ್ಲಾ ಪೋಸ್ಟ್‌ಗಳು ಅಲ್ಲಿ ಖಾಲಿ ಇದ್ದಾರೆ. ಆದನ್ನು ಭರ್ತಿ ಮಾಡಬೇಕು. ಆದನ್ನು ಭರ್ತಿ ಮಾಡಿದಾಗ ಮಾತ್ರ ಸಿಲ್ಕ್ ಫಾರ್ಮ್ಸ್ ಸಮರ್ಪಕವಾಗಿ ಕೆಲಸ ಮಾಡಲಿಕ್ಕೆ ಅನುಕೂಲ ಆಗುತ್ತದೆ. ಆ ಜನರಿಗೆ ಅನುಕೂಲ ಆಗುತ್ತದೆ. ಆದರಿಂದ ದಯಮಾಡಿ ನಾನು ಒತ್ತು ಕೊಡತಕ್ಕದ್ದು ಈ ಏನು ಸಿಲ್ಕ್ ಫಾರ್ಮ್ಸ್‌ಗಳಲ್ಲಿ ಖಾಲಿ ಹುದ್ದೆಗಳು ಏನು ಇವೆ ಆ ಖಾಲಿ ಹುದ್ದೆಗಳನ್ನು ತುಂಬುವುದರ ಮುಖಾಂತರ ಆ ಒಂದು ರೇಷ್ಮೆ ಉತ್ಪನ್ನ ಹೆಚ್ಚು ಮಾಡಲಿಕ್ಕೋಸ್ಕರ ಪ್ರಯತ್ನ ಮಾಡಬೇಕು ಎಂದು ನನ್ನ ಒಂದು ಡಿಮ್ಯಾಂಡ್ ಆಗಿದೆ. ಈ ಒಂದು ಬಜೆಟ್‌ನಲ್ಲಿ ಏನೂ ಪ್ರಾವಿಜನ್ ಆದಕ್ಕೆ ಮಾಡಲಿಲ್ಲ. ಆಮೇಲೆ ಅಂತರ್ಜಲ ಕೂಡ ಕಡಿಮೆ ಆಗಿರತಕ್ಕದ್ದು. ಈ ರೇಷ್ಮೆ ಮಾಡಬೇಕು ಎಂದರೆ ಡ್ರಿಪ್ ಇರಿಗೇಷನ್‌ಗೆ ಈ ರೇಷ್ಮೆ ಇಲಾಕೆಯಲ್ಲಿ ಒತ್ತು ಕೊಡತಕ್ಕದ್ದು ಬಹಳ ಅವಶ್ಯಕತೆ ಇದೆ. ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲು ನಾನು ಇಷ್ಟಪಡುತ್ತೇನೆ.

ಇನ್ನು ಒಂದು ವಿಚಾರ ಕೊನೆಯದಾಗಿ ಹೇಳುತ್ತೇನೆ. ಪಂಚಾಯಿತಿ ಕಾರ್ಯದರ್ಶಿಗಳ ಬಗ್ಗೆ ಸಂಬಂಧಪಟ್ಟ ಇಲಾಖೆ ಮಾಹಿತಿಯನ್ನು ಕೊಡಲು ನಾನು ಇಚ್ಛಿಪಡುತ್ತೇನೆ. ಈಗ ನಾವು ಆಶ್ರಯ ಸಮಿತಿಗಳು ಎಂದು ಮಾಡಿಕೊಂಡಿದ್ದೇವೆ. ಆದಕ್ಕೆ ಶಾಸಕರುಗಳೇ ಅಧ್ಯಕ್ಷರಾಗಿರುವುದು. ತಾವು ಇದರಲ್ಲಿ ಏನು ಮಾಡುತ್ತೀರಿ ಎಂದರೆ ಈ ಫಲಾನುಭವಿಗಳ

ಪಟ್ಟಿ ಗ್ರಾಮ ಸಭೆ ನಡೆಸಿ ಗ್ರಾಮ ಪಂಚಾಯತಿಯಿಂದ ನಮ್ಮ ಆಶ್ರಯ ಸಮಿತಿಗೆ ಕಳುಹಿಸಿಕೊಡತಕ್ಕದ್ದು. ಈ ಗ್ರಾಮ ಸಭೆಕೊಟ್ಟಂತಹ ಫಲಾನುಭವಿಗಳ ಪಟ್ಟಿಯಲ್ಲಿ ಬೆನಿಫಿಷರೀಸನ್ನು ರೇಷಿಯೋ ಬೇಸಿಸ್ ಮೇಲೆ ಮಾಡುತ್ತಾರೆ. ಎಸ್‌ಸಿ : ಎಸ್‌ಟಿ ಬಿಸಿಎಂ. ಲೇಡೀಸ್ ಹ್ಯಾಂಡಿಕ್ಯಾಪ್ ಇದಕ್ಕೆಲ್ಲಾ ಆಯ್ಕೆ ಮಾಡತಕ್ಕಂಥಹ ಪವರ್ ನಮಗೆ ಇದೆ. ನಾವೇನೋ ಒಂದು ಸಾವಿರ ಮನೆಗಳನ್ನು ನಮ್ಮ ಕ್ಷೇತ್ರದಲ್ಲಿ ಆಯ್ಕೆ ಮಾಡಿ ಚಾಲನೆ ಕೊಟ್ಟಿದ್ದೇವೆ. ನಾವು ಚಾಲನೆ ಕೊಟ್ಟ ಮೇಲೆ ಏನಾಗುತ್ತದೆ ಎಂದರೆ ಯಾವ ಗ್ರಾಮ ಪಂಚಾಯಿತಿಯವರು, ಯಾವ ಸೆಕ್ರೆಟರಿ ಅಥವಾ ಛೇರ್ಮನ್ ಗ್ರಾಮಸಭೆ ನಡೆಸಿ ಪಟ್ಟಿ ಕೊಟ್ಟಿರುತ್ತಾನೋ, ಆ ಪಟ್ಟಿಯನ್ನು ಕೊಟ್ಟು ನಾವು ಆಯ್ಕೆ ಮಾಡಿದ ನಂತರ ಅದೇ ಸೆಕ್ರೆಟರಿ, ಅದೇ ಗ್ರಾಮ ಪಂಚಾಯತಿಯ ಅಧ್ಯಕ್ಷರು ನಮಗೆ ಪತ್ರ ಬರೆಯುತ್ತಾರೆ. ಏನು ಪತ್ರ ಬರೆಯುತ್ತಾರೆ ಎಂದರೆ ಇವರಿಗೆ ಗ್ರಾಮದಲ್ಲಿ ಸೈಟ್ ಇರುವುದಿಲ್ಲ. ಆದ್ದರಿಂದ ಬದಲಾವಣೆ ಮಾಡಿ ಎಂದು ಪತ್ರ ಕೊಡುತ್ತಾರೆ. ಮತ್ತೆ ಇವರಿಗೆ ಈ ಹಿಂದೆ ಅಂಬೇಡ್ಕರ್ ಯೋಜನೆಯಲ್ಲಿ, ಆಶ್ರಯ ಯೋಜನೆಯಲ್ಲಿ ಮನೆ ಆಗಿರುತ್ತದೆ. ಆದ್ದರಿಂದ ಬೇರೆಯವರಿಗೆ ಬದಲಾವಣೆ ಮಾಡಿ ಎಂದು ಪತ್ರ ಕೊಡುತ್ತಾರೆ. ಇದು ಹಲವಾರು ಪ್ರಕರಣದಲ್ಲಿ ಆಗಿದೆ. ಈ ಬಗ್ಗೆ ನಾನು ನೂರಾರು ಪ್ರಕರಣಗಳನ್ನು ನನ್ನ ಕ್ಷೇತ್ರದಲ್ಲಿ ನೋಡಿರತಕ್ಕದ್ದು, ನಾನು ಏಕೆ ಈ ವಿಚಾರದಲ್ಲಿ ಒತ್ತು ಕೊಡುತ್ತಿದ್ದೇನೆ ಎಂದರೆ ಇವರು ಈ ಕೆಲಸ ಮಾಡುವುದರಿಂದ ನಾವು ಸಮರ್ಪಕವಾಗಿ ನಾವೇನು ಸವಲತ್ತುಗಳನ್ನು ಮುಟ್ಟಿಸಬೇಕೋ ಅದನ್ನು ಮುಟ್ಟಿಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಈ ಕಾರ್ಯದರ್ಶಿ ಇರಬಹುದು ಅಥವಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಇರಬಹುದು, ಇವರ ಮೇಲೆ ಒಂದು ಸ್ಟ್ರಿಕ್ಟಾಗಿ ಕಾನೂನು ಮಾಡತಕ್ಕದ್ದು, ಸ್ಟ್ರಿಕ್ಟಾಗಿ ಅದನ್ನು ಜಾರಿಗೊಳಿಸತಕ್ಕದ್ದು ಈ ದಿಸೆಯಲ್ಲಿ ಪ್ರಯತ್ನ ಆಗಬೇಕು ಎಂದು ನನ್ನ ಮನವಿ. ತಾವು ಬೆಲ್ ಹೊಡೆಯುತ್ತಲೇ ಇದ್ದೀರಿ. ಸಮಯವೂ ಆರೂವರೆ ಆಗಿದೆ. ನಾನು ನಿಮಗೆ ತೊಂದರೆ ಕೊಡಲು ಹೋಗುವುದಿಲ್ಲ. ಇನ್ನೂ ಹಲವಾರು ವಿಚಾರಗಳೂ ಕೂಡ ಇದೆ. ಮುಂದೆ ಸಭೆ ಬಂದಾಗ ನಮಗೆ ಹೆಚ್ಚಿನ ಒಂದು ಅವಕಾಶವನ್ನು ಕೊಡಬೇಕು ಎನ್ನತಕ್ಕ ಮನವಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡುತ್ತೇನೆ. ಮತ್ತೆ ತಾವು ಬೆಲ್ ಹೊಡೆದಿದ್ದಕ್ಕೆ ನಾನು ಗೌರವ ಸಲ್ಲಿಸದೆ ಇದ್ದರೆ ಅದಕ್ಕೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ನಾನಂತೂ ಮತ್ತೆ ಮತ್ತೆ ಮುಂದುವರಿಯಲು ಇಷ್ಟಪಡುವುದಿಲ್ಲ. ಇಷ್ಟಾದರೂ ನನಗೆ ಮಾತನಾಡಲೂ ಅವಕಾಶ ಮಾಡಿಕೊಟ್ಟಿದ್ದೀರಿ. ಒಂದೆರಡು ವಿಚಾರಗಳನ್ನು ಮಾತ್ರ ನನಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಆಯಿತು. ಇನ್ನೂ ಹಲವಾರು ವಿಚಾರಗಳು ಇವೆ. ಮುಂದೆ ಸದನ ಸೇರಿದಾಗ ನನಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:— ಮಾನ್ಯ ಹಂಪನಗೌಡರು ಒಂದು ವಿಚಾರವನ್ನು ಮಾತನಾಡಬೇಕೆಂದು ಎರಡು ನಿಮಿಷ ಅವಕಾಶ ಕೇಳುತ್ತಿದ್ದಾರೆ. ಅವರು ಮಾತನಾಡಬಹುದು.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಉಪಾಧ್ಯಕ್ಷರೆ, ಮನೆಗೆ ಮೊದಲ ಮಗ ಆಗಬಾರದು. ಕೊನೆಯ ಭಾಷಣಕಾರ ಆಗಬಾರದು ಎಂಬ ಒಂದು ವಿಚಾರದಲ್ಲಿ ಇವತ್ತಿನ ದಿವಸ ನನಗೆ ಕೊನೆಯದಾಗಿ ಭಾಷಣ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಸಮಯದಾನವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಸೋಮವಾರ ಬೆಳಿಗ್ಗೆ 9.30ಕ್ಕೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು 6.30ಕ್ಕೆ ಮುಂದೂಡಲ್ಪಟ್ಟು ಮತ್ತೆ ಸೋಮವಾರ ದಿನಾಂಕ 30.07.2001ರಂದು ಬೆಳಿಗ್ಗೆ 9.30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಸರ್ಕಾರಿ ಶಾಖಾ ಮುದ್ರಣಾಲಯ, ಟಮಕ, ಕೋಲಾರ - ೫೬೩೧೦೧